ಮಂಗಳವಾರ, ಆಗಸ್ಟ್ 30, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 241 | ಪುಟ 14
• www.prajavani.net
/prajavani.net @prajavani /prajavani http://bit.ly/Prajavani



# ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಿಶೇಷ ಲೇಖನ 10

ಗೌರಿ ಹಬ್ಬದ ಶುಭಾಶಯಗಳು

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 57,973 | 17,312 | ₹52,850 (ಬೆಂಗಳೂರು) | ₹56,100 (ಬೆಂಗಳೂರು) | 79.94 |




ಬಾಲಕಿ ಸೇರಿ ಐದು ಮಂದಿ ಸಾವು • ಮದ್ದೂರು ಬಳಿಯೇ ಸಂಚಾರ ಬದಲಾವಣೆ

# ಮಹಾಮಳೆಗೆ ನಲುಗಿದ ಜನತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜಧಾನಿ ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಭಾನುವಾರ ರಾತ್ರಿಯಿಂದ ಸೋಮವಾರ ನಸುಕಿನವರೆಗೂ ಧಾರಾಕಾರ ಮಳೆಯಾಗಿದ್ದು, ಭಾರಿ ಪ್ರಮಾಣದಲ್ಲಿ ಹಾನಿಯಾಗಿದೆ.

ರಸ್ತೆಗಳು ಜಲಾವೃತವಾಗಿ ಗ್ರಾಮಗಳ ನಡುವೆ ಸಂಪರ್ಕ ಕಡಿತವಾಗಿದ್ದು, ಜನ–ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ. ಮಳೆ ಸಂಬಂಧಿಸಿದ ಅವಘಡಗಳಲ್ಲಿ ಬಾಲಕಿ ಸೇರಿ ಐದು ಮಂದಿ ಮೃತಪಟ್ಟಿದ್ದಾರೆ.

ರಾಮನಗರ ಜಿಲ್ಲೆಯ ಬಿಡದಿ ಹೋಬಳಿಯ ತೊರೆದೊಡ್ಡಿ ಗ್ರಾಮದಲ್ಲಿ ಕಾರಿನ ಮೇಲೆ ಬೃಹತ್ ಆಲದ ಮರ ಬಿದ್ದು ಇಟ್ಟಮಡು ನಿವಾಸಿ ಬೋರೇಗೌಡ (52) ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮಧುಗಿರಿಯಲ್ಲಿ ನಿವೃತ್ತ ಶಿಕ್ಷಕ ಗಂಗಾಧರಪ್ಪ (63) ರಸ್ತೆ ಗುಂಡಿಯಿಂದಾಗಿ ಬಿದ್ದು ಸಾವಿಗೀಡಾಗಿದ್ದಾರೆ.

ಹುಬ್ಬಳ್ಳಿ ತಾಲ್ಲೂಕಿನ ಇಂಗಳಹಳ್ಳಿ–ಕುಸುಗಲ್ ರಸ್ತೆ ಮೇಲೆ ತುಂಬಿ ಹರಿಯುತ್ತಿದ್ದ ಬೆಣ್ಣೆ ಹಳ್ಳ ದಾಟಲು ಮುಂದಾದ ನಾಲ್ವರು ಯುವಕರ ಪೈಕಿ, ಬ್ಯಾಹಟ್ಟಿಯ ಆನಂದ ಹಿರೇಗೌಡ್ರ ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೊಣ್ಣಹಳ್ಳಿಪುರ ಗ್ರಾಮದಲ್ಲಿ ಮನೆಯ ಗೋಡೆ ಕುಸಿದು ಬಸವರಾಜ (60) ಹಾಗೂ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಉದ್ಬಾಳ ಗ್ರಾಮದಲ್ಲಿ ಮನೆಯ ಗೋಡೆ ಕುಸಿದು ಮೂರು ವರ್ಷದ ಬಾಲಕಿ ಶ್ರೀದೇವಿ ಮೃತಪಟ್ಟಿದ್ದಾಳೆ.

ರಾಮನಗರ, ಚನ್ನಪಟ್ಟಣ ತಾಲ್ಲೂಕುಗಳಲ್ಲಿ ಕುಂಭದ್ರೋಣ ಮಳೆ ಸುರಿದಿದ್ದು, ಪಟ್ಟಣ ಭಾಗಶಃ ಜಲಾವೃತಗೊಂಡಿತ್ತು. ಭಕ್ಷಿಕೆರೆ ಕೋಡಿ ಪ್ರವಾಹದಂತೆ ಉಕ್ಕಿ ಹರಿದಿದ್ದು, ಮಧ್ಯಾಹ್ನದ ವೇಳೆಗೆ ಕೆರೆ ಏರಿಯೇ ಒಡೆದು ಅಪಾರ ಪ್ರಮಾಣದ ನೀರು ನಗರದತ್ತ ನುಗ್ಗಿತು.

5ನೇ ಪುಟ ನೋಡಿ



ಸೋಮವಾರ ಸುರಿದ ಭಾರಿ ಮಳೆಗೆ ರಾಮನಗರದ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ನೀರು ತುಂಬಿಕೊಂಡಿತ್ತು. ನೀರಿನಲ್ಲಿ ಸಿಲುಕಿಕೊಂಡಿದ್ದ ಕಾರೊಂದನ್ನು ಜನರು ತಳ್ಳಿಕೊಂಡು ಸಾಗಿದರು –ಪಿಟಿಐ ಚಿತ್ರ

## ಇಂದು ಶಾಲೆಗಳಿಗೆ ರಜೆ

**ಬೆಂಗಳೂರು:** ನಗರದಲ್ಲಿ ಮಂಗಳವಾರವೂ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಹಾಗಾಗಿ ಬೆಂಗಳೂರು ದಕ್ಷಿಣ ಶೈಕ್ಷಣಿಕ ಜಿಲ್ಲೆಯ ಎಲ್ಲ ಶಾಲೆಗಳಿಗೆ ಮಂಗಳವಾರ ರಜೆ ಘೋಷಿಸಲಾಗಿದೆ. 'ಮಕ್ಕಳ ಸುರಕ್ಷತೆಗಾಗಿ ರಜೆ ನೀಡಲಾಗಿದೆ' ಎಂದು ನಗರ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ತಿಳಿಸಿದ್ದಾರೆ.

ಭಾರಿ ಮಳೆಯಿಂದಾಗಿ ಚಾಮರಾಜನಗರ, ತುಮಕೂರು, ಮಂಡ್ಯ, ರಾಮನಗರ ಜಿಲ್ಲೆಗಳ ಶಾಲೆಗಳಿಗೆ ಸೋಮವಾರ ರಜೆ ಘೋಷಿಸಲಾಗಿತ್ತು. ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ವೆಂಕಟಾಪುರ ಮುಖ್ಯ ರಸ್ತೆಯಲ್ಲಿ‌ರುವ ಸೇತುವೆ ಮೇಲೆ ನೀರು ಹರಿಯುತ್ತಿದ್ದು, ಶಿಕ್ಷಕರು, ವಿದ್ಯಾರ್ಥಿಗಳಿಗೆ ಎರಡು ದಿನಗಳಿಂದ ಶಾಲೆಗೆ ಬರಲು ಸಾಧ್ಯವಾಗಿಲ್ಲ.

## ಅತಿವೃಷ್ಟಿ ಹಾನಿ ಪರಿಶೀಲಿಸಿದ ಸಿ.ಎಂ

**ರಾಮನಗರ:** ಜಿಲ್ಲೆಯಲ್ಲಿ ಅತಿವೃಷ್ಟಿಯಿಂದಾದ ಹಾನಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ವೀಕ್ಷಿಸಿದ್ದು, ಸಂತ್ರಸ್ತರಿಗೆ ಸಾಂತ್ವನ ಹೇಳಿದರು.

ಮೊದಲಿಗೆ ರಾಮನಗರದ ಬಸವನಪುರ ಬಳಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಅವೈಜ್ಞಾನಿಕ ಕಾಮಗಾರಿಯಿಂದಾದ ಹಾನಿಯನ್ನು ಪರಿಶೀಲಿಸಿದರು. ಬಳಿಕ ರಾಮನಗರದ ಭಕ್ಷಿಕೆರೆ ಪ್ರದೇಶಕ್ಕೆ ಭೇಟಿ ಕೊಟ್ಟು, ಅರ್ಧ ಕಿ.ಮೀ. ಉದ್ದಕ್ಕೆ ರೈಲು ಹಳಿ ಮೇಲೆ ನಡೆಯುತ್ತಲೇ ಅಧಿಕಾರಿಗಳಿಂದ ಮಾಹಿತಿ ಪಡೆದರು.

5ನೇ ಪುಟ ನೋಡಿ



ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ



ಶಿವಮೂರ್ತಿ ಮುರುಘಾ ಶರಣರು ಚಿತ್ರದುರ್ಗದ ಮುರುಘಾ ಮಠಕ್ಕೆ ಸೋಮವಾರ ಮಧ್ಯಾಹ್ನ ಮರಳಿದ ಸಂದರ್ಭ ಜಮಾಯಿಸಿದ್ದ ಭಕ್ತ ಸಮೂಹ –ಪ್ರಜಾವಾಣಿ ಚಿತ್ರ/ವಿ.ಚಂದ್ರಪ್ಪ

ಅಜ್ಞಾತ ಸ್ಥಳಕ್ಕೆ ಹೊರಟಿದ್ದ ಶರಣರ ಪ್ರಯಾಣಕ್ಕೆ ತಡೆ

# ಮುರುಘಾ ಶ್ರೀಗೆ ಬಂಧನ ಭೀತಿ

• ಜಿ.ಬಿ. ನಾಗರಾಜ್

**ಚಿತ್ರದುರ್ಗ:** ಪ್ರೌಢಶಾಲೆ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಗುರಿಯಾಗಿರುವ ಮುರುಘಾ ಮಠದ ಪೀಠಾಧ್ಯಕ್ಷ ಶಿವಮೂರ್ತಿ ಮುರುಘಾ ಶರಣರಿಗೆ ಬಂಧನದ ಭೀತಿ ಎದುರಾಗಿದೆ. ಇದರ ಬೆನ್ನಲ್ಲೇ ಶರಣರು ಜಿಲ್ಲಾ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ.

ಪ್ರಕರಣ ದಾಖಲಾದ ಬಳಿಕ ಎರಡು ದಿನ ಮಠದಲ್ಲೇ ತಂಗಿದ್ದ ಶರಣರು, ಸೋಮವಾರ ಬೆಳಿಗ್ಗೆ ದಿಢೀರ್ ಅಜ್ಞಾತ ಸ್ಥಳಕ್ಕೆ ತೆರಳಿದ್ದು ಹಲವು ಅನುಮಾನಗಳಿಗೆ ಎಡೆ‌ಮಾಡಿಕೊಟ್ಟಿತ್ತು. ಏಕಾಏಕಿ ಪ್ರತ್ಯಕ್ಷವಾಗಿ ಎಲ್ಲ ಊಹಾಪೋಹಗಳಿಗೆ ತೆರೆ ಎಳೆಯಲು ಪ್ರಯತ್ನಿಸಿದ ನಾಟಕೀಯ ಬೆಳವಣಿಗೆಗೆ ಮಠ ಸಾಕ್ಷಿಯಾಯಿತು. ಈ ಸಂದರ್ಭದಲ್ಲಿ ಅವರು, 'ನಾನು ಎಲ್ಲಿಗೂ ಪಲಾಯನ ಮಾಡುವುದಿಲ್ಲ. ಕಾನೂನು ಗೌರವಿಸುವೆ' ಎಂಬ ಸಂದೇಶ ರವಾನಿಸಿದರು.

ತನಿಖೆಯನ್ನು ಚುರುಗೊಳಿಸಿದ ಪೊಲೀಸರು ಸಂತ್ರಸ್ತ ಬಾಲಕಿಯರನ್ನು ಸಂಜೆ ಮಠಕ್ಕೆ ಕರೆತಂದು ಸ್ಥಳ ಮಹಜರು ನಡೆಸಿದರು. ಮಕ್ಕಳ ಹಕ್ಕು ರಕ್ಷಣಾ ಆಯೋಗ, ಜಿಲ್ಲಾ ಕಾನೂನು ಸೇವಾ ಆಯೋಗ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಮಕ್ಕಳನ್ನು ಭೇಟಿ ಮಾಡಿ ಧೈರ್ಯ ತುಂಬಿದರು. 'ಶಿವಮೂರ್ತಿ ಮುರುಘಾ ಶರಣರ ಬಂಧನ ವಿಳಂಬವಾಗುತ್ತಿದೆ' ಎಂದು ಆರೋಪಿಸಿ ಕೆಲವರು ಪ್ರತಿಭಟನೆ ನಡೆಸಿದರು.

5ನೇ ಪುಟ ನೋಡಿ



## ಪರಿಶಿಷ್ಟರ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ

ಲೈಂಗಿಕ ಕಿರುಕುಳದಿಂದ ಸಂತ್ರಸ್ತರಾಗಿರುವ ಬಾಲಕಿಯರಲ್ಲಿ ಒಬ್ಬರು ಪರಿಶಿಷ್ಟ ಸಮುದಾಯಕ್ಕೆ ಸೇರಿದವರಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

'ಮೈಸೂರಿನ ನಜರಬಾದ್ ಠಾಣೆಯಲ್ಲಿ ಲೈಂಗಿಕ ಕಿರುಕುಳ ಪ್ರಕರಣ ಮಾತ್ರ ದಾಖಲಾಗಿತ್ತು. ಸಂತ್ರಸ್ತ ಬಾಲಕಿಯರಲ್ಲಿ ಒಬ್ಬರು ದಲಿತ ಸಮುದಾಯಕ್ಕೆ ಸೇರಿದವರು ಎಂಬುದು ವಿಚಾರಣೆಯ ವೇಳೆ ದೃಢಪಟ್ಟಿತು. ಭಾನುವಾರ ರಾತ್ರಿ ಈ ಕಾಯ್ದೆಯಡಿಯೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಮೂಲಗಳು ಮಾಹಿತಿ ನೀಡಿವೆ.

## ನಿರೀಕ್ಷಣಾ ಜಾಮೀನಿಗೆ ಅರ್ಜಿ

ಬಂಧನ ಭೀತಿಯಲ್ಲಿರುವ ಶಿವಮೂರ್ತಿ ಮುರುಘಾ ಶರಣರು ನಿರೀಕ್ಷಣಾ ಜಾಮೀನು ಕೋರಿ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ನ್ಯಾಯಾಧೀಶರಾದ ಬಿ.ಕೆ. ಕೋಮಲಾ ಅವರು ರಜೆ ಮೇಲೆ ತೆರಳಿದ್ದ ಕಾರಣ ವಕೀಲರ ತಂಡ ಸಲ್ಲಿಸಿದ ಅರ್ಜಿಯನ್ನು ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಕಲ್ಕಣಿ ವಿಚಾರಣೆಗೆ ಕೈಗೆತ್ತಿಕೊಂಡರು. ತಕರಾರು ಸಲ್ಲಿಕೆಗೆ ಅವಕಾಶ ಕಲ್ಪಿಸಿ ವಿಚಾರಣೆಯನ್ನು ಸೆ.1ಕ್ಕೆ ಮುಂದೂಡಿದರು.




# ಜನೋತ್ಸವಕ್ಕೆ ತಿರುಗೇಟು: 'ಕೈ' ಜನಜಾಗೃತಿ

## ಬಿಜೆಪಿ ಸರ್ಕಾರದಿಂದ 'ಶೇ 90ರಷ್ಟು ವಚನ ವಂಚನೆ'– ಕಾಂಗ್ರೆಸ್ ಅಭಿಯಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಜೆಪಿ ಸರ್ಕಾರದ ಜನೋತ್ಸವದ ವಿರುದ್ಧ ಕಾಂಗ್ರೆಸ್ ಜನಜಾಗೃತಿ ಅಭಿಯಾನ ಆರಂಭಿಸಿದೆ. ಭರವಸೆಗಳನ್ನು ಈಡೇರಿಸದ ಬಿಜೆಪಿ ಸರ್ಕಾರ 'ಶೇ 90ರಷ್ಟು ವಚನ ವಂಚನೆ' ಎಸಗಿದೆ ಎಂದು ಆರೋಪಿಸಿ ಜನರ ಬಳಿಗೆ ತೆರಳಲು 'ಕೈ' ನಾಯಕರು ನಿರ್ಧರಿಸಿದ್ದಾರೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ಈ ಅಭಿಯಾನಕ್ಕೆ ಚಾಲನೆ ನೀಡಿದರು.

ಬಳಿಕ ಸುರ್ಜೇವಾಲಾ ಅವರು, 'ಬಿಜೆಪಿ ಸರ್ಕಾರ ಜನರಿಗೆ ದ್ರೋಹ ಬಗೆದಿದ್ದು, ಕೊಟ್ಟ ವಚನ ಈಡೇರಿಸಿಲ್ಲ. ಹೀಗಾಗಿ, ನಾವು 'ಬಿಜೆಪಿ, ನಿಮ್ಮ ಹತ್ತಿರ ಇದೆಯಾ ಉತ್ತರ' ಎಂಬ ಅಭಿಯಾನ ಕೈಗೊಂಡಿದ್ದೇವೆ' ಎಂದರು.



ಕಾಂಗ್ರೆಸ್ ಜನಜಾಗೃತಿ ಅಭಿಯಾನದ ಭಿತ್ತಿಪತ್ರವನ್ನು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ರಣದೀಪ್ ಸಿಂಗ್ ಸುರ್ಜೇವಾಲ ಮತ್ತು ಎಂ.ಬಿ. ಪಾಟೀಲ ಬಿಡುಗಡೆ ಮಾಡಿದರು – ಪ್ರಜಾವಾಣಿ ಚಿತ್ರ

'ಬಿಜೆಪಿ ಕಳೆದ ಚುನಾವಣೆ ಸಂದರ್ಭದಲ್ಲಿ ರಾಜ್ಯದ ಜನರಿಗೆ 600ಕ್ಕೂ ಹೆಚ್ಚು ಭರವಸೆ ನೀಡಿತ್ತು. ಆದರೆ, ಅವರು ಶೇ 90ರಷ್ಟನ್ನೂ ಈಡೇರಿಸಿಲ್ಲ. ಆ ಮೂಲಕ, ವಚನಭ್ರಷ್ಟ‌ವಾಗಿದೆ' ಎಂದು ದೂರಿದರು.

'ತನ್ನ ಆಡಳಿತ ಅವಧಿಯಲ್ಲಿ ಮಠಗಳಿಂದ ಶೇ 30ರಷ್ಟು, ಗುತ್ತಿಗೆದಾರರಿಂದ ಶೇ 40, ಪಕ್ಷದ ಕಾರ್ಯಕರ್ತರಿಂದ ಶೇ 60ರಷ್ಟು ಕಮಿಷನ್ ಪಡೆದಿರುವುದೇ ಈ ಸರ್ಕಾರದ ಸಾಧನೆ. ಇದು ಬಿಜೆಪಿಯ ಭ್ರಷ್ಟ ಹಾಗೂ ದುರಾಡಳಿತದ ಕೊಡುಗೆ. ರಾಜ್ಯ ರಾಜಕಾರಣದ ಇತಿಹಾಸದಲ್ಲೇ ಬೊಮ್ಮಾಯಿ ಅತ್ಯಂತ ಬಲಹೀನ ಮುಖ್ಯಮಂತ್ರಿ' ಎಂದು ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯ ಮಾತನಾಡಿ, '2013ರ ಚುನಾವಣೆ ವೇಳೆ ನಾವು ನೀಡಿದ್ದ 165 ಭರವಸೆಗಳಲ್ಲಿ 158 ಈಡೇರಿಸಿದ್ದೆವು. ಬಿಜೆಪಿಯವರು 2018ರ ಚುನಾವಣೆ ವೇಳೆ ಸುಮಾರು 600 ಭರವಸೆಗಳನ್ನು ನೀಡಿದ್ದರು. ಅಧಿಕಾರಕ್ಕೆ ಬಂದು ಮೂರು ವರ್ಷಗಳ ನಂತರ ಎಷ್ಟು ವಚನಗಳನ್ನು ಈಡೇರಿಸಿದ್ದಾರೆ ಎಂಬುದನ್ನು ಜನರೇ ಅರ್ಥ ಮಾಡಿಕೊಳ್ಳಬೇಕು' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, 'ಕಳೆದ ಚುನಾವಣೆಯ ಬಿಜೆಪಿ ಪ್ರಣಾಳಿಕೆಯನ್ನು ನಾವು ಜನರ ಮುಂದಿಡು‌ತ್ತಿದ್ದೇವೆ. ವಚನ ವಂಚನೆ ಕುರಿತು ಕಾಂಗ್ರೆಸ್ ಪಕ್ಷ ಇಂದಿನಿಂದ ಸರ್ಕಾರಕ್ಕೆ ಪ್ರಶ್ನೆ ಕೇಳುತ್ತಿದ್ದು, ಕೊಟ್ಟ ವಚನ ಉಳಿ‌ಸಿಕೊಂಡಿದ್ದೀರಾ ಎಂದು ಸಾಮಾಜಿಕ ಜಾಲತಾಣಗಳ ಮೂಲಕ ಕೇಳುತ್ತೇವೆ' ಎಂದರು.

7ನೇ ಪುಟ ನೋಡಿ



## ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಕಡ್ಡಾಯ

**ಬೆಂಗಳೂರು:** ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಏರಿಕೆಯಾಗುತ್ತಿರುವ ಕಾರಣದಿಂದ ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಕಡ್ಡಾಯಗೊಳಿಸಿ ಆರೋಗ್ಯ ಇಲಾಖೆ ಸೋಮವಾರ ಸುತ್ತೋಲೆ ಹೊರಡಿಸಿದೆ.

ಸರ್ಕಾರಿ ಹಾಗೂ ಖಾಸಗಿ ಕಚೇರಿಗಳು, ವಸತಿ ಸಮುಚ್ಚಯಗಳ ಸಾಮಾನ್ಯ ಪ್ರದೇಶಗಳು, ಛತ್ರಗಳು, ಚಿತ್ರ‌ಮಂದಿರಗಳು, ಶಾಪಿಂಗ್ ಮಾಲ್‌ಗಳು, ಬಸ್, ಮೆಟ್ರೊ ರೈಲು, ರೈಲುಗಳು ಮತ್ತು ಇತರ ಸಾಮಾನ್ಯ ಪ್ರದೇಶಗಳಲ್ಲಿ ಧರಿಸಬೇಕು. ಹೋಟೆಲ್, ಕ್ಲಬ್, ರೆಸ್ಟೋರೆಂಟ್, ಪಬ್, ಬಾರ್‌ಗಳಲ್ಲಿ ಆಹಾರ ಸೇವನೆ ಅವಧಿ ಹೊರತುಪಡಿಸಿ ಉಳಿದಂತೆ ಮಾಸ್ಕ್ ಧರಿಸಬೇಕು. ಶಿಕ್ಷಣ ಸಂಸ್ಥೆಗಳಲ್ಲಿ ಐದು ವರ್ಷಕ್ಕಿಂತ ಮೇಲಿನ ಮಕ್ಕಳು ಮಾಸ್ಕ್ ಧರಿಸಬೇಕು ಎಂದು ತಿಳಿಸಲಾಗಿದೆ.

ಗೌರಿ–ಗಣೇಶ ಹಬ್ಬ, ಓಣಂ, ಅನಂತ ಪದ್ಮನಾಭ ವ್ರತ, ವಿಶ್ವಕರ್ಮ ಜಯಂತಿ, ಮಹಾಲಯ ಅಮಾವಾಸ್ಯೆ ದಿನಗಳಂದು ಗುಂಪು ಸೇರದಂತೆ ತಡೆಯಬೇಕು. ಗಣೇಶೋತ್ಸವವನ್ನು ಹೊರಾಂಗಣದಲ್ಲಿ ಆಚರಿಸುವುದು ಸೂಕ್ತ. ಪ್ರವೇಶ ದ್ವಾರದಲ್ಲಿ ಥರ್ಮಲ್ ಸ್ಕ್ಯಾನಿಂಗ್ ವ್ಯವಸ್ಥೆ ಅಳವಡಿಸಬೇಕು. ಸ್ಯಾನಿಟೈಸರ್ ಒದಗಿಸಬೇಕು. ಒಳಾಂಗಣದಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಎಂದು ಸೂಚನೆ ನೀಡಲಾಗಿದೆ.

## ಚಿನಕುರಳಿ

ಪ್ರಕಾಶ್ ಶೆಟ್ಟಿ




# ಬಿಇಎಂಎಲ್ ಮಾರಾಟಕ್ಕೆ ಬಿಡ್ ಸಾಧ್ಯತೆ

**ನವದೆಹಲಿ (ಪಿಟಿಐ):** ಭಾರತ್ ಅರ್ತ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ಅನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆಯ ಭಾಗವಾಗಿ ಕೇಂದ್ರ ಸರ್ಕಾರವು ಡಿಸೆಂಬರ್ ತ್ರೈಮಾಸಿಕದಲ್ಲಿ ಹಣಕಾಸಿನ ಬಿಡ್ ಆಹ್ವಾನಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಬಿಇಎಂಎಲ್ ಲಿಮಿಟೆಡ್‌ನ ಭೂಮಿ ಮತ್ತು ಪ್ರಮುಖವಲ್ಲದ ಆಸ್ತಿಗಳನ್ನು ಪ್ರತ್ಯೇಕಿಸಿ ಬಿಇಎಂಎಲ್ ಲ್ಯಾಂಡ್ ಅಸೆಟ್ಸ್ ಲಿಮಿಟೆಡ್ ಅನ್ನು ರೂಪಿಸಲು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಈಗಾಗಲೇ ಒಪ್ಪಿಗೆ ನೀಡಿದೆ.

ಬಿಇಎಂಎಲ್‌ನ ಪ್ರತಿಯೊಬ್ಬ ಷೇರುದಾರರು ಬಿಇಎಂಎಲ್ ಲ್ಯಾಂಡ್ ಅಸೆಟ್ಸ್‌ನಲ್ಲಿ ಷೇರುಪಾಲು ಹೊಂದಲಿದ್ದಾರೆ. ಸೆಪ್ಟೆಂಬರ್ ಅಂತ್ಯದ ಒಳಗಾಗಿ ಅಥವಾ ಅಕ್ಟೋಬರ್ ತಿಂಗಳ ಆರಂಭದೊಳಗೆ ಪ್ರತ್ಯೇಕಿಸುವ ಕೆಲಸ ಪೂರ್ಣ‌ಗೊಳ್ಳಲಿದೆ. ಆ ಬಳಿಕ ಹಣಕಾಸಿನ ಬಿಡ್ ಆಹ್ವಾನಿಸಲಿದೆ ಎಂದು ಅವರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಬಿಇಎಂಎಲ್‌ನಲ್ಲಿ ಸದ್ಯ ಶೇ 54.03ರಷ್ಟು ಷೇರುಪಾಲು ಹೊಂದಿದೆ. ಕಂಪನಿಯ ಆಡಳಿತ ನಿರ್ವಹಣೆಯ ಅಧಿಕಾರದ ಜೊತೆಗೆ ಶೇಕಡ 26ರಷ್ಟು ಷೇರುಗಳನ್ನು ಖರೀದಿಸಲು ಆಸಕ್ತಿ ತೋರಿಸಿ ಪ್ರಾಥಮಿಕ ಬಿಡ್ ಸಲ್ಲಿಸುವಂತೆ ಕೇಂದ್ರ ಸರ್ಕಾರವು ಕಳೆದ ವರ್ಷದ ಜನವರಿಯಲ್ಲಿ ಆಹ್ವಾನಿಸಿತ್ತು. ಖರೀದಿಸುವ ಆಸಕ್ತಿ ವ್ಯಕ್ತಪಡಿಸಿ ಹಲವು ಬಿಡ್‌ಗಳು ಸಲ್ಲಿಕೆ ಆದ ಬಳಿಕ ಕಂಪನಿಯನ್ನು ವಿಭಜಿಸುವ ಪ್ರಕ್ರಿಯೆಯನ್ನು ಸರ್ಕಾರ ಆರಂಭಿಸಿದೆ.

ಸದ್ಯದ ಮಾರುಕಟ್ಟೆ ದರದ ಪ್ರಕಾರ, ಕೇಂದ್ರ ಸರ್ಕಾರವು ಬಿಇಎಂಎಲ್‌ನ ಶೇ 26ರಷ್ಟು ಷೇರುಗಳನ್ನು ಮಾರಾಟ ಮಾಡಿದರೆ ಸುಮಾರು ₹ 2 ಸಾವಿರ ಕೋಟಿ ಮೊತ್ತ ಸಿಗಲಿದೆ.

## ₹80.15ಕ್ಕೆ ಕುಸಿದಿದ್ದ ರೂಪಾಯಿ

**ಮುಂಬೈ (ಪಿಟಿಐ):** ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸೋಮವಾರ ಮಧ್ಯಂತರ ವಹಿವಾಟಿನಲ್ಲಿ ಸಾರ್ವಕಾಲಿಕ ಕನಿಷ್ಠ ಮಟ್ಟವಾದ ₹ 80.15ಕ್ಕೆ ಕುಸಿತ ಕಂಡಿತ್ತು. ಆ ಬಳಿಕ ಚೇತರಿಕೆ ಹಾದಿಗೆ ಮರಳಿ ₹ 79.91ರಲ್ಲಿ ವಹಿವಾಟು ಅಂತ್ಯವಾಯಿತು.

11

## ಕೆಇಎ ಸೀಟು ಹಂಚಿಕೆ ವಿಳಂಬ: ವಿದ್ಯಾರ್ಥಿಗಳಲ್ಲಿ ಆತಂಕ

**ಬೆಂಗಳೂರು:** ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಪಡೆದ ರ‍್ಯಾಂಕ್ ಆಧಾರದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಕ್ಕೆ ಸೀಟು ಹಂಚಿಕೆ ಇನ್ನೂ ಒಂದು ತಿಂಗಳು ವಿಳಂಬವಾಗುವ ಸಾಧ್ಯತೆ ಇದೆ. ಇದರಿಂದಾಗಿ, ಈ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯಲು ಕಾಯುತ್ತಿರುವ ಸಾವಿರಾರು ವಿದ್ಯಾರ್ಥಿಗಳು ಶೈಕ್ಷಣಿಕ ಅವಧಿ ಕಳೆದುಕೊಳ್ಳುವ ಆತಂಕ ಎದುರಿಸುತ್ತಿದ್ದಾರೆ.

ಖಾಸಗಿ ವಿಶ್ವವಿದ್ಯಾಲಯಗಳಲ್ಲಿರುವ ಎಂಜಿನಿಯರಿಂಗ್ ಕೋರ್ಸ್‌ಗಳ ಶೇ 40 ಸೀಟುಗಳ ಹಂಚಿಕೆಯನ್ನು ಸಿಇಟಿ ಮೂಲಕ ರಾಜ್ಯ ಸರ್ಕಾರ ಮಾಡುತ್ತಿದೆ. ಆದರೆ, ಈ ಪ್ರಕ್ರಿಯೆ ಇನ್ನೂ ಆರಂಭ ಆಗಿಲ್ಲ. ಆದರೆ, ಸೆಪ್ಟೆಂಬರ್ ಮೊದಲ ವಾರದಿಂದ ತರಗತಿಗಳನ್ನು ಆರಂಭಿಸಲು ಹಲವು ಖಾಸಗಿ ವಿಶ್ವವಿದ್ಯಾಲಯಗಳು ಉದ್ದೇಶಿಸಿದ್ದು ಈಗಾಗಲೇ ವೇಳಾಪಟ್ಟಿಯನ್ನು ಪ್ರಕಟಿಸಿವೆ.

22 ಖಾಸಗಿ ವಿಶ್ವವಿದ್ಯಾಲಯಗಳ ಪೈಕಿ, 14 ವಿಶ್ವವಿದ್ಯಾಲಯಗ‌ಳಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳಿವೆ. ಈ ಕಾಲೇಜುಗಳಿಗೆ ಸಿಇಟಿ ಮೂಲಕ ಆಗಬೇಕಿದ್ದ ಶೇ 40ರಷ್ಟು ಸೀಟುಗಳ ಭರ್ತಿಗೆ ಮೊದಲೇ ಮೊದಲೇ ಇಲ್ಲಿ ಪ್ರಸಕ್ತ ಸಾಲಿನ ಶೈಕ್ಷಣಿಕ ವೇಳಾಪಟ್ಟಿ ಪ್ರಕಟಿಸಿದ್ದು, ಕೆಲವು ವಿ.ವಿಗಳು ತರಗತಿಗಳನ್ನೂ ಆರಂಭಿಸಿವೆ.

'ನನ್ನ ಜೊತೆಗಿದ್ದ ಕೆಲವರು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ, ಅಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ ಬರೆದು ಪ್ರವೇಶ ಗಿಟ್ಟಿಸಿಕೊಂಡಿ‌ದ್ದಾರೆ. ಅವರೆಲ್ಲರಿಗೂ ಸೆಪ್ಟೆಂಬರ್ ಮೊದಲ ವಾರದಲ್ಲಿ ತರಗತಿಗಳು ಆರಂಭವಾಗಲಿದೆ. ನಾನು ಕೆಇಎ ರ‍್ಯಾಂಕ್ ಆಧಾರದಲ್ಲಿ ಖಾಸಗಿ ವಿಶ್ವವಿದ್ಯಾಲಯದಲ್ಲಿ ಸೀಟು ಪಡೆಯುವ ನಿರೀಕ್ಷೆ ಹೊಂದಿದ್ದೇನೆ. ಆದರೆ, ಕೆಇಎ ಸೀಟು ಹಂಚಿಕೆ ವಿಳಂಬ ಆಗುತ್ತಿರುವುದರಿಂದ ಪೂರ್ಣ ಶೈಕ್ಷಣಿಕ ಅವಧಿ ಸಿಗುವ ವಿಶ್ವಾಸ ಇಲ್ಲ' ಎಂದು ವಿದ್ಯಾರ್ಥಿ‌ಯೊಬ್ಬರು ಹೇಳಿದರು.

## ಹಾಲಿನ ದರ ಲೀಟರ್‌ಗೆ ₹3 ಹೆಚ್ಚಿಸಲು ಪ್ರಸ್ತಾವ

**ಬೆಂಗಳೂರು:** ಹಾಲಿನ ದರವನ್ನು ಪ್ರತಿ ಲೀಟರ್‌ಗೆ ₹3 ರಂತೆ ಹೆಚ್ಚಿಸುವಂತೆ ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.

'ಖಾಸಗಿಯಾಗಿ ಮಾರಾಟ ಮಾಡುವ ಹಾಲಿನ ದರಕ್ಕೆ ಹೋಲಿಸಿದರೆ ಕೆಎಂಎಫ್ ಹಾಲಿನ ದರ ಕಡಿಮೆ. ಹೀಗಾಗಿ, ದರ ಹೆಚ್ಚಿಸುವಂತೆ ಕೋರಲಾಗಿದೆ' ಎಂದು ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಸತೀಶ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ದರ ಹೆಚ್ಚಳದ ಬಗ್ಗೆ ಮುಖ್ಯಮಂತ್ರಿ ಅವರ ಜತೆ ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಚರ್ಚಿಸಿದ್ದಾರೆ. ಏರಿಕೆ ದರದ ಮೊತ್ತವನ್ನು ರೈತರಿಗೆ ವರ್ಗಾಯಿಸುವುದಾಗಿ ತಿಳಿಸಿದ್ದಾರೆ. ಮುಖ್ಯಮಂತ್ರಿ ಅವರು ಈ ಬಗ್ಗೆ ಪರಿಶೀಲಿಸುವುದಾಗಿ ಭರವಸೆ ನೀಡಿದ್ದಾರೆ' ಎಂದು ವಿವರಿಸಿದರು.

'ಕೆಎಂಎಫ್ ಒಂದು ಲೀಟರ್ ಹಾಲನ್ನು ₹37ಕ್ಕೆ ಮಾರಾಟ ಮಾಡುತ್ತಿದೆ. ಆದರೆ, ಖಾಸಗಿಯವರು ₹40ಕ್ಕೂ ಹೆಚ್ಚು ದರದಲ್ಲಿ ಮಾರಾಟ ಮಾಡುತ್ತಿದ್ದಾರೆ' ಎಂದು ತಿಳಿಸಿದರು.

'ರೈತರ ಪ್ರೋತ್ಸಾಹ ಧನದ ಎರಡನೇ ಕಂತು ₹1,250 ಕೋಟಿಯನ್ನು ಸರ್ಕಾರ ಬಿಡುಗಡೆ ಮಾಡಿದೆ. ಮೂರನೇ ಕಂತು ಶೀಘ್ರ ಬಿಡುಗ‌ಡೆಯಾಗಲಿದೆ. ನೇರವಾಗಿ ರೈತರ ಖಾತೆಗಳಿಗೆ ಹಣ ವರ್ಗಾವಣೆ ಆಗಲಿದೆ. 2019–20ರ ಬಾಕಿ ಪ್ರೋತ್ಸಾಹ ಧನವನ್ನೂ ಬಿಡುಗಡೆ ಮಾಡಲಾಗಿದೆ' ಎಂದು ವಿವರಿಸಿದರು.

ಹೂವಿನಹಡಗಲಿ: ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗೆ ಜೆಸ್ಕಾಂ ಎಇಇ

# ಗುತ್ತಿಗೆ ಆಧಾರದ ಮೇಲೆ ಇ.ಒ ನೇಮಕ!

• ಶಶಿಕಾಂತ ಎಸ್. ಶೆಂಬೆಳ್ಳಿ

ಪ್ರಜಾವಾಣಿ ವಿಶೇಷ

**ಹೊಸಪೇಟೆ (ವಿಜಯನಗರ):** ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕು ಪಂಚಾಯಿತಿಗೆ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಾಹಕ ಅಧಿಕಾರಿಯನ್ನು (ಇ.ಒ) ನೇಮಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಆದೇಶ ಹೊರಡಿಸಿದೆ. ತಾಲ್ಲೂಕೊಂದರ ಪ್ರಮುಖ ಹುದ್ದೆಗೆ ಒಪ್ಪಂದದ ಮೇಲೆ ಅಧಿಕಾರಿಯನ್ನು ನೇಮಕ ಮಾಡಿದ್ದು ಇದೇ ಮೊದಲು ಎನ್ನಲಾಗಿದ್ದು, ಸರ್ಕಾರದ ಈ ಕ್ರಮಕ್ಕೆ ತೀವ್ರ ಟೀಕೆ ವ್ಯಕ್ತವಾಗಿದೆ.

ಜಿಲ್ಲೆಯ ಹಗರಿಬೊಮ್ಮನಹಳ್ಳಿ ಜೆಸ್ಕಾಂ ಗ್ರಾಮೀಣ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಎಸ್.ಎಸ್. ಪ್ರಕಾಶ್ ಅವರನ್ನು ಹಡಗಲಿ ತಾಲ್ಲೂಕು ಪಂಚಾಯಿತಿ ಕಾರ್ಯ‌ನಿರ್ವಾಹಕ ಅಧಿಕಾರಿಯಾಗಿ ನೇಮಿಸಿ ಆ. 25ರಂದು ಸರ್ಕಾರ ಆದೇಶ ಹೊರಡಿಸಿದೆ. ಪ್ರಕಾಶ್ ಅವರು ಇನ್ನಷ್ಟೇ ಅಧಿಕಾರ ಸ್ವೀಕರಿಸಬೇಕು. ಸರ್ಕಾರದ ಆದೇಶ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

> **ತಾಲ್ಲೂಕಿಗೆ ಸಂಬಂಧಿಸಿದಂತೆ 29 ಇಲಾಖೆಗಳ ಮೇಲ್ವಿಚಾರಣೆ ಮಾಡುವ ಪ್ರಮುಖ ಹುದ್ದೆಗೆ ಗುತ್ತಿಗೆ ಆಧಾರದ ಜೆಸ್ಕಾಂ ಎಇಇ ನೇಮಕ ಮಾಡಿರುವ ಸರ್ಕಾರದ ಕ್ರಮ ಸರಿಯಲ್ಲ**
> **ರಾಜೇಶ್,** ಕಾರ್ಯಾಧ್ಯಕ್ಷ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ

ತಾಲ್ಲೂಕು ಪಂಚಾಯಿತಿ ಕಾರ್ಯನಿ‌ರ್ವಾಹಕ ಅಧಿಕಾರಿ ಹುದ್ದೆಗೆ ಆ ದರ್ಜೆಯ ಅಧಿಕಾರಿಯನ್ನೇ ನೇಮಿಸಬೇಕು. ಅದೇ ದರ್ಜೆಯ ಅಧಿಕಾರಿ ಬರುವವರೆಗೆ ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಅಥವಾ ಅದೇ ತಾಲ್ಲೂಕಿನ ಪ್ರಮುಖ ಇಲಾಖೆಯೊಂದರ ಹಿರಿಯ ಅಧಿಕಾರಿಯನ್ನು ನಿಯೋಜಿಸಬಹುದು. ಆದರೆ, ಸರ್ಕಾರವೇ ನಿಯಮಕ್ಕೆ ವಿರುದ್ಧವಾಗಿ ನೇಮಕ ಮಾಡಿದೆ ಎಂಬ ಆರೋಪಗಳು ಕೇಳಿ ಬಂದಿವೆ.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕಿನಲ್ಲಿ 29 ಇಲಾಖೆಗಳ ಆಡಳಿತ ನೋಡಿಕೊಳ್ಳುವುದು, ಪಿ.ಡಿ.ಒ, ಬಿಲ್ ಕಲೆಕ್ಟರ್‌ಗಳ ವೇತನ ಬಿಡುಗಡೆ, ಬಿಲ್‌ಗಳ ವಿಲೇವಾರಿಗೆ ಸಹಿ ಮಾಡುವ ಅಧಿಕಾರ ಹೊಂದಿರುತ್ತಾರೆ. ಗ್ರಾಮ ಪಂಚಾಯಿತಿಗಳ ಮೇಲ್ವಿಚಾರಣೆಯ ಅಧಿಕಾರವೂ ಇರುತ್ತದೆ. ಇಂಥ ಮಹತ್ವದ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ನೇಮಕ ಮಾಡಿದ್ದು ಎಷ್ಟು ಸರಿ? ಕೂಡಲೇ ಸರ್ಕಾರ ತನ್ನ ನಿರ್ಧಾರ ಹಿಂಪಡೆಯಬೇಕು ಎಂಬ ಹಕ್ಕೊತ್ತಾಯ ಕೇಳಿ ಬಂದಿದೆ.

ಸರ್ಕಾರಿ ನೌಕರರಿಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ವಿಮೆ ಸಂಖ್ಯೆ (ಕೆ.ಜಿ.ಐ.ಡಿ.) ಇರುತ್ತದೆ. ಆ ವಿಮೆ ಸಂಖ್ಯೆ ಆಧರಿಸಿ ಹಣಕಾಸಿನ ವಹಿವಾಟು, ಖಜಾನೆ ಇಲಾಖೆಯಲ್ಲಿ ಡಿಜಿಟಲ್ ಸಹಿ, ಬಿಲ್ ಪಾಸ್ ಮಾಡುವ ಅಧಿಕಾರ ಹೊಂದಿರುತ್ತಾರೆ. ಆದರೆ, ಡಮ್ಮಿ ಕೆ.ಜಿ.ಐ.ಡಿ. ಸಂಖ್ಯೆ ಸೃಷ್ಟಿಸಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ, ಮರು ಆದೇಶ ಹೊರಡಿಸಲಾಗಿದೆ ಎಂಬ ಆರೋಪ ಕೇಳಿ ಬಂದಿದೆ.

ಒಂದು ವೇಳೆ ಹಣಕಾಸಿನ ಅವ್ಯವಹಾರ ನಡೆದರೆ ಯಾರು ಹೊಣೆ? ಸರ್ಕಾರದ ಪ್ರಮುಖ ಇಲಾಖೆಯ ಪ್ರಮುಖ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿದರೆ ಇದು ಇತರೆ ಇಲಾಖೆಗಳಿಗೂ ವಿಸ್ತರಿಸುವ ಆತಂಕ ಪಂಚಾಯತ್ ರಾಜ್ ಇಲಾಖೆಯ ನೌಕರರನ್ನು ಕಾಡುತ್ತಿದೆ.

ಈ ಸಂಬಂಧ ಪಂಚಾಯತ್ ರಾಜ್ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಬಾಲಪ್ಪ ಅವರನ್ನು ಸಂಪರ್ಕಿಸಿದಾಗ ಮಾಹಿತಿಗೆ ಲಭ್ಯರಾಗಲಿಲ್ಲ.

ಕಾಲಹರಣಕ್ಕೆ ಅವಕಾಶ ಇಲ್ಲ: ಅರ್ಜಿದಾರರಿಗೆ ತರಾಟೆ


# ಹಿಜಾಬ್: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

**ನವದೆಹಲಿ:** ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಮೇಲಿನ ನಿಷೇಧವನ್ನು ಎತ್ತಿಹಿಡಿದಿದ್ದ ಕರ್ನಾಟಕ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ಸಂಬಂಧ ಕರ್ನಾಟಕ ಸರ್ಕಾರದಿಂದ ಸುಪ್ರೀಂ ಕೋರ್ಟ್ ಪ್ರತಿಕ್ರಿಯೆ ಕೇಳಿದೆ.

ಅರ್ಜಿಗಳ ವಿಚಾರಣೆ ಸೋಮವಾರ ನಡೆಸಿದ ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠವು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿತು.

'ಕೊನೆಯ ಕ್ಷಣದಲ್ಲಿ ವಿಚಾರಣೆಗೆ ಪಟ್ಟಿ ಮಾಡಲಾಗಿದೆ. ದೇಶದಾದ್ಯಂತದ ಹಿರಿಯ ವಕೀಲರು ವಾದ ಮಾಡಲು ಬಯಸಿದ್ದಾರೆ. ಹಾಗಾಗಿ, ಅರ್ಜಿಯ ವಿಚಾರಣೆಯನ್ನು ಮುಂದೂಡಬೇಕು' ಎಂದು ಅರ್ಜಿದಾರರ ಪರ ಮೊಹಮ್ಮದ್ ನಿಜಾಮ್ ಪಾಷಾ ಕೋರಿದರು. ಅರ್ಜಿ‌ದಾರರನ್ನು ತರಾಟೆಗೆ ತೆಗೆದುಕೊಂಡ ಪೀಠವು, 'ನಾವು ಫೋರಂ ಶಾಪಿಂಗ್‌ಗೆ ಅವಕಾಶ ನೀಡುವುದಿಲ್ಲ. ಕಾಲಹರಣ ಮಾಡುವುದು ಸರಿಯಲ್ಲ' ಎಂದು ಹೇಳಿತು.



'ಅರ್ಜಿದಾರರ ಮನವಿಯನ್ನು ಒಪ್ಪಲು ಸಾಧ್ಯವಿಲ್ಲ. ಈ ಮೊದಲು ತುರ್ತಾಗಿ ವಿಚಾರಣೆ ನಡೆಸಬೇಕು ಎಂದು ಮನವಿ ಮಾಡಿದ್ದೀರಿ. ಈಗ ವಿಚಾರಣೆಯ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ. ಈಗ ವಿಚಾರಣೆ ಮುಂದೂಡಿ ಎಂದು ಮನವಿ ಮಾಡುತ್ತಿದ್ದೀರಿ. ಇದು ಸರಿಯಲ್ಲ' ಎಂದು ಪೀಠವು ಅಸಮಾಧಾನ ವ್ಯಕ್ತಪಡಿಸಿತು.

'ವಿಚಾರಣೆಗೆ ಈಗಾಗಲೇ ಪಟ್ಟಿ ಮಾಡಲಾಗಿದೆ. ಮಂಗಳವಾರ ವಾದ ಮಂಡಿಸಿ' ಎಂದು ಅರ್ಜಿದಾರರ ಪರ ವಕೀಲರಿಗೆ ಪೀಠವು ಸೂಚಿಸಿತು.

ಆಗ ಕರ್ನಾಟಕ ಸರ್ಕಾರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಇದು ಸಂಪೂರ್ಣ ಕಾನೂನಾತ್ಮಕ ವಿಚಾರವಾಗಿದ್ದು, ನ್ಯಾಯಪೀಠವು ನೋಟಿಸ್ ಜಾರಿ ಮಾಡುವ ಮೂಲಕ ವಿಚಾರಣೆ ಮಾಡಬೇಕು. ಆದರೆ, ಈ ಕುರಿತು ಕರ್ನಾಟಕ ಸರ್ಕಾರ ಪ್ರತಿಕ್ರಿಯೆ ಸಲ್ಲಿಸುವ ಅಗತ್ಯ ಇಲ್ಲ' ಎಂದರು. 'ಮೇಲ್ಮನವಿ ಸಲ್ಲಿಸಿರುವ ಅರ್ಜಿದಾರರಿಗೆ ಅರ್ಜಿಯ ತುರ್ತು ವಿಚಾರಣೆ ಬೇಕಿತ್ತು. ಅವರೇ ಅದಕ್ಕೆ ಒತ್ತಾಯಿಸುತ್ತಿ‌ದ್ದರು' ಎಂದು ಅವರು ಹೇಳಿದರು.

ಬಳಿಕ ನ್ಯಾಯಪೀಠವು ಸೆಪ್ಟೆಂಬರ್ 5ಕ್ಕೆ ವಿಚಾರಣೆಯನ್ನು ಮುಂದೂಡಿತು.

ವಿಚಾರಣೆಯನ್ನು ಎರಡು ವಾರಗಳ ಕಾಲ ಮುಂದೂಡಬೇಕು ಎಂದು ವಕೀಲರೊಬ್ಬರು ಮನವಿ ಮಾಡಿದರು. 'ಮುಂದಿನ ಸೋಮವಾರ ಬನ್ನಿ' ಎಂದು ನ್ಯಾಯಮೂರ್ತಿಗಳು ಹೇಳಿದರು.

'ಸರ್ಕಾರಿ ಕಾಲೇಜುಗಳ ತರಗತಿ‌ಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವಂತೆ ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಎಲ್ಲ ವೈಯಕ್ತಿಕ ಹಾಗೂ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮಾರ್ಚ್ 15ರಂದು ಸಾರಾಸಗಟಾಗಿ ತಿರಸ್ಕರಿಸಿದ್ದ ಹೈಕೋರ್ಟ್‌ನ ತ್ರಿಸದಸ್ಯ ಪೀಠ, 'ಈ ವಿಷಯವನ್ನು ದೇಶದಾದ್ಯಂತ ವಿವಾದದ ವಿಷಯವನ್ನಾಗಿ ಮಾಡಿರುವ ಹಿಂದೆ ಕಾಣದ ಕೈಗಳು ಅಡಗಿವೆ' ಎಂಬ ಸಂಶಯ ವ್ಯಕ್ತಪಡಿಸಿತ್ತು.

ಬಿಬಿಎಂಪಿ ಸೇರಿ ಕಳೆಯಿತು ಎರಡು ವರ್ಷ: ನಿವಾಸಿಗಳಿಗೆ ತರಲಿಲ್ಲ ಹರ್ಷ • ಡಾಂಬರ್ ಕಾಣದ ಅಡ್ಡ ರಸ್ತೆಗಳು

# ಲಕ್ಷ್ಮೀಪುರ, ಕಾನ್ಶಿರಾಂನಗರ ಅಭಿವೃದ್ಧಿ ಮರೀಚಿಕೆ

• ವಿಜಯಕುಮಾರ್ ಎಸ್.ಕೆ.

**ಬೆಂಗಳೂರು:** ಲಕ್ಷ್ಮೀಪುರ ಮತ್ತು ಕಾನ್ಶಿರಾಂ ನಗರದ ಬಡಾವಣೆಗಳು ಬಿಬಿಎಂಪಿ ವ್ಯಾಪ್ತಿಗೆ ಸೇರ್ಪಡೆಯಾಗಿ ಎರಡು ವರ್ಷಗಳು ಕಳೆದಿದ್ದರೂ, ಅಭಿವೃದ್ಧಿ ಎಂಬುದು ಮರೀಚಿಕೆಯಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿ ಸೋಮಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದ ಈ ಬಡಾವಣೆಗಳಲ್ಲಿ 4 ಸಾವಿರಕ್ಕೂ ಹೆಚ್ಚು ಮನೆಗಳಿವೆ. ಆದರೂ ಇಲ್ಲಿ ಸಮರ್ಪಕ ರಸ್ತೆಗಳಿಲ್ಲ, ಕಸ ವಿಲೇವಾರಿ ವ್ಯವಸ್ಥೆಗಳಿಲ್ಲ, ಶೌಚನೀರು ಹರಿಯುವ ಒಳಚರಂಡಿಗಳಿಲ್ಲ, ಮಳೆ ನೀರು ಹರಿಯುವ ಚರಂಡಿಗಳಂತೂ ಇಲ್ಲವೇ ಇಲ್ಲ.

ಬಿಬಿಎಂಪಿ ವ್ಯಾಪ್ತಿಗೆ 2007ರಲ್ಲಿ 7 ನಗರಸಭೆ, ಒಂದು ಪಟ್ಟಣ ಪಂಚಾಯಿತಿ ಮತ್ತು 110 ಹಳ್ಳಿಗಳು ಸೇರ್ಪಡೆಯಾದವು. ಆ ಪಟ್ಟಿಯಲ್ಲಿ ಕಾನ್ಶಿರಾಂ ನಗರವೂ ಇತ್ತು. ಆಸ್ತಿವಹಿ ಮತ್ತು ಇತರ ದಾಖಲೆಗಳು ಗ್ರಾಮ ಪಂಚಾಯಿತಿಯಿಂದ ಪಾಲಿಕೆಗೆ ಹಸ್ತಾಂತರವಾಗದ ತಾಂತ್ರಿಕ ಕಾರಣಕ್ಕೆ ಸೇರ್ಪಡೆ ವಿಳಂಬವಾಯಿತು. 2015ರ ಆಗಸ್ಟ್ 31ರಲ್ಲಿ ಈ ಬಡಾವಣೆಗಳು ಪಾಲಿಕೆಯ ಕುವೆಂಪುನಗರ ವಾರ್ಡ್ (ಈ ಹಿಂದೆ ಇದ್ದ) ವ್ಯಾಪ್ತಿಗೆ ಸೇರ್ಪಡೆಗೊಂಡವು.

ಕುವೆಂಪುನಗರ ವಾರ್ಡ್ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿದ್ದರೆ, ಈ ಬಡಾವಣೆಗಳು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದ್ದವು. ಆದ್ದರಿಂದ ತಾಂತ್ರಿಕ ಸಮಸ್ಯೆಗಳು ಎದುರಾಗಿ ಬಿಬಿಎಂಪಿಗೆ ಸೇರಲು ಆಗಲಿಲ್ಲ. ಮತ್ತೊಮ್ಮೆ ಸಚಿವ ಸಂಪುಟದ ಮುಂದೆ ಹೋಗಿ ದಾಸರಹಳ್ಳಿ ಕ್ಷೇತ್ರ ವ್ಯಾಪ್ತಿಯ ವಾರ್ಡ್‌ಗಳ ಪಟ್ಟಿಗೆ ಸೇರ್ಪಡೆಯಾಗಲು 5 ವರ್ಷ ಬೇಕಾಯಿತು. 2020ರಲ್ಲಿ ಕೊನೆಗೂ ಬಿಬಿಎಂಪಿ ವ್ಯಾಪ್ತಿಗೆ ಈ ಬಡಾವಣೆಗಳು ಸೇರ್ಪಡೆಗೊಂಡವು.

ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಯಾದರೆ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂಬ ಕನಸು ಕಂಡಿದ್ದ ನಿವಾಸಿಗಳಿಗೆ ಈಗ ನಿರಾಸೆಯಾಗಿದೆ. ಎರಡು ವರ್ಷಗಳ ಅವಧಿಯಲ್ಲಿ ಯಾವುದೇ ಬದಲಾವಣೆಗಳನ್ನೂ ನಿವಾಸಿಗಳು ಕಂಡಿಲ್ಲ. ಕಾನ್ಶಿರಾಂನಗರದ ಒಂದೆರಡು ಬೀದಿಗಳಲ್ಲಿ ಕಸ ಸಂಗ್ರಹ ಕಾರ್ಯವನ್ನು ಬಿಬಿಎಂಪಿ ಆರಂಭಿಸಿದೆ. ಉಳಿದಂತೆ ಅಭಿವೃದ್ಧಿ ಕನಸಾಗಿಯೇ ಉಳಿದಿದೆ. ಇದು ನಿವಾಸಿಗಳ ಬೇಸರಕ್ಕೆ ಕಾರಣವಾಗಿದೆ.

‘ಬಡಾವಣೆಗೆ ಅಗತ್ಯ ಇರುವ ಮೂಲಸೌಕರ್ಯಗಳ ಪಟ್ಟಿ ಸಿದ್ಧಪಡಿಸಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಸಲ್ಲಿಸಿದ್ದೇವೆ. ಯಾವುದೇ ಪ್ರಯೋಜನ ಆಗಿಲ್ಲ’ ಎಂದು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಅಸಮಾಧಾನ ವ್ಯಕ್ತಪಡಿಸುತ್ತಾರೆ.



ಕಾನ್ಶಿರಾಂನಗರದ ರಸ್ತೆಯಲ್ಲಿ ಹೊಂಡಗಳು ನಿರ್ಮಾಣವಾಗಿರುವುದು –ಪ್ರಜಾವಾಣಿ ಚಿತ್ರಗಳು/ರಂಜು ಪಿ.



ಕೆರೆಯಲ್ಲಿಯೇ ಶವ ಹೂಳುವ ಸ್ಥಿತಿ

## ಅಡ್ಡ ರಸ್ತೆಗಳಲ್ಲಿ ಸಂಚಾರ ದುಸ್ತರ

ಬಡಾವಣೆಯಲ್ಲಿ 50ಕ್ಕೂ ಹೆಚ್ಚು ಅಡ್ಡ ರಸ್ತೆಗಳಿದ್ದು, ಒಂದೇ ಒಂದು ರಸ್ತೆಯೂ ಡಾಂಬರ್ ಕಂಡಿಲ್ಲ.

ಮಳೆಗಾಲದಲ್ಲಿ ರಸ್ತೆಗಳು ಕೆಸರುಗದ್ದೆಯಂತಾಗುತ್ತವೆ. ಬೇಸಿಗೆಯಲ್ಲಿ ದೂಳಿನ ನಡುವೆ ಜೀವನ ನಡೆಸುವಂತಾಗಿದೆ. ಜೋರು ಮಳೆ ಬಂದರೆ ಹೊರಗೆ ಕಾಲಿಡಲು ಸಾಧ್ಯವಾಗುತ್ತಿಲ್ಲ. ಗುಂಡಿಗಳಲ್ಲಿ ಬಿದ್ದು ಎದ್ದು ಸಂಚರಿಸಬೇಕಾದ ಸ್ಥಿತಿ ಇದೆ ಎಂದು ನಿವಾಸಿಗಳು ಬೇಸರ ವ್ಯಕ್ತಪಡಿಸುತ್ತಾರೆ.



ಲಕ್ಷ್ಮೀಪುರದ ಬಡಾವಣೆಯಲ್ಲಿ ರಸ್ತೆ ಎಂದರೆ ಹೀಗೆಯೇ...

## ‘ಸರ್ಕಾರಿ ಜಾಗಕ್ಕೆ ರಕ್ಷಣೆ ಬೇಕು’



ಮಾರಸಂದ್ರ ಮುನಿಯಪ್ಪ

‘ಪಾಲಿಕೆ ಸೇರಿದರೆ ಬಡಾವಣೆಗಳು ಅಭಿವೃದ್ಧಿ ಕಾಣಲಿವೆ ಎಂಬ ಕನಸು ಸಾಕಾರಗೊಳ್ಳಲೇ ಇಲ್ಲ. ಯಾವುದೇ ಅಡ್ಡ ರಸ್ತೆಯಲ್ಲೂ ಸಂಚಾರ ಮಾಡಲು ಸಾಧ್ಯವಾಗದ ಸ್ಥಿತಿ ಇದೆ’ ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ತಿಳಿಸಿದರು.

‘ನಾಲ್ಕು ಸಾವಿರಕ್ಕಿಂತ ಹೆಚ್ಚು ಮನೆಗಳಿರುವ ಬಡಾವಣೆಗಳನ್ನು ಬಿಬಿಎಂಪಿ ನಿರ್ಲಕ್ಷ್ಯ ಮಾಡುತ್ತಿದೆ. ಒತ್ತುವರಿಯಾಗಿದ್ದ ಸರ್ಕಾರಿ ಭೂಮಿಗಳನ್ನು ಹೋರಾಟ ಮಾಡಿ ಬಿಡಿಸಿದ್ದೇವೆ. ಅವುಗಳನ್ನು ಸರ್ಕಾರಿ ಕಾಲೇಜು, ಸ್ಮಶಾನ, ಉದ್ಯಾನಗಳಿಗೆ ಮೀಸಲಿಡಬೇಕಿದೆ. ಸುತ್ತಲೂ ಬೇಲಿ ನಿರ್ಮಿಸದೆ ಇದ್ದರೆ ಮತ್ತೆ ಒತ್ತುವರಿಯಾಗುವ ಸಾಧ್ಯತೆ ಇದ್ದು, ರಕ್ಷಣೆ ಮಾಡುವ ಕೆಲಸವನ್ನು ಬಿಬಿಎಂಪಿ ಅಧಿಕಾರಿಗಳು ಮಾಡಬೇಕು’ ಎಂದು ಒತ್ತಾಯಿಸಿದರು.

ಈ ಬಡಾವಣೆ ಶಿವರಾಮ ಕಾರಂತ ಬಡಾವಣೆ ವ್ಯಾಪ್ತಿಯಲ್ಲಿ ಇಲ್ಲ. ಆದರೂ, ಬೆಸ್ಕಾಂ ಸಿಬ್ಬಂದಿ ವಿದ್ಯುತ್ ಸಂಪರ್ಕ ಕಡಿತ ಮಾಡಿ ಬಡವರಿಗೆ ತೊಂದರೆ ನೀಡುತ್ತಿದ್ದಾರೆ ಎಂದು ಹೇಳಿದರು.



ಸರ್ಕಾರಿ ಕಾಲೇಜಿಗೆ ಮೀಸಲಿಟ್ಟಿರುವ ಜಾಗಕ್ಕೆ ರಕ್ಷಣೆಯೇ ಇಲ್ಲ

## ಚರಂಡಿ, ಒಳಚರಂಡಿ ಎರಡೂ ಇಲ್ಲ

ಈ ಎರಡು ಬಡಾವಣೆಗಳಲ್ಲಿ ಮಳೆ ನೀರು ಹರಿಯುವ ಚರಂಡಿ ಮತ್ತು ಒಳಚರಂಡಿ ವ್ಯವಸ್ಥೆಯೇ ಇಲ್ಲವಾಗಿದೆ.

ಗ್ರಾಮ ಪಂಚಾಯಿತಿಯಿಂದ ನಿರ್ಮಿಸಿದ್ದ ಚರಂಡಿಗಳು ಮುಚ್ಚಿಹೋಗಿದ್ದು, ಸದ್ಯ ನೀರು ಹರಿಯುವ ಚರಂಡಿಗಳೇ ಇಲ್ಲ. ಶೌಚ ನೀರು ಹರಿಯುವ ಒಳಚರಂಡಿ ಸಂಪರ್ಕವಿಲ್ಲ. ಮನೆಯ ಮುಂದೆ ನಿರ್ಮಿಸಿಕೊಂಡಿರುವ ಶೌಚಗುಂಡಿಗಳು ಭರ್ತಿಯಾದರೆ ಆ ನೀರು ರಸ್ತೆಯಲ್ಲೇ ಹರಿಯುತ್ತದೆ ಎಂದು ನಿವಾಸಿಗಳು ವಿವರಿಸುತ್ತಾರೆ.

## ‘ಬೀದಿ ದೀಪ, ಕಸ ನಿರ್ವಹಣೆ’

ಲಕ್ಷ್ಮೀಪುರ ಮತ್ತು ಕಾನ್ಶಿರಾಂನಗರ ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಯಾದ ಬಳಿಕ ಬೀದಿದೀಪ ಮತ್ತು ಕಸ ವಿಲೇವಾರಿ ಸಮರ್ಪಕವಾಗಿ ಆಗುತ್ತಿದೆ ಎಂದು ಪಾಲಿಕೆ ಜಂಟಿ ಆಯುಕ್ತ ಕೆ.ಎಚ್. ಜಗದೀಶ್ ಹೇಳಿದರು.

‘ತೆರಿಗೆ ಸಂಗ್ರಹ ಸಂಬಂಧ ಅನುಮೋದನೆ ಪಡೆಯುವ ಪ್ರಕ್ರಿಯೆಗಳನ್ನು ಆರಂಭಿಸಲಾಗಿದೆ. ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಪರಿಶೀಲನೆ ನಡೆಸಲಾಗುವುದು’ ಎಂದು ತಿಳಿಸಿದರು.

## ನಿವಾಸಿಗಳ ಬೇಡಿಕೆಗಳೇನು

- ಅಡ್ಡ ರಸ್ತೆಗಳಿಗೆ ಡಾಂಬರ್ ಹಾಕಬೇಕು.
- ಮಳೆ ನೀರು ಚರಂಡಿ ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸಬೇಕು.
- ನೆಲದೊಳಗೆ ವಿದ್ಯುತ್ ಕೇಬಲ್ ಅಳವಡಿಕೆ.
- ವಲಸೆ ಕಾರ್ಮಿಕರಿಗಾಗಿ ಸಾರ್ವಜನಿಕ ಶೌಚಾಲಯ ಮತ್ತು ಸ್ನಾನದ ಗೃಹ ನಿರ್ಮಾಣ.
- ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಕಟ್ಟಡ ನಿರ್ಮಾಣ.
- ಕಾನ್ಶಿರಾಂನಗರದಲ್ಲಿ ಮೀಸಲಿಟ್ಟಿರುವ ಜಾಗದಲ್ಲಿ ಬಸ್ ನಿಲ್ದಾಣ ನಿರ್ಮಿಸಬೇಕು.
- ಸಿಂಗಾಪುರದಲ್ಲಿ ಕಾವೇರಿ ನೀರಿನ ವ್ಯವಸ್ಥೆ ಇದ್ದು, ಅದನ್ನು ಕಾನ್ಶಿರಾಂನಗರ ಮತ್ತು ಲಕ್ಷ್ಮೀಪುರದ ಎಲ್ಲಾ ಬಡಾವಣೆಗೆ ವಿಸ್ತರಿಸಬೇಕು.
- ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಟ್ಟಿರುವ ಜಾಗಗಳ ಸುತ್ತ ಬೇಲಿ ಅಥವಾ ಕಾಂಪೌಂಡ್ ನಿರ್ಮಿಸಿ ರಕ್ಷಿಸಬೇಕು.
- ಕಾನ್ಶಿರಾಂನಗರದಲ್ಲಿ ಸಾರ್ವಜನಿಕ ಗ್ರಂಥಾಲಯ ತೆರೆಯಬೇಕು.
- ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಬೇಕು.

### ರಾಮಕೃಷ್ಣ ಹೆಗಡೆ ಜನ್ಮದಿನದ ಕಾರ್ಯಕ್ರಮದಲ್ಲಿ ಸೀತಾರಾಂ ಯೆಚೂರಿ

# ‘ಜಾತ್ಯತೀತ, ಪ್ರಜಾಪ್ರಭುತ್ವ ಆಶಯಕ್ಕೆ ಅಪಾಯ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ದೇಶದ ಜಾತ್ಯತೀತ, ಪ್ರಜಾಪ್ರಭುತ್ವ ಆಶಯಗಳಿಗೆ ಧಕ್ಕೆಯಾಗುತ್ತಿದ್ದು, ಅಸಹಿಷ್ಣುತೆಯ ವಾತಾವರಣ ಸೃಷ್ಟಿಯಾಗಿದೆ’ ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅಸಮಾಧಾನ ವ್ಯಕ್ತಪಡಿಸಿದರು.

ರಾಷ್ಟ್ರೀಯ ನವನಿರ್ಮಾಣ ವೇದಿಕೆ ಸೋಮವಾರ ಆಯೋಜಿಸಿದ್ದ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ 96ನೇ ಜನ್ಮದಿನದ ಕಾರ್ಯಕ್ರಮದಲ್ಲಿ ‘ಭಾರತ–75: ಮುಂದಿನ ಸವಾಲುಗಳು’ ಕುರಿತು ಮಾತನಾಡಿದ ಅವರು, ‘ಸ್ವಾತಂತ್ರ್ಯದ 75 ವರ್ಷಗಳ ನಂತರ ಭಾರತ ಪ್ರಗತಿ ಸಾಧಿಸುತ್ತಿದೆಯೇ ಅಥವಾ ಹಿನ್ನಡೆಯ ದಾರಿಯಲ್ಲಿ ಸಾಗುತ್ತಿದೆಯೇ ಎನ್ನುವ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು’ ಎಂದು ನುಡಿದರು.

‘ಸರ್ಕಾರದ ನಿಲುವುಗಳಿಗೆ ವಿರೋಧ ವ್ಯಕ್ತಪಡಿಸಿದರೆ ದೇಶದ್ರೋಹದ ಆರೋಪ ಹೊರಿಸಲಾಗುತ್ತಿದೆ. ಭಯ ಮತ್ತು ಹಿಂಸಾಚಾರದ ಸನ್ನಿವೇಶದಲ್ಲಿ ಯಾವುದೇ ರಾಜಕೀಯ ವ್ಯವಸ್ಥೆಗೆ ಉಳಿಗಾಲವಿಲ್ಲ’ ಎಂದರು.

‘ಭಾರತವು ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಹಾಗೂ ವೈವಿಧ್ಯ ಹೊಂದಿರುವ ರಾಷ್ಟ್ರ. ಆದರೆ, ಈ ರಾಷ್ಟ್ರಕ್ಕೆ ಧಾರ್ಮಿಕ ಸ್ಪರ್ಶ ನೀಡುವ ಹುನ್ನಾರ ನಡೆಯುತ್ತಿದೆ. ಇಸ್ಲಾಮಿಕ್ ರಿಪಬ್ಲಿಕ್ ರೀತಿಯಲ್ಲಿ ಹಿಂದೂ ರಾಷ್ಟ್ರವನ್ನಾಗಿ ಮಾಡಲಾಗುತ್ತಿದೆ. ಪಾಕಿಸ್ತಾನ ಇಸ್ಲಾಮಿಕ್ ರಾಷ್ಟ್ರವಾಗಿರುವುದರಿಂದ ಭಾರತ ಏಕೆ ಹಿಂದೂ ರಾಷ್ಟ್ರವಾಗಬಾರದು ಎನ್ನುವ ವಾದ ಮಂಡಿಸುವವರಿದ್ದಾರೆ. ಇಂತಹ ಸನ್ನಿವೇಶದಲ್ಲಿ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಸಿದ್ಧಾಂತಗಳನ್ನು ರಕ್ಷಿಸಬೇಕು’ ಎಂದು ಹೇಳಿದರು.

‘ಚುನಾವಣೆಯಲ್ಲಿ ಯಾವುದೇ ಪಕ್ಷ ಹೆಚ್ಚಿನ ಸ್ಥಾನಗಳನ್ನು ಪಡೆದರೂ ಬಿಜೆಪಿಯೇ ಸರ್ಕಾರ ರಚಿಸುತ್ತದೆ. ಹಣವೇ ಮುಖ್ಯವಾದರೆ ಪ್ರಜಾಪ್ರಭುತ್ವಕ್ಕೆ ಬೆಲೆಯೇ ಇಲ್ಲದಂತಾಗುತ್ತದೆ. ಸಂಸತ್‌ನಲ್ಲೂ ಯಾವುದೇ ಚರ್ಚೆಗಳು ಇಲ್ಲದೆಯೇ ಮಸೂದೆಗಳಿಗೆ ಅನುಮೋದನೆ ನೀಡಲಾಗುತ್ತಿದೆ. ಈ ಬಗ್ಗೆ ಸುಪ್ರೀಂ ಕೋರ್ಟ್ ಸಹ ಆಕ್ಷೇಪ ವ್ಯಕ್ತಪಡಿಸಿತ್ತು’ ಎಂದರು.

‘ಜಾರಿ ನಿರ್ದೇಶನಾಲಯ (ಇಡಿ) ಮತ್ತು ಸಿಬಿಐ ರಾಜಕೀಯ ಪಕ್ಷದ ಅಂಗ ಸಂಸ್ಥೆಗಳ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ’ ಎಂದು ವಿಷಾದ ವ್ಯಕ್ತಪಡಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ ‘ರಾಮಕೃಷ್ಣ ಹೆಗಡೆ ಅವರು ನಿಜವಾದ ಪ್ರಜಾಪ್ರಭುತ್ವವಾದಿಯಾಗಿದ್ದರು. ಸಂವಿಧಾನದ ಬಗ್ಗೆ ಗೌರವ ಹೊಂದಿದ್ದರು. ಹೆಗಡೆ ಅವರು ಹಲವಾರು ಪ್ರತಿಭಾವಂತರನ್ನು ಗುರುತಿಸಿ ಬೆಳೆಸಿದರು. ನನ್ನನ್ನು ಕನ್ನಡ ಕಾವಲು ಸಮಿತಿ ಅಧ್ಯಕ್ಷರನ್ನಾಗಿ ನೇಮಿಸಿದ್ದರು’ ಎಂದು ಸ್ಮರಿಸಿದರು.

‘ಪ್ರಜಾವಾಣಿಯಲ್ಲಿನ ವಾಚಕರ ವಾಣಿಯನ್ನು ನಿತ್ಯವೂ ಓದುತ್ತಿದ್ದ ಹೆಗಡೆ ಅವರು ಸಂಬಂಧಪಟ್ಟ ಸಚಿವರಿಗೆ ತಕ್ಷಣವೇ ಸಮಸ್ಯೆಗಳನ್ನು ಬಗೆಹರಿಸುವಂತೆ ಸೂಚಿಸುತ್ತಿದ್ದರು’ ಎಂದು ನೆನಪಿಸಿಕೊಂಡರು.

‘ಅಧಿಕಾರ ವಿಕೇಂದ್ರೀಕರಣದ ದೃಷ್ಟಿಯಿಂದ ಮಂಡಳ ಪಂಚಾಯತ್ ವ್ಯವಸ್ಥೆ ಜಾರಿಗೊಳಿಸುವ ಮೂಲಕ ಮಹತ್ವದ ನಿರ್ಧಾರವನ್ನು ರಾಮಕೃಷ್ಣ ಹೆಗಡೆ ಕೈಗೊಂಡಿದ್ದರು. ಇದು ದಿಟ್ಟ ನಿರ್ಧಾರವಾಗಿತ್ತು’ ಎಂದು ನೆನಪಿಸಿದರು.

‘ಬುದ್ಧಿವಂತರು ಮತ್ತು ಜನಪ್ರಿಯ ಹಾಗೂ ಮುತ್ಸದ್ಧಿ ರಾಜಕಾರಣಿಯಾಗಿದ್ದ ರಾಮಕೃಷ್ಣ ಹೆಗಡೆ ಅವರು ಪ್ರಧಾನಿಯಾಗಬೇಕಾಗಿತ್ತು’ ಎಂದರು.



ಕಾರ್ಯಕ್ರಮದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್ ಶಂಕರ್, ಶಾಸಕ ಶಾಮನೂರು ಶಿವಶಂಕರಪ್ಪ, ನವನಿರ್ಮಾಣ ವೇದಿಕೆ ಅಧ್ಯಕ್ಷೆ ಮಮತಾ ನಿಚ್ಚಾನಿ ಅವರು ರಾಮಕೃಷ್ಣ ಹೆಗಡೆ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು– ಪ್ರಜಾವಾಣಿ ಚಿತ್ರ

## ‘ಸಂವಿಧಾನ ಕೆಟ್ಟವರ ಕೈಯಲ್ಲಿದೆ’

‘ಸಂವಿಧಾನ ಇಂದು ಕೆಟ್ಟವರ ಕೈಯಲ್ಲಿದೆ. ಪ್ರಜಾಪ್ರಭುತ್ವ ಮತ್ತ ಸಂವಿಧಾನ ಆಶಯಗಳಿಗೆ ಅಪಾಯ ಸೃಷ್ಟಿಯಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

‘ಸಂವಿಧಾನ ಒಳ್ಳೆಯವರ ಕೈಯಲ್ಲಿದ್ದರೆ ಜನರಿಗೂ ಒಳ್ಳೆಯದಾಗುತ್ತದೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನ ಉಳಿಯದಿದ್ದರೆ ಯಾರೂ ಉಳಿಯುವುದಿಲ್ಲ. ಅಸಮಾನತೆ ಮುಂದುವರಿದರೆ ಪ್ರಜಾಪ್ರಭುತ್ವದ ಸೌಧವನ್ನೇ ನಾಶ ಮಾಡುವ ಪರಿಸ್ಥಿತಿ ಸೃಷ್ಟಿಯಾಗಲಿದೆ ಎಂದು ಡಾ.ಬಿ.ಆರ್. ಅಂಬೇಡ್ಕರ್ ಹೇಳಿದ್ದರು. ಹೀಗಾಗಿ, ಪ್ರಜಾಪ್ರಭುತ್ವದ ಆಶಯಗಳಿಗೆ ಧಕ್ಕೆಯಾಗದಂತೆ ಎಚ್ಚರವಹಿಸಬೇಕು’ ಎಂದು ನುಡಿದರು.

# ಪುಟ್ಟಣ್ಣ ಚೆಟ್ಟಿ ಪುರಭವನದ ಬಾಡಿಗೆ ಕಡಿತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಬಿಬಿಎಂಪಿ ಒಡೆತನದಲ್ಲಿರುವ ಪುಟ್ಟಣ್ಣ ಚೆಟ್ಟಿ ಪುರಭವನದ ಬಾಡಿಗೆ ದರವನ್ನು ಕಡಿತಗೊಳಿಸಲಾಗಿದ್ದು, ಕನ್ನಡ ರಂಗಭೂಮಿಗೆ ಶೇ 50ರಷ್ಟು ರಿಯಾಯಿತಿ ಘೋಷಿಸಲಾಗಿದೆ.

ಸಾಂಸ್ಕೃತಿಕ ಕಾರ್ಯಕ್ರಮ ಸಂಖ್ಯೆ ಹೆಚ್ಚಿಸಲು ಹಾಗೂ ಕನ್ನಡ ರಂಗಭೂಮಿಗೆ ರಂಗವೇದಿಕೆಗಳ ಕೊರತೆ ನೀಗಿಸಲು ಬಾಡಿಗೆ ದರವನ್ನು ಪರಿಷ್ಕರಿಸಲಾಗಿದೆ ಎಂದು ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತರು ತಿಳಿಸಿದ್ದಾರೆ.

ಪೂರ್ತಿ ದಿನದ ಬಾಡಿಗೆ ಹವಾನಿಯಂತ್ರಿತ ಸೌಲಭ್ಯ ಬೇಕಿದ್ದಲ್ಲಿ ₹75 ಸಾವಿರ ಇದ್ದದ್ದನ್ನು ₹60 ಸಾವಿರಕ್ಕೆ ಇಳಿಸಲಾಗಿದೆ.

ಹವಾನಿಯಂತ್ರಿತ ಸೌಲಭ್ಯ ಬೇಡದೇ ಇದ್ದರೆ ₹50 ಸಾವಿರವಾಗಿದೆ. ಈ ಮೊದಲು ಅರ್ಧ ದಿನದ ಆಧಾರದಲ್ಲಿ ಬಾಡಿಗೆಗೆ ಪುರಭವನವನ್ನು ನೀಡುತ್ತಿರಲಿಲ್ಲ. ಇದೀಗ ಮೊದಲಾರ್ಧ (ಬೆಳಿಗ್ಗೆ 8ರಿಂದ ಮಧ್ಯಾಹ್ನ 3) ಹಾಗೂ ದ್ವಿತೀಯಾರ್ಧ (ಮಧ್ಯಾಹ್ನ 3ರಿಂದ ರಾತ್ರಿ 10) ವ್ಯವಸ್ಥೆ ಜಾರಿಯಾಗಲಿದೆ. ಬಾಡಿಗೆ ₹30 ಸಾವಿರವಾಗಿದ್ದು, ನಾನ್ ಎಸಿಗೆ ₹25 ಸಾವಿರವಾಗಿದೆ.

ರಂಗಭೂಮಿಯ ಎಲ್ಲ ನಾಟಕ ಹಾಗೂ ಪ್ರಸಂಗಗಳಿಗೆ ಶೇ 50ರಷ್ಟು ರಿಯಾಯಿತಿ ನೀಡಲಾಗುತ್ತದೆ. ಸೆಪ್ಟೆಂಬರ್ 1ರಿಂದ ಈ ಪರಿಷ್ಕೃತ ಬಾಡಿಗೆ ದರ ಜಾರಿಯಾಗಲಿವೆ.





ಬಾಂಧವ ಸೇವಾ ಸಂಸ್ಥೆ ವತಿಯಿಂದ 5,000 ಪರಿಸರಸ್ನೇಹಿ ಮಣ್ಣಿನ ಗೌರಿಗಣೇಶ ಮೂರ್ತಿಗಳನ್ನು ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ವಿತರಿಸಲಾಯಿತು. ದುರ್ಗ ಪರಮೇಶ್ವರಿ ಆಟದ ಮೈದಾನ, ಜೆ.ಪಿ.ನಗರದಲ್ಲಿ ಉಚಿತವಾಗಿ ಕೆರೆ ಜೇಡಿ ಮಣ್ಣಿನ ಮೂರ್ತಿಗಳನ್ನು ಶಾಸಕಿ ಸೌಮ್ಯ ರೆಡ್ಡಿ ಹಾಗೂ ಬಾಂಧವ ಸಂಸ್ಥೆಯ ಮುಖ್ಯಸ್ಥ ಎನ್‌.ನಾಗರಾಜು ವಿತರಿಸಿದರು.

## ಮಾಂಸ ಮಾರಾಟ ನಿಷೇಧ ನಾಳೆ

**ಬೆಂಗಳೂರು:** ಗಣೇಶ ಚತುರ್ಥಿ ಪ್ರಯುಕ್ತ ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಆ.31ರಂದು ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

## ಗಣೇಶೋತ್ಸವ: ಪೊಲೀಸ್ ಪಥಸಂಚಲನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗಣೇಶೋತ್ಸವದ ವೇಳೆ ಶಾಂತಿ ಹಾಗೂ ಸೌಹಾರ್ದ ಕಾಪಾಡಲು ಪಶ್ಚಿಮ ವಿಭಾಗದ ಜೆ.ಜೆ. ನಗರ ವ್ಯಾಪ್ತಿಯಲ್ಲಿ ಪೊಲೀಸರು ಸೋಮವಾರ ಪಥಸಂಚಲನ ನಡೆಸಿ ಜಾಗೃತಿ ಮೂಡಿಸಿದರು.

ಕೋದಂಡರಾಮ ದೇವಸ್ಥಾನ ಹಾಗೂ ಪಾದರಾಯನಪುರ ಭಾಗದ ರಸ್ತೆಗಳಲ್ಲಿ ಪೊಲೀಸರು ಪಥಸಂಚಲನ ನಡೆಸಿದರು. ಡಿಸಿಪಿ ಲಕ್ಷ್ಮಣ್ ನಿಂಬರಗಿ ಅವರ ನೇತೃತ್ವದಲ್ಲಿ ಸಿವಿಲ್ ಹಾಗೂ ಕೆಎಸ್‌ಆರ್‌ಪಿಯ 300ಕ್ಕೂ ಹೆಚ್ಚು ಸಿಬ್ಬಂದಿ ಪಥಸಂಚಲನ ನಡೆಸಿದರು.

ಚಾಮರಾಜಪೇಟೆ ಮೈದಾನದಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಅವಕಾಶ ಕೋರಿ ಕೆಲವು ಸಂಘಟನೆಗಳು ಮನವಿ ಸಲ್ಲಿಸಿದ್ದು, ಪರಿಸ್ಥಿತಿ ಸೂಕ್ಷ್ಮವಾಗಿರುವ ಕಾರಣಕ್ಕೆ ಈ ಭಾಗದಲ್ಲಿ ಪೊಲೀಸರು ನಿಗಾ ವಹಿಸಿದ್ದಾರೆ. ಸೂಕ್ಷ್ಮ ಸ್ಥಳಗಳಲ್ಲಿ ಹೆಚ್ಚುವರಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ.

‘ಸ್ಥಳೀಯರಲ್ಲಿ ಧೈರ್ಯ ತುಂಬಲು ಹಾಗೂ ಜಾಗೃತಿ ಮೂಡಿಸುವ ಉದ್ದೇಶದಿಂದ ಪಥಸಂಚಲನ ಮಾಡಲಾಗಿದೆ. ಮಂಗಳವಾರ ಬೆಳಿಗ್ಗೆ 10.30ಕ್ಕೆ ಚಾಮರಾಜಪೇಟೆ ಭಾಗದಲ್ಲಿ ಪಥಸಂಚಲನ ನಡೆಸಲಾಗುವುದು’ ಎಂದು ಲಕ್ಷ್ಮಣ ನಿಂಬರಗಿ ತಿಳಿಸಿದರು.



ಜೆಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೋಮವಾರ ಪೊಲೀಸರು ಪಥಸಂಚಲನ ನಡೆಸಿದರು







1. ಕೆ.ಎಚ್‌ ರಸ್ತೆಯಲ್ಲಿ ಸೋಮವಾರ ನೀರು ತುಂಬಿ ಹರಿದ ಕಾರಣ ವಾಹನ ಸವಾರರು ಪರದಾಡಿದರು –ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್ 2. ಬಿಳೇಕಹಳ್ಳಿಯ ಅನುಗ್ರಹ ಬಡಾವಣೆ ರಸ್ತೆಯಲ್ಲಿ ನೀರು ತುಂಬಿಕೊಂಡಿರುವುದು 3. ನಗರದಲ್ಲಿ ಸುರಿದ ಮಳೆಗೆ ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ಮರವೊಂದು ಉರುಳಿ ಬಿದ್ದಿತ್ತು – ಪ್ರಜಾವಾಣಿ ಚಿತ್ರ

## ಜಲಾವೃತವಾದ ರಸ್ತೆಯಲ್ಲಿ ಸವಾರರ ಪರದಾಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಸೋಮವಾರವೂ ಧಾರಾಕಾರ ಮಳೆಯಾಗಿದ್ದು, ಜನಜೀವನ ಸಂಪೂರ್ಣ ಅಸ್ತವ್ಯಸ್ಯಗೊಂಡಿತ್ತು.

ನಿರಂತರ ಮಳೆಯಿಂದ ರಾಜಕಾಲುವೆ ಹಾಗೂ ಚರಂಡಿಗಳಲ್ಲಿ ನೀರು ತುಂಬಿ ಹರಿಯಿತು. ಬೆಳಿಗ್ಗೆ ತುಸು ಬಿಡುವು ನೀಡಿದ್ದ ಮಳೆ ರಾತ್ರಿ ಧಾರಾಕಾರವಾಗಿ ಸುರಿಯಿತು.

ಹಲವು ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಮತ್ತೆ ಸಮಸ್ಯೆ ಉಂಟಾಯಿತು. ರಸ್ತೆಗಳ ಮೇಲೆ ಹರಿಯುತ್ತಿದ್ದ ನೀರಿನಲ್ಲಿ ವಾಹನಗಳು ಮುಂದಕ್ಕೆ ಸಾಗಲು ಸಾಧ್ಯವಾಗಲಿಲ್ಲ.

ಪೀಣ್ಯ, ಜಾಲಹಳ್ಳಿ, ಯಲಹಂಕ, ಕೆಂಗೇರಿ, ರಾಜಾಜಿನಗರ, ಹೆಬ್ಬಾಳ, ಮಲ್ಲೇಶ್ವರ, ಬ್ಯಾಟರಾಯನಪುರ, ಸದಾಶಿವನಗರ, ವಿಜಯನಗರ, ಟಿ. ದಾಸರಹಳ್ಳಿ, ಸುಂಕದಕಟ್ಟೆ, ಯಶವಂತಪುರ, ಹೆಗ್ಗನಹಳ್ಳಿ, ಕೋರಮಂಗಲ, ಬಾಗಲಗುಂಟೆ, ಎಂ.ಜಿ.ರಸ್ತೆ, ಶಿವಾಜಿನಗರ, ಸದಾಶಿವನಗರ, ವಿಜಯನಗರ ಸೇರಿ ವಿವಿಧ ಬಡಾವಣೆಗಳಲ್ಲಿ ಮಳೆ ಆರ್ಭಟಿಸಿತು. ಬಲರಾಂ ಲೇಔಟ್‌ನ ರಸ್ತೆಯಲ್ಲಿ ತುಂಬಿದ್ದ ನೀರಿನಲ್ಲಿ ಕಾರು ಹಾಗೂ ಬೈಕ್‌ಗಳು ಸಿಲುಕಿದ್ದವು. ಕೆಆರ್ ಮಾರುಕಟ್ಟೆ ಹಾಗೂ ಚಿಕ್ಕಪೇಟೆ ರಸ್ತೆಗಳು ಜಲಾವೃತಗೊಂಡಿದ್ದವು.

ಅನುಗ್ರಹ ಲೇಔಟ್‌ನ ನಾಲ್ಕು ಮನೆಗಳಿಗೆ ಚರಂಡಿಯ ನೀರು ನುಗ್ಗಿತ್ತು. ಮಲ್ಲೇಶ್ವರ ಸಂಪಿಗೆರಸ್ತೆಯಲ್ಲಿ ಕಾರಿನ ಮೇಲೆ ಮರದ ಕೊಂಬೆ ಬಿದ್ದಿತ್ತು. ಗರುಡಾಚಾರ್ ಪಾಳ್ಯ, ಗಾಯಿತ್ರಿ ಬಡಾವಣೆ, ಸಾಯಿ ಲೇಔಟ್, ಹೊರಮಾವು, ಗುರುಲೇಔಟ್ ಜಲಾವೃತ್ತದ ಭೀತಿಯಲ್ಲಿವೆ. ಇದೇ ರೀತಿ ಮಳೆಯಾದರೆ ಹಲವು ಮನೆಗಳಿಗೆ ನೀರು ನುಗ್ಗುವ ಸಾಧ್ಯತೆಯಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

### ಪ್ರಯಾಣಿಕರ ಸಂಖ್ಯೆ ಇಳಿಮುಖ

ಬೆಂಗಳೂರು: ಗಣೇಶ ಚತುರ್ಥಿಗೆ ತೆರಳುವ ಪ್ರಯಾಣಿಕರ ಸಂಖ್ಯೆ ಮಳೆಯಿಂದಾಗಿ ಇಳಿಮುಖವಾಗಿದೆ.

ಹಬ್ಬದ ಅಂಗವಾಗಿ 500 ಹೆಚ್ಚುವರಿ ಬಸ್‌ಗಳ ವ್ಯವಸ್ಥೆಯನ್ನು ಕೆಎಸ್‌ಆರ್‌ಟಿಸಿ ಮಾಡಿತ್ತು. ಆ ಪೈಕಿ ಸೋಮವಾರಕ್ಕೆ 40, ಮಂಗಳವಾರಕ್ಕೆ 88 ಮತ್ತು ಬುಧವಾರಕ್ಕೆ 21 ಬಸ್‌ಗಳಿಗೆ ಮಾತ್ರ ಪ್ರಯಾಣಿಕರು ಟಿಕೆಟ್ ಕಾಯ್ದಿರಿಸಿದ್ದಾರೆ. ಎಲ್ಲೆಡೆ ಮಳೆ ಸುರಿಯುತ್ತಿರುವುದರಿಂದ ಪ್ರಯಾಣ ಮಾಡಲು ಜನ ಹಿಂದೇಟು ಹಾಕುತ್ತಿದ್ದಾರೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

### ಪರ್ಯಾಯ ಮಾರ್ಗ

ಮಳೆಯಿಂದ ಮೈಸೂರು ರಸ್ತೆ ಜಲಾವೃತಗೊಂಡಿದ್ದರಿಂದ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರದಲ್ಲಿ ಸೋಮವಾರ ವ್ಯತ್ಯಯ ಉಂಟಾಗಿತ್ತು.

ಹಾರೋಹಳ್ಳಿ, ಕನಕಪುರ, ಮಳವಳ್ಳಿ ಮೂಲಕ ಕೆಲವು ಬಸ್‌ಗಳು ಕಾರ್ಯಾಚರಣೆ ಮಾಡಿದವು. ನಿತ್ಯ ಸಾಮಾನ್ಯವಾಗಿ 550 ಬಸ್‌ಗಳು ಬೆಂಗಳೂರು- ಮೈಸೂರು ನಡುವೆ ಸಂಚರಿಸುತ್ತವೆ. ಈ ಪೈಕಿ 249 ಬಸ್‌ಗಳು ಪರ್ಯಾಯ ಮಾರ್ಗವಾಗಿ ಸಂಚರಿಸಿವೆ. ಸುಮಾರು ಅರ್ಧಗಂಟೆಯಿಂದ ಒಂದು ತಾಸು ತಡವಾಗಿ ತಲುಪಿವೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ. ಮಳೆ ಮುಂದುವರಿದಿದ್ದು, ಮಂಗಳವಾರವೂ ಮೈಸೂರು ರಸ್ತೆಯಲ್ಲಿ ಸಂಚಾರ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ.

ಸ್ವಚ್ಛತೆ ಕಾರ್ಯದಲ್ಲಿ ತೊಡಗಿರುವ ಆಸ್ಪತ್ರೆ ಸಿಬ್ಬಂದಿ: ಸಮಸ್ಯೆಗೆ ಬೇಕಿದೆ ಶಾಶ್ವತ ಪರಿಹಾರ

## ಮಳೆ ತಂದ ಸಂಕಟ: ಕಗ್ಗಲಿಪುರ ಆಸ್ಪತ್ರೆ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ನಗರ ಮತ್ತು ಹೊರ ವಲಯಗಳ ಕೆರೆ–ಕಟ್ಟೆಗಳ ನೀರು ರಸ್ತೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಸುತ್ತಿದೆ. ಕಗ್ಗಲಿಪುರದಲ್ಲಿ ಸರ್ಕಾರಿ ಸಮುದಾಯ ಆಸ್ಪತ್ರೆಗೆ ನುಗ್ಗಿದ ನೀರು ಅಪಾರ ಪ್ರಮಾಣದ ಹಾನಿ ಉಂಟು ಮಾಡಿದ್ದು, ಆಸ್ಪತ್ರೆಯ ವ್ಯವಸ್ಥೆಯೇ ಅಸ್ತವ್ಯಸ್ತವಾಗಿದೆ.

ಕನಕಪುರ ರಸ್ತೆಯಲ್ಲಿನ ಕಗ್ಗಲಿಪುರದ ಸರ್ಕಾರಿ ಸಮುದಾಯ ಆಸ್ಪತ್ರೆ ಸುಸಜ್ಜಿತ ಕಟ್ಟಡ, ವೈದ್ಯಕೀಯ ಸಲಕರಣೆಯೊಂದಿಗೆ ಸುತ್ತಮುತ್ತಲ ಊರುಗಳ ಜನರಿಗೆ ಆರೋಗ್ಯ ಸೇವೆ ಒದಗಿಸುತ್ತಿದ್ದು, ನಾಲ್ಕು ಬಾರಿ ಕಾಯಕಲ್ಪ ಪ್ರಶಸ್ತಿಗೂ ಆಯ್ಕೆಯಾಗಿದೆ. ದಿನಕ್ಕೆ 250 ಹೊರ ರೋಗಿಗಳು ಇಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಶನಿವಾರ ಬೆಳಗಿನ ಜಾವ ನುಗ್ಗಿದ ನೀರು ಇಡೀ ಆಸ್ಪತ್ರೆ ವ್ಯವಸ್ಥೆಯ ಚಿತ್ರಣವನ್ನೇ ಬದಲಿಸಿದೆ.

ನೀರು ನುಗ್ಗಿದ ಸಂದರ್ಭದಲ್ಲಿ ಇದ್ದ 10 ಒಳರೋಗಿಗಳನ್ನು ಬೇರೆ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಆದರೆ, ಆಸ್ಪತ್ರೆಯೊಳಗೆ ದಾಸ್ತಾನಿದ್ದ ಔಷಧಗಳು ನೀರು ಪಾಲಾಗಿವೆ. ವೈದ್ಯಕೀಯ ಉಪಕರಣಗಳು ನೀರಿನಲ್ಲಿ ಮುಳುಗಿ ಹಾಳಾಗಿವೆ. ಹಾಳಾಗಿರುವ ಔಷಧವನ್ನು ಹೊರ ಹಾಕಿ ಕಟ್ಟಡ ಸ್ವಚ್ಛಗೊಳಿಸುವ ಕೆಲಸದಲ್ಲಿ ಆಸ್ಪತ್ರೆ ಸಿಬ್ಬಂದಿ ನಿರತರಾಗಿದ್ದಾರೆ.

ಸುತ್ತಮುತ್ತಲ ಗ್ರಾಮಗಳ ಜನರ ಜೀವನಾಡಿಯಾಗಿದ್ದ ಆಸ್ಪತ್ರೆಯು ಈಗ ರೋಗಗ್ರಸ್ತ ಸ್ಥಿತಿಯಲ್ಲಿದ್ದು, ಇದು ಅಲ್ಲಿನ ವೈದ್ಯರು ಮತ್ತು ಸಿಬ್ಬಂದಿಯನ್ನು ಚಿಂತೆಗೀಡು ಮಾಡಿದೆ.

**ನೀರು ನುಗ್ಗಲು ಕಾರಣ:** ಕನಕಪುರ ರಸ್ತೆ ಪಕ್ಕದ ಹಳ್ಳದ ಬದಿಯಲ್ಲಿ ಆಸ್ಪತ್ರೆ ಇದೆ. ಈ ಹಳ್ಳವನ್ನು ಹಾದು ಹೋಗುವ ರಸ್ತೆಗೆ ಕಿರಿದಾದ ಸೇತುವೆಯೊಂದಿದೆ. ಶನಿವಾರದ ಅಬ್ಬರದ ಮಳೆಯಿಂದ ಸೇತುವೆ ಮೇಲಿಂದ ಪ್ರವಾಹದಂತೆ ಹರಿದ ನೀರು ಆಸ್ಪತ್ರೆಯ ಆವರಣಕ್ಕೆ ನುಗ್ಗಿ ಈ ಅವಾಂತರ ಸೃಷ್ಟಿಸಿದೆ ಎಂದು ಸಿಬ್ಬಂದಿ ಬೇಸರ ವ್ಯಕ್ತಪಡಿಸುತ್ತಾರೆ.

ಕೂಡಲೇ ಜೆಸಿಬಿ ತರಿಸಿ ಸೇತುವೆ ಸಮೇತ ತೆರವುಗೊಳಿಸಲಾಯಿತು. ಇಲ್ಲದಿದ್ದರೆ ಇನ್ನಷ್ಟು ನೀರು ಆಸ್ಪತ್ರೆಗೆ ನುಗ್ಗುವ ಸಾಧ್ಯತೆ ಇತ್ತು. 2017ರಲ್ಲೂ ವಾರದ ಅವಧಿಯಲ್ಲಿ ಎರಡು ಬಾರಿ ನೀರು ನುಗ್ಗಿತ್ತು. ಸಂಬಂಧಪಟ್ಟವರು ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಮನವಿ ಮಾಡಿದರು.




ಕಗ್ಗಲಿಪುರ ಸಮುದಾಯ ಆರೋಗ್ಯ ಕೇಂದ್ರದ ಸೋಮವಾರದ ಸ್ಥಿತಿ –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

### ‘₹1 ಕೋಟಿ ಮೌಲ್ಯದ ವಸ್ತು ಹಾಳು’

ನೀರು ನುಗ್ಗಿದ್ದರಿಂದ ₹50 ಲಕ್ಷ ಮೌಲ್ಯದ ಔಷಧ ಹಾಳಾಗಿದೆ. ವೈದ್ಯಕೀಯ ಉಪಕರಣಗಳೂ ಹಾಳಾಗಿರುವ ಸಾಧ್ಯತೆ ಇದ್ದು, ಪರಿಶೀಲಿಸಬೇಕಿದೆ. ಒಟ್ಟಾರೆ ₹1 ಕೋಟಿ ಮೌಲ್ಯದ ವಸ್ತುಗಳು ಹಾಳಾಗಿರುವ ಸಾಧ್ಯತೆ ಇದೆ ಎಂದು ಇಲ್ಲಿನ ಅಧಿಕಾರಿಯೊಬ್ಬರು ಹೇಳಿದರು.

ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಿರಂಜನ್, ‘ಎಷ್ಟು ನಷ್ಟವಾಗಿದೆ ಎಂಬುದನ್ನು ಅಂದಾಜು ಮಾಡುತ್ತಿದ್ದು, ಮಂಗಳವಾರ ವರದಿ ಬರಲಿದೆ. ಇನ್ನು ಮೂರ್ನಾಲ್ಕು ದಿನಗಳಲ್ಲಿ ಆಸ್ಪತ್ರೆ ಕಾರ್ಯಾರಂಭವಾಗಲಿದೆ’ ಎಂದರು.

### ಇನ್ನೂ ಒಂದು ವಾರ ಆಸ್ಪತ್ರೆ ಬಂದ್

ಸಂಪೂರ್ಣವಾಗಿ ಸ್ವಚ್ಛಗೊಳಿಸಿ ಸುಸ್ಥಿತಿಗೆ ಮರಳಿದ ಬಳಿಕವೇ ಆಸ್ಪತ್ರೆ ಕಾರ್ಯಾರಂಭ ಆಗಲಿದ್ದು, ಕನಿಷ್ಠ ಒಂದು ವಾರ ಬೇಕಾಗಬಹುದು ಎಂದು ಆಸ್ಪತ್ರೆ ವೈದ್ಯರು ಹೇಳಿದರು.

ಮೂರ್ನಾಲ್ಕು ಬಾರಿ ಸ್ವಚ್ಛಗೊಳಿಸಿ ರೋಗಿಗಳ ಚಿಕಿತ್ಸೆಗೆ ಪೂರಕವಾತಾವರಣ ಇದೆ ಎಂಬುದು ಖಚಿತವಾದ ಬಳಿಕವೇ ಆಸ್ಪತ್ರೆ ಕಾರ್ಯಾರಂಭ ಆಗಲಿದೆ ಎಂದರು.





ಆನೇಕಲ್ ತಾಲ್ಲೂಕಿನ ಹೆನ್ನಾಗರ ಕೆರೆ ಕೋಡಿ ಬಿದ್ದಿದ್ದು ರಸ್ತೆಯಲ್ಲಿ ನದಿಯಂತೆ ನೀರು ಹರಿಯುತ್ತಿದೆ (ಎಡಚಿತ್ರ) ಕಗ್ಗಲಿಪುರದ ಬಳಿ ಸೇತುವೆ ಕೊಚ್ಚಿ ಹೋಗಿರುವುದರಿಂದ ಸಂಪರ್ಕವೇ ಕಡಿತಗೊಂಡಿದ್ದು, ಶಾಲಾ ಮಕ್ಕಳು ಕುತೂಹಲದಿಂದ ವೀಕ್ಷಿಸಿದರು



### ಸಂಕ್ಷಿಪ್ತ ಸುದ್ದಿ

### ಕೋವಿಡ್: ವೃದ್ಧರಿಗೆ ಆಸ್ಪತ್ರೆ ಆರೈಕೆ ಕಡ್ಡಾಯ

**ಬೆಂಗಳೂರು:** ರಾಜ್ಯದಲ್ಲಿ 60 ವರ್ಷ ಮೇಲ್ಪಟ್ಟವರು, ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವವರು ಕೋವಿಡ್ ಪೀಡಿತರಾದರೆ ಕಡ್ಡಾಯವಾಗಿ ಆಸ್ಪತ್ರೆ ಆರೈಕೆಗೆ ಒಳಪಡಬೇಕು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಇಲಾಖೆ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. ಶೀತಜ್ವರ ಮಾದರಿ ಅನಾರೋಗ್ಯ ಸಮಸ್ಯೆ (ಐಎಲ್‌ಐ), ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು. ಸೋಂಕಿನ ಲಕ್ಷಣವುಳ್ಳ ಅಂತರರಾಷ್ಟ್ರೀಯ ಪ್ರಯಾಣಿಕರು, ಕೋವಿಡ್ ಪೀಡಿತರ ಪ್ರಾಥಮಿಕ ಸಂಪರ್ಕಿತರು, 60 ವರ್ಷ ಮೇಲ್ಪಟ್ಟವರು ಪರೀಕ್ಷೆಗೆ ಒಳಪಡಬೇಕು ಎಂದಿದ್ದಾರೆ.

ಕೋವಿಡ್ ಪೀಡಿತರ ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ (ಜಿನೋಮಿಕ್ ಸೀಕ್ವೆನ್ಸಿಸ್) ಪರೀಕ್ಷೆಗೆ ಒಳಪಡಿಸಬೇಕು ಎಂದು ತಿಳಿಸಿದ್ದಾರೆ.

### ಪಕ್ಷ ಸಂಘಟನೆ: ಬಿಎಸ್‌ವೈ– ಬೊಮ್ಮಾಯಿ ಭೇಟಿ

**ಬೆಂಗಳೂರು:** ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಸೂಚನೆ ಮೇರೆಗೆ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಪಕ್ಷದ ಸಂಘಟನೆ, ಪ್ರವಾಸ ಮತ್ತು ಜನ ಸಂಪರ್ಕದ ಬಗ್ಗೆ ಬಿ.ಎಸ್.ಯಡಿಯೂರಪ್ಪ ಚರ್ಚೆ ನಡೆಸಲಾಗಿದೆ. ಒಟ್ಟು ಆರು ಕಡೆಗಳಲ್ಲಿ ದೊಡ್ಡ ರ‍್ಯಾಲಿಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಯಡಿಯೂರಪ್ಪ ಭೇಟಿಯ ಬಳಿಕ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

‘ಸೆ. 8 ರಂದು ದೊಡ್ಡಬಳ್ಳಾಪುರದಲ್ಲಿ ನಡೆಯುವ ‘ಜನೋತ್ಸವ’ದ ಬಗ್ಗೆ ಮಾಹಿತಿ ಪಡೆದಿದ್ದಾರೆ. ಅದರ ಯಶಸ್ವಿಗೆ ಸೂಚನೆಗಳನ್ನೂ ನೀಡಿದ್ದಾರೆ. ಸಚಿವ ಡಾ.ಸುಧಾಕರ್, ಶಾಸಕರು ಮತ್ತು ಪದಾಧಿಕಾರಿಗಳು ಸೇರಿ ಜನೋತ್ಸವ ಯಶಸ್ವಿ ಮಾಡುತ್ತೇವೆ’ ಎಂದು ಬೊಮ್ಮಾಯಿ ಹೇಳಿದರು.

### ಸಹಾಯವಾಣಿ, ಆ್ಯಪ್‌ನಲ್ಲೂ ತಿದ್ದುಪಡಿಗೆ ಸೌಲಭ್ಯ

**ಬೆಂಗಳೂರು:** ಮತದಾರರ ಪಟ್ಟಿಯಲ್ಲಿನ ವಿವರ ತಿದ್ದುಪಡಿ ಹಾಗೂ ಆಕ್ಷೇಪಣೆಗಳನ್ನು ಸಹಾಯವಾಣಿ 1533 ಹಾಗೂ ಬಿಬಿಎಂಪಿ ಸಹಾಯ 2 ಆ್ಯಪ್‌ನಲ್ಲಿ ಸಲ್ಲಿಸಬಹುದಾಗಿದೆ.

ರಾಜ್ಯ ಚುನಾವಣಾ ಆಯೋಗದ ಸುತ್ತೋಲೆಯಂತೆ ಬಿಬಿಎಂಪಿ ವ್ಯಾಪ್ತಿಯ 243 ವಾರ್ಡ್‌ವಾರು ಮತದಾರರ ಕರಡು ಪಟ್ಟಿಯನ್ನು ಆ.25ರಂದು ಕಚೇರಿಗಳು ಹಾಗೂ ವೆಬ್‌ಸೈಟ್‌ನಲ್ಲಿ (bbmp.gov.in) ಪ್ರಕಟಿಸಲಾಗಿದೆ. ಈ ಬಗ್ಗೆ ಆಕ್ಷೇಪ ಅಥವಾ ತಿದ್ದುಪಡಿ ಇದ್ದರೆ ಸೆ.2ರೊಳಗೆ ಸಲ್ಲಿಸಬಹುದಾಗಿದೆ.

## ಕೊಠಡಿ ನೀಡದಿದ್ದಕ್ಕೆ ಬೆದರಿಕೆ: ಅಮಾನತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೋಟೆಲ್‌ನಲ್ಲಿ ಕೊಠಡಿ ನೀಡಲಿಲ್ಲವೆಂಬ ಕಾರಣಕ್ಕೆ ಮಹಿಳಾ ಸಿಬ್ಬಂದಿ ಮೇಲೆ ಹರಿಹಾಯ್ದು ಬೆದರಿಕೆ ಹಾಕಿದ್ದ ಆರೋಪದಡಿ ಕೆ.ಪಿ. ಅಗ್ರಹಾರ ಠಾಣೆ ಇನ್‌ಸ್ಪೆಕ್ಟರ್ ಗೋಪಾಲಕೃಷ್ಣ ಗೌಡ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.



ಗೋಪಾಲಕೃಷ್ಣ

ಜೀವನ್‌ಭಿಮಾನಗರ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ಘಟನೆ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿದ್ದ ಹೆಚ್ಚುವರಿ ಪೊಲೀಸ್ ಕಮಿಷನರ್ ಸುಬ್ರಹ್ಮಣ್ಯೇಶ್ವರ್ ರಾವ್ ಅವರು ಇನ್‌ಸ್ಪೆಕ್ಟರ್ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

**ಘಟನೆ ವಿವರ:** ‘ಪಾನಮತ್ತರಾಗಿದ್ದ ಇನ್‌ಸ್ಪೆಕ್ಟರ್ ಗೋಪಾಲಕೃಷ್ಣ, ತಡರಾತ್ರಿ 2.30ರ ಸುಮಾರಿಗೆ ಜೀವನಭಿಮಾನಗರ ಠಾಣೆ ವ್ಯಾಪ್ತಿಯ ಹೋಟೆಲೊಂದಕ್ಕೆ ಹೋಗಿದ್ದರು. ಕೊಠಡಿ ನೀಡುವಂತೆ ಕೌಂಟರ್‌ನಲ್ಲಿದ್ದ ಸಿಬ್ಬಂದಿಯನ್ನು ಒತ್ತಾಯಿಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹೋಟೆಲ್‌ನ ಎಲ್ಲ ಕೊಠಡಿಗಳು ಭರ್ತಿ ಆಗಿದ್ದವು. ಕೊಠಡಿ ಇಲ್ಲವೆಂದು ಸಿಬ್ಬಂದಿ ಹೇಳಿದ್ದರು. ಅಷ್ಟಕ್ಕೆ ಕೋಪಗೊಂಡ ಇನ್‌ಸ್ಪೆಕ್ಟರ್, ಗಲಾಟೆ ಮಾಡಿದ್ದರು. ಕರ್ತವ್ಯದಲ್ಲಿದ್ದ ಹೋಟೆಲ್‌ನ ಮಹಿಳಾ ವ್ಯವಸ್ಥಾಪಕಿ, ಸ್ಥಳಕ್ಕೆ ಬಂದು ಇನ್‌ಸ್ಪೆಕ್ಟರ್ ಅವರನ್ನು ಸಮಾಧಾನಪಡಿಸಲು ಮುಂದಾಗಿದ್ದರು.’

‘ವ್ಯವಸ್ಥಾಪಕಿ ಜೊತೆಗೆ ಅನುಚಿತವಾಗಿ ವರ್ತಿಸಿದ್ದ ಗೋಪಾಲಕೃಷ್ಣ, ‘ನಾನು ಇನ್‌ಸ್ಪೆಕ್ಟರ್. ನನಗೆ ಕೊಠಡಿ ಕೊಡುವುದಿಲ್ಲವೇ ? ನಿನ್ನ ಹೆಸರು ಏನು? ಯಾವ ಪ್ರದೇಶದಲ್ಲಿ ವಾಸವಿದಿಯಾ? ನಿನ್ನನ್ನು ಸುಮ್ಮನೇ ಬಿಡುವುದಿಲ್ಲ. ಹೋಟೆಲ್ ಸಹ ಬಂದ್ ಮಾಡಿಸುತ್ತೇನೆ’ ಎಂದು ಬೆದರಿಸಿದ್ದ. ಗಾಬರಿಗೊಂಡ ಸಿಬ್ಬಂದಿ, ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಗಸ್ತಿನಲ್ಲಿದ್ದ ಹೊಯ್ಸಳ ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಸ್ಥಿತಿ ತಿಳಿಗೊಳಿಸಿದ್ದರು’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

**ಎನ್‌ಸಿಆರ್ ದಾಖಲು:** ಘಟನೆಗೆ ಸಂಬಂಧಪಟ್ಟಂತೆ ಹೋಟೆಲ್ ಸಿಬ್ಬಂದಿ ಠಾಣೆಗೆ ದೂರು ನೀಡಿದ್ದು, ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಾಗಿದೆ. ನ್ಯಾಯಾಲಯದ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ತಿಳಿಸಿದ್ದಾರೆ.

### ‘ಪ್ರತ್ಯೇಕ ವಾಸ: ನಿತ್ಯವೂ ಮದ್ಯ ಸೇವನೆ’

‘ಇನ್‌ಸ್ಪೆಕ್ಟರ್ ಗೋಪಾಲಕೃಷ್ಣ, ಹಲವು ದಿನಗಳಿಂದ ಕುಟುಂಬದಿಂದ ದೂರವಾಗಿ ಪ್ರತ್ಯೇಕವಾಗಿ ವಾಸವಿದ್ದಾರೆ. ನಿತ್ಯವೂ ಮದ್ಯ ಸೇವನೆ ಮಾಡುತ್ತಿದ್ದು, ಹೋಟೆಲ್ ಕೊಠಡಿಗಳಲ್ಲೇ ಉಳಿದುಕೊಳ್ಳುತ್ತಿದ್ದರು’ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಕರ್ತವ್ಯ ವೇಳೆಯಲ್ಲೂ ಮದ್ಯ ಕುಡಿಯುತ್ತಿದ್ದ ಹಾಗೂ ಕರ್ತವ್ಯ ಲೋಪ ಎಸಗುತ್ತಿದ್ದ ಇನ್‌ಸ್ಪೆಕ್ಟರ್ ವಿರುದ್ಧ ಕ್ರಮ ಕೈಗೊಳ್ಳಲು ವರದಿ ಸಿದ್ಧಪಡಿಸಲಾಗುತ್ತಿತ್ತು. ಅಷ್ಟರಲ್ಲೇ ಹೋಟೆಲ್‌ನಲ್ಲಿ ಗಲಾಟೆ ಮಾಡಿಕೊಂಡು ಅಮಾನತಾಗಿದ್ದಾರೆ’ ಎಂದೂ ತಿಳಿಸಿದರು.

### ನಗರದಲ್ಲಿ ಇಂದು

**ಗಣೇಶ ಕಲಾಕೃತಿಗಳ ಪ್ರದರ್ಶನ:** ಶಕುಂತಲಾ ಜೈನ್, ಸ್ಥಳ: ಕಲಾರಾಧನಾ, #451, 7ನೇ ಮುಖ್ಯರಸ್ತೆ, ಜಯನಗರ 4ನೇ ಬ್ಲಾಕ್, ಬೆಳಿಗ್ಗೆ 11ರಿಂದ

**‘ಶ್ರೀದೇವಿ ಲಲಿತೋಪಖ್ಯಾನ’ ಪ್ರಸಂಗ:** ಆಯೋಜನೆ: ಪುತ್ತೂರು ಶ್ರೀ ಮಹಾಲಿಂಗೇಶ್ವರ ಪ್ರವಾಸಿ ಯಕ್ಷಗಾನ ಮಂಡಳಿ, ಸ್ಥಳ: ಅಯ್ಯಪ್ಪ ದೇವಸ್ಥಾನ, ಜಾಲಹಳ್ಳಿ, ಸಂಜೆ 5.30



ಶಕುಂತಲಾ ಜೈನ್ ಅವರ ಕಲಾಕೃತಿ

### ಚಿತ್ರಾವಳಿ




ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶಿಕ್ಷಣ ವಿಭಾಗದಲ್ಲಿ ವಿಶೇಷ ಸಾಧನೆ ಮಾಡಿದ ಆರ್ಕಿಡ್ಸ್ ಅಂತರರಾಷ್ಟ್ರೀಯ ಶಾಲೆಗೆ ನೀಡಿದ ಪ್ರಶಸ್ತಿಯನ್ನು ‘ವಿಶ್ವಗುರು ಭಾರತ’ದ ವಿಶೇಷ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಲಹಾ ಮಂಡಳಿಯ ಸದಸ್ಯ ಎಸ್‌. ಷಡಕ್ಷರಿ ಅವರಿಗೆ ಪ್ರದಾನ ಮಾಡಿದರು




ಪಿಂಚಣಿದಾರರ ಕುಂದುಕೊರತೆಗಳನ್ನು ಪರಿಹರಿಸಲು ಕಾರ್ಮಿಕರ ಭವಿಷ್ಯನಿಧಿ ಸಂಘಟನೆಯ ಪ್ರಾದೇಶಿಕ ಕಚೇರಿ (ಮಲ್ಲೇಶ್ವರ) ರಿಚ್ಮಂಡ್ ವೃತ್ತದ ವತಿಯಿಂದ ಆಗಸ್ಟ್ ತಿಂಗಳ ‘ಪಿಂಚಣಿ ಆದಾಲತ್’ ನಡೆಯಿತು. ‘ಪಿಂಚಣಿ ಆದಾಲತ್’ ಪ್ರತಿ ತಿಂಗಳು 10ನೇ ತಾರೀಖಿನಂದು ಕಚೇರಿ ಆವರಣದಲ್ಲಿ ನಡೆಯಲಿದೆ

ಈದ್ಗಾ ಮೈದಾನದಲ್ಲಿ ಗಣೇಶಮೂರ್ತಿ ಪ್ರತಿಷ್ಠಾಪನೆಗೆ ಅವಕಾಶ

# ‘ಸುಪ್ರೀಂ’ ಮೆಟ್ಟಿಲೇರಿದ ವಕ್ಫ್ ಮಂಡಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲು ಬಯಸುವವರಿಗೆ ಅನುಮತಿ ನೀಡುವ ಸಂಪೂರ್ಣ ಅಧಿಕಾರವನ್ನು ಕರ್ನಾಟಕ ಸರ್ಕಾರಕ್ಕೆ ನೀಡಿರುವ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ವಕ್ಫ್ ಮಂಡಳಿಯು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್ ಹಾಗೂ ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ಅವರನ್ನು ಒಳಗೊಂಡ ದ್ವಿಸದಸ್ಯ ಪೀಠದ ಎದುರು ಮಂಡಳಿ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ, ‘ಈ ವಿಚಾರವನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು’ ಎಂದು ಮನವಿ ಮಾಡಿದರು. ಪ್ರಕರಣದ ವಿಚಾರಣೆಯನ್ನು ಮಂಗಳವಾರ ನಡೆಸಲು ಪೀಠವು ಸಮ್ಮತಿ ವ್ಯಕ್ತಪಡಿಸಿತು.

ಕಪಿಲ್ ಸಿಬಲ್, ‘ಈದ್ಗಾ ಮೈದಾನದಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಅರ್ಜಿಗಳನ್ನು ಸರ್ಕಾರ ಪರಿಗಣಿಸಬಹುದು ಎಂದು ಹೈಕೋರ್ಟ್ ಆದೇಶ ಹೊರಡಿಸಿದೆ. ಈದ್ಗಾ ಮೈದಾನದಲ್ಲಿ ಆರು ದಶಕಗಳಿಂದ ಮುಸ್ಲಿಮರು ಪ್ರಾರ್ಥನೆ ಮಾಡುತ್ತಿದ್ದಾರೆ. ಒಂದು ವೇಳೆ ಗಣೇಶ ಪ್ರತಿಷ್ಠಾಪನೆಗೆ ಅವಕಾಶ ನೀಡಿದರೆ ಧಾರ್ಮಿಕ ಸಂಘರ್ಷಕ್ಕೆ ದಾರಿ ಮಾಡಿಕೊಟ್ಟಂತೆ ಆಗುತ್ತದೆ’ ಎಂದು ಎಚ್ಚರಿಸಿದರು. ‘ಪ್ರಕರಣದ ವಿಚಾರಣೆಯನ್ನು ಮಂಗಳವಾರ ನಡೆಸದಿದ್ದರೆ ಅನಗತ್ಯ ಉದ್ವಿಗ್ನತೆ ಸೃಷ್ಟಿಯಾಗಲಿದೆ’ ಎಂದೂ ಹೇಳಿದರು.

‘ಮೈದಾನದ ಮಾಲೀಕತ್ವ ಕಂದಾಯ ಇಲಾಖೆಗೆ ಸೇರಿದೆ’ ಎಂಬ ಸರ್ಕಾರದ ಆದೇಶವನ್ನು ಪ್ರಶ್ನಿಸಿ ವಕ್ಫ್ ಮಂಡಳಿಯು ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಮತ್ತು ಬೆಂಗಳೂರು ಜಿಲ್ಲೆ ಮುಸ್ಲಿಂ ಸಂಯುಕ್ತ(?) ಸಮಿತಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ಪೀಠವು, ಆ.25ರಂದು ವಿಚಾರಣೆ ನಡೆಸಿ ಮಧ್ಯಂತರ ಆದೇಶ ಹೊರಡಿಸಿತ್ತು.

‘ಈದ್ಗಾ ಮೈದಾನದಲ್ಲಿ ಮುಸ್ಲಿಂ ಸಮುದಾಯದವರು ರಮ್ಜಾನ್ ಮತ್ತು ಬಕ್ರೀದ್ ದಿನದಂದು ಮೈದಾನದಲ್ಲಿ ಪ್ರಾರ್ಥನೆ ಸಲ್ಲಿಸಬಹುದು. ಈ ಎರಡು ದಿನಗಳನ್ನು ಹೊರತು ಪಡಿಸಿ ಬೇರಾವುದೇ ದಿನ ಪ್ರಾರ್ಥನೆಗೆ ಅವಕಾಶ ಇರುವುದಿಲ್ಲ. ಬಿಬಿಎಂಪಿ ಮತ್ತು ಸರ್ಕಾರ ಮೈದಾನದಲ್ಲಿ ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆ ಆಚರಣೆಗೆ ಅನುಮತಿ ನೀಡಬಹುದು ಮತ್ತು ಮೈದಾನವನ್ನು ಆಟದ ಬಳಕೆಗೆ ಮಾತ್ರವೇ ಸೀಮಿತಗೊಳಿಸಬೇಕು’ ಎಂದು ಏಕಸದಸ್ಯ ನ್ಯಾಯಪೀಠ ನಿರ್ದೇಶಿಸಿತ್ತು.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಲ್ಲಿಸಿದ ಮೇಲ್ಮನವಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ಮತ್ತು ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ ಆಗಸ್ಟ್ 26ರಂದು ವಿಚಾರಣೆ ನಡೆಸಿತ್ತು.

‘ಏಕಸದಸ್ಯ ನ್ಯಾಯಪೀಠ ನೀಡಿರುವ ನಿರ್ದೇಶನಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಆದಾಗ್ಯೂ, ಈದ್ಗಾ ಮೈದಾನದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಅನುಮತಿ ಕೋರಿ ಬೆಂಗಳೂರು ಜಿಲ್ಲಾಧಿಕಾರಿ ಸ್ವೀಕರಿಸಿರುವ ಮನವಿ ಪತ್ರಗಳನ್ನು ಇದೇ 31ರಿಂದ ಸೀಮಿತ ಅವಧಿಗೆ ಪರಿಗಣಿಸಿ ಸರ್ಕಾರ ಸೂಕ್ತ ಆದೇಶ ಹೊರಡಿಸಬಹುದು’ ಎಂದು ವಿಭಾಗೀಯ ನ್ಯಾಯಪೀಠ ಸ್ಪಷ್ಟಪಡಿಸಿತ್ತು.

# ‘ಕಮಿಷನ್ ಮೇಲ್ಸೇತುವೆ’: ನಾಮಫಲಕ ಅಳವಡಿಸಿದ ಎಎಪಿ

ಪ್ರಜಾವಾಣಿ ವಾರ್ತೆ



ಪ್ರತಿಭಟನಾನಿರತ ಎಎಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದುಕೊಂಡ ದೃಶ್ಯ

ಬೆಂಗಳೂರು: ನಗರದ ಶಿವಾನಂದ ಮೇಲ್ಸೇತುವೆಯ ಬಳಿ (ಸ್ಟೀಲ್ ಬ್ರಿಡ್ಜ್) ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಕರ್ತರು ‘ಶೇ 40 ಕಮಿಷನ್ ಮೇಲ್ಸೇತುವೆ’ ಎಂಬ ನಾಮಫಲಕ ಅಳವಡಿಸಿ, ಸೋಮವಾರ ವಿನೂತನ ಪ್ರತಿಭಟನೆ ನಡೆಸಿದರು.

ಫಲಕ ತೆರವು ಮಾಡುವಂತೆ ಪೊಲೀಸರು ಸೂಚನೆ ನೀಡಿದರೂ ಪ್ರತಿಭಟನೆ ಮುಂದುವರಿಸಿದಾಗ ಪೊಲೀಸರು–ಎಎಪಿ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು. ಬಳಿಕ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಬಿಡುಗಡೆ ಮಾಡಿದರು. ಈ ವೇಳೆ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು.

‘ಆರಂಭದಲ್ಲಿ ಸ್ಟೀಲ್ ಬ್ರಿಡ್ಜ್‌ಗೆ ₹ 19 ಕೋಟಿ ಅನುದಾನ ನಿಗದಿ ಪಡಿಸಲಾಗಿತ್ತು. ಕಾಮಗಾರಿ ನಿಧಾನಗತಿಯಲ್ಲಿ ನಡೆದು ಅನುದಾನವು ₹ 39 ಕೋಟಿಗೆ ಏರಿಕೆಯಾಗಿದೆ. ಆದರೂ ಕಾಮಗಾರಿ ಕಳಪೆಯಾಗಿದೆ. ರಾಜ್ಯ ಸರ್ಕಾರವು ಜನರ ಹಣವನ್ನು ಲೂಟಿ ಮಾಡಿದೆ’ ಎಂದು ನಗರ ಅಧ್ಯಕ್ಷರಾದ ಮೋಹನ್ ದಾಸರಿ ದೂರಿದರು.

‘ಶೇ 40 ಕಮಿಷನ್‌ನಲ್ಲಿ ಮುಳುಗಿರುವ ಬಿಜೆಪಿಗೆ ಮುಂದೆ ತಕ್ಕಪಾಠ ಕಲಿಸಲಾಗುವುದು. ನಗರದಲ್ಲಿ ಇದೇ ರೀತಿ ಅನೇಕ ಕಾಮಗಾರಿಗಳಿಗೆ 3ರಿಂದ 4 ಪಟ್ಟು ಅನುದಾನ ಹೆಚ್ಚಿಸಲು ಸಮಯ ವ್ಯರ್ಥ ಮಾಡಲಾಗಿದೆ. ಎಲ್ಲ ಪ್ರಕರಣಗಳ ಸಮಗ್ರ ತನಿಖೆ ಆಗಬೇಕು’ ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಉಪಾಧ್ಯಕ್ಷ ವಿಜಯ್ ಶರ್ಮಾ, ಮುಖಂಡರಾದ ಜಗದೀಶ್ ವಿ. ಸದಂ, ಸುರೇಶ್ ರಾಥೋಡ್, ಚನ್ನಪ್ಪಗೌಡ ನಲ್ಲೂರು, ಶಾಶಾವಲಿ, ಉಷಾ ಮೋಹನ್, ಸುಹಾಸಿನಿ ಫಣಿರಾಜ್, ಗೋಪಿನಾಥ್ ಭಾಗಿ ಆಗಿದ್ದರು.

# ‘ರುಪ್ಸಾ ಹೆಸರು ದುರ್ಬಳಕೆ’

## ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘದ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನುದಾನ ರಹಿತ ಖಾಸಗಿ ಶಾಲೆಗಳ ಸಂಘದಿಂದ (ರುಪ್ಸಾ) ಉಚ್ಚಾಟಿತಗೊಂಡಿರುವ ಲೋಕೇಶ್ ತಾಳಿಕಟ್ಟೆ, ವೈಯಕ್ತಿಕ ಲಾಭಕ್ಕಾಗಿ ಶಿಕ್ಷಣ ಇಲಾಖೆ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ನಮ್ಮ ಸಂಘದ ಹೆಸರನ್ನು ದುರ್ಬಳಕೆ ಮಾಡಿದ ಅವರ ಮೇಲೆ ಕಾನೂನು ಕ್ರಮಕ್ಕೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗುವುದು’ ಎಂದು ರುಪ್ಸಾ ಪ್ರಧಾನ ಕಾರ್ಯದರ್ಶಿ ಶಶಿಧರ್ ದಿಂಡೂರ್ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಳೆದ ವರ್ಷವೇ ತಾಳಿಕಟ್ಟೆ ಅವರನ್ನು ಉಚ್ಚಾಟನೆ ಮಾಡಲಾಗಿತ್ತು. ಅವರು ನಮ್ಮ ಸಂಘದ ಹೆಸರಿನಲ್ಲಿಯೇ ಮತ್ತೊಂದು ನಕಲಿ ಸಂಘ ರಚಿಸಿದ್ದರು. ಇವರ ವಂಚನೆ ದೃಢಪಟ್ಟ ಬಳಿಕ ಸಹಕಾರ ಸಂಘಗಳ ಉಪನಿಬಂಧಕರು, ‘ರುಪ್ಸಾ’ ಸಂಘದ ಹೆಸರು ಹಾಗೂ ಲೋಗೊ ಬಳಸದಂತೆ ಆದೇಶ ನೀಡಿದ್ದಾರೆ‘ ಎಂದರು.

‘ಶಿಕ್ಷಣ ಸಂಸ್ಥೆಗಳ ಮಾನ್ಯತೆ ನವೀಕರಣ ಆನ್‌ಲೈನ್ ಮೂಲಕ ಮಾಡಲಾಗುತ್ತಿದೆ. ಆರ್‌ಟಿಇ ಅಡಿ ಹೊಸದಾಗಿ ಪ್ರವೇಶಾತಿ ನೀಡಲಾಗುತ್ತಿಲ್ಲ. ಹೀಗಾಗಿ, ಭ್ರಷ್ಟಾಚಾರದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಕೆಲವರ ಓಲೈಕೆಗಾಗಿ ಅವರು ‘ಆರ್‌ಟಿಇ ಶುಲ್ಕ ಪಾವತಿಸಲು ಶೇ 40ರಷ್ಟು ಲಂಚ ನೀಡಬೇಕಿದೆ’ ಎಂದು ಹೇಳಿದ್ದಾರೆ‘ ಎಂದರು.

### ‘ತಪ್ಪು ಮಾಹಿತಿ: ಮಾನನಷ್ಟ ಮೊಕದ್ದಮೆ’

‘ನನ್ನ ಮತ್ತು ಸಂಘಟನೆ ಅಸ್ತಿತ್ವದ ವಿರುದ್ಧ ಶಶಿಧರ್ ದಿಂಡೂರು ಮತ್ತು ಹಾಲ್ನೂರು ಲೇಪಾಕ್ಷಿ ತಪ್ಪುಮಾಹಿತಿ ನೀಡಿದ್ದಾರೆ. ಕಳೆದ ವರ್ಷ ಕೂಡ ಇದೇ ವ್ಯಕ್ತಿಗಳು ಸುದ್ದಿಗೋಷ್ಠಿ ನಡೆಸಿದ್ದರು. ಅವರ ಕಾನೂನುಬಾಹಿರ ಹೇಳಿಕೆಗಳ ವಿರುದ್ಧ ಮಾನನಷ್ಟ ಮೊಕದ್ದಮೆ ಹಾಗೂ ನ್ಯಾಯಾಂಗ ನಿಂದನೆ ಪ್ರಕರಣ ದಾಖಲು ಮಾಡುತ್ತೇನೆ’ ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಸಂಘದ (ರುಪ್ಸಾ) ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಪ್ರತಿಕ್ರಿಯಿಸಿದ್ದಾರೆ.

‘ಅಧಿಕಾರಿಗಳ ಭ್ರಷ್ಟಾಚಾರದ ಕುರಿತು ರಾಜ್ಯದಾದ್ಯಂತ ಇರುವ ಖಾಸಗಿ ಶಾಲೆಗಳು ಧ್ವನಿ ಎತ್ತಿದಾಗಲೆಲ್ಲಾ ಸರ್ಕಾರದ ಪರ ಅವರು ವಕಾಲತ್ತು ವಹಿಸುತ್ತಾರೆ. ಜನರು ಮತ್ತು ಮಾಧ್ಯಮಗಳಗಮನ ಬೇರೆಡೆಗೆ ಸೆಳೆಯುವ ತಂತ್ರ ಮಾಡುತ್ತಾರೆ. ಹಿಂದೆ, ನಕಲಿ ದಾಖಲೆಗಳನ್ನು ಸೃಷ್ಟಿಸಿ ಸಹಕಾರ ಇಲಾಖೆಯ ಅಧಿಕಾರಿಗಳ ಸಹಾಯದಿಂದ ಪಡೆದಿದ್ದ ಆದೇಶವನ್ನು ಹೈಕೋರ್ಟ್ ಅಮಾನ್ಯಗೊಳಿಸಿದೆ’ ಎಂದೂ ಸ್ಪಷ್ಟಪಡಿಸಿದ್ದಾರೆ.

### ಈದ್ಗಾದಲ್ಲಿ ಮೂರು ದಿನ ಗಣೇಶೋತ್ಸವಕ್ಕೆ ಅನುಮತಿ

ಹುಬ್ಬಳ್ಳಿ: ‘ಪ್ರಸ್ತುತ ವರ್ಷದಿಂದ ನಗರದ ಈದ್ಗಾ ಮೈದಾನದಲ್ಲಿ ಸಾರ್ವಜನಿಕ ಗಣೇಶೋತ್ಸವಕ್ಕೆ ಅನುಮತಿ ನೀಡಲಾಗುವುದು’ ಎಂದು ಮೇಯರ್ ಈರೇಶ ಅಂಚಟಗೇರಿ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪಾಲಿಕೆ ಸಾಮಾನ್ಯ ಸಭೆಯ ಸದನ ಸಮಿತಿ ವರದಿ ಅನ್ವಯ ಪೊಲೀಸ್ ಇಲಾಖೆ, ಜಿಲ್ಲಾಡಳಿತದೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗಿದೆ. ಗಣೇಶ ಪ್ರತಿಷ್ಠಾಪನೆಗೆ ಅನುಮತಿ ನೀಡುವಂತೆ ಪಾಲಿಕೆಗೆ 6 ಸಂಘಟನೆಗಳು ಮನವಿ ಸಲ್ಲಿಸಿದ್ದು, ಅವುಗಳಲ್ಲಿ 1 ಸಂಘಟನೆಗೆ ಮಾತ್ರ ಅವಕಾಶ ನೀಡಲಾಗುವುದು ಪ್ರಸ್ತುತ ವರ್ಷ 3 ದಿನಗಳವರೆಗೆ ಮಾತ್ರ ಉತ್ಸವಕ್ಕೆ ಅವಕಾಶ ನೀಡಲಾಗಿದೆ. ಮುಂಬರುವ ವರ್ಷಗಳಲ್ಲಿ ಪರಿಸ್ಥಿತಿ ಅವಲೋಕಿಸಿ ಎಷ್ಟು ದಿನ ಎಂದು ನಿರ್ಧರಿಸಲಾಗುವುದು’ ಎಂದರು.

‘6 ಸಂಘಟನೆಗಳಲ್ಲಿ ಯಾವ ಸಂಘಟನೆಗೆ ಗಣೇಶ ಪ್ರತಿಷ್ಠಾಪಿಸಲು ಅವಕಾಶ ನೀಡಬೇಕು ಎನ್ನುವುದು ಮೇಯರ್ ವಿವೇಚನೆಗೆ ಬಿಡಲಾಗಿದೆ. ಮಂಗಳವಾರ ಬೆಳಿಗ್ಗೆ ಸದನ ಸಮಿತಿ ಸದಸ್ಯರ ಜೊತೆ ಚರ್ಚಿಸಿ ಒಂದು ಸಂಘಟನೆ ಹೆಸರು ಅಂತಿಮಗೊಳಿಸಲಾಗುವುದು. ಅನುಮತಿಗೆ ಅರ್ಜಿ ಸಲ್ಲಿಸಿದ್ದ ಉಳಿದ ಸಂಘಟನೆಗಳು ಅವರಿಗೆ ಸಹಕರಿಸಬೇಕು. ಉಳಿದ ಗಣೇಶೋತ್ಸವ ಸಮಿತಿಗೆ ಇರುವ ನಿಯಮಾವಳಿಗಳೇ, ಈದ್ಗಾ ಮೈದಾನದಲ್ಲಿ ಪ್ರತಿಷ್ಠಾಪಿಸುವ ಗಣೇಶೋತ್ಸವ ಸಮಿತಿಗೂ ಅನ್ವಯವಾಗಲಿದೆ’ ಎಂದರು.

# ಮೈಸೂರಲ್ಲಿ ಸಿದ್ದರಾಮಯ್ಯ ಆಸ್ತಿ ಎಷ್ಟು?: ವಿ.ಸೋಮಣ್ಣ



ಬೆಂಗಳೂರು: ‘ನೀವು (ಸಿದ್ದರಾಮಯ್ಯ) ಮೈಸೂರಿನಲ್ಲಿ ಯಾರ್‍ಯಾರ ಹೆಸರಲ್ಲಿ ಎಲ್ಲೆಲ್ಲಿ ಆಸ್ತಿ ಮಾಡಿದ್ದೀರಿ ಹೇಳ್ತಾ? ಅವೆಲ್ಲಾ ಮಾಹಿತಿ ಇದೆ. ಅರ್ಕಾವತಿ ಬಡಾವಣೆಯಲ್ಲಿ ರೀ–ಡೂ ಹೆಸರಲ್ಲಿ ಏನೇನು ಮಾಡಿದ್ದೀರಿ ಎಂಬುದೂ ಗೊತ್ತು. ಕಾಲ ಬಂದಾಗ ಎಲ್ಲವನ್ನು ಬಿಚ್ಚಿಡುತ್ತೇನೆ’ ಎಂದು ವಸತಿ ಸಚಿವ ವಿ.ಸೋಮಣ್ಣ ಕಿಡಿ ಕಾರಿದ್ದಾರೆ.

‘ಗೋವಿಂದರಾಜ ನಗರದಲ್ಲಿ ಕೆಲವರ ಮಾತು ಕೇಳಿ ಸಿದ್ದರಾಮಯ್ಯ ನನ್ನ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದಾರೆ. ನಾನು ಸಚಿವನಾದ ಮೇಲೆ ಒಂದು ಲಕ್ಷ ಮನೆಗಳ ಕಾರ್ಯಾದೇಶವನ್ನು ರದ್ದು ಮಾಡಿರುವುದಾಗಿ ಸುಳ್ಳು ಹೇಳಿದ್ದಾರೆ. ಅವರ ಸರ್ಕಾರದ ಅವಧಿಯಲ್ಲಿ ಕಾರ್ಯಾದೇಶ ಮಾಡಿದ್ದು ಬಿಟ್ಟರೆ ಏನೂ ಮಾಡಿಲ್ಲ. ಜಮೀನು ವಶಕ್ಕೆ ತೆಗೆದುಕೊಂಡು, ಮನೆಗಳನ್ನು ಕಟ್ಟಿಸಿ ಕೊಡುತ್ತಿರುವುದು ನಮ್ಮ ಸರ್ಕಾರ’ ಎಂದು ಸುದ್ದಿಗೋಷ್ಠಿಯಲ್ಲಿ ಅವರು ಹರಿಹಾಯ್ದರು.


‘ನನ್ನ ಬಗ್ಗೆ ಏಕ ವಚನದಲ್ಲಿ ಮಾತನಾಡಿದ್ದಾರೆ. ನಾನೇನು ಅವರ ಮನೆಯಲಿ ಜೀತಕ್ಕೆ ಇಲ್ಲ. ನಾನು ಶೇ 18 ಲಂಚ ತೆಗೆದುಕೊಳ್ಳುತ್ತಿದ್ದೇನೆ ಎಂದು ದೂರಿದ್ದಾರೆ. ನನ್ನ ಎಕ್ಕಾನೂ ಲಂಚ ಮುಟ್ಟೊಲ್ಲ. ನೀವು ಅರ್ಕಾವತಿ ಬಡಾವಣೆಯಲ್ಲಿ ಸುಮಾರು 300 ಎಕರೆಯಷ್ಟು ರೀ–ಡೂ ಮಾಡಿದಿರಲ್ಲ. ಎಷ್ಟು ಎಕರೆಗೆ ಎಷ್ಟು ಬಂತು ಹೇಳ್ತೀರಾ? ನಾನು ಮೂಲತಃ ಬೆಂಗಳೂರಿನವನು. 1983 ರಲ್ಲೇ ರಾಜಕೀಯಕ್ಕೆ ಪ್ರವೇಶ ಮಾಡಿದವನು. ಬಾಯಿ ಬಂದಂತೆ ಮಾತನಾಡುವುದನ್ನು ಕೇಳಿಕೊಂಡು ಸುಮ್ಮನಿರಲು ಸಾಧ್ಯವಿಲ್ಲ. ಮಾತನಾಡುವಾಗ ನಾಲಿಗೆಗೂ ಮೆದುಳಿಗೂ ಸಂಪರ್ಕ ಇರಬೇಕು’ ಎಂದು ಸಿದ್ದರಾಮಯ್ಯ ವಿರುದ್ಧ ಹರಿಹಾಯ್ದರು.

‘ಮುಂದಿನ ಚುನಾವಣೆಯಲ್ಲಿ ನನ್ನನ್ನು ಸೋಲಿಸಿ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಅವರು ಕಳೆದ ಚುನಾವಣೆಯಲ್ಲಿ ಸೋತಿಲ್ಲವೆ? ಇವರೇನು ಅಜೇಯರೇ? ರಾಜ್ಯದಲ್ಲಿ ಅವರೊಬ್ಬರೇ ಮಾಸ್ ಲೀಡರ್ ಅಲ್ಲ. ಅವರು ಆ ಭ್ರಮೆಯಲ್ಲಿದ್ದಾರೆ. ನಾನೇನಾದರೂ ತಪ್ಪು ಮಾಡಿದ್ದರೆ ನೇಣಿಗೆ ಹೋಗಲೂ ಸಿದ್ಧ. ನನ್ನ ಕ್ಷೇತ್ರದಲ್ಲಿ ಕನಕ ಭವನ ಮಾಡಿದ್ದು ಅವರಿಗೆ ಸಹಿಸಲು ಆಗುತ್ತಿಲ್ಲ’ ಎಂದು ಕುಟುಕಿದರು.



# ಬದಲಾವಣೆಗೆ ಸಿದ್ಧರಾಗಿ

**ಬದಲಾವಣೆಯನ್ನು ಕೆಲವರು ಸವಾಲಿನ ರೂಪದಲ್ಲಿ ತೆಗೆದುಕೊಳ್ಳುತ್ತಾರೆ. ಇನ್ನು ಕೆಲವರಿಗೆ ಅದೊಂದು ಕುತೂಹಲ. ಹಲವರಿಗೆ ಅದರ ಬಗ್ಗೆ ಹಿಂಜರಿಕೆ. ಮತ್ತಷ್ಟು ಮಂದಿಗೆ ಅದರ ಕುರಿತಾಗಿ ಭೀತಿ...**



**ಡಾ. ಕಿರಣ್ ವಿ. ಎಸ್.**

**'ಜಗತ್ತಿನಲ್ಲಿ** ಬದಲಾವಣೆಯೇ ಶಾಶ್ವತ' (Change is the only permanent thing in the world) – ಎನ್ನುವ ಮಾತಿದೆ. ಆದರೆ ಬಹುತೇಕರಿಗೆ ಬದಲಾವಣೆ ಸುಲಭವಲ್ಲ. ಯಾವುದೋ ಅನುಕೂಲಕರ ಸ್ಥಿತಿಗೆ ಹೊಂದಿಕೊಂಡ ಮನಸ್ಸನ್ನು ಅದರಿಂದ ಹೊರದೂಡುವುದು ಪ್ರತಿರೋಧವಿಲ್ಲದೆ ಸಾಧ್ಯವಾಗುವುದಿಲ್ಲ. ಅದರಲ್ಲೂ ಬದಲಾವಣೆಯೆಂಬುದು ಭೌತಿಕ ಮತ್ತು ಮಾನಸಿಕ ಕ್ಲೇಶಗಳನ್ನು ಉಂಟು ಮಾಡುವಂಥದ್ದಾಗಿದ್ದರೆ ಮತ್ತೂ ಕಷ್ಟ. ಒಂದೆಡೆ ಬದಲಾವಣೆ ಅನಿವಾರ್ಯ ಎಂಬುದನ್ನು ಒಪ್ಪಬೇಕು; ಮತ್ತೊಂದೆಡೆ ಬದಲಾವಣೆ ಆಗಬಾರದು ಎಂದು ಬಯಸುವ ಮನಃಸ್ಥಿತಿಯನ್ನೂ ಕಡೆಗಣಿಸಲಾಗದು. ಈ ತಾಕಲಾಟವು ಜೀವನದ ಪ್ರಮುಖ ಸಂಘರ್ಷಗಳಲ್ಲಿ ಒಂದು.

ಜನಪ್ರಿಯ ಹ್ಯಾರಿ ಪಾಟರ್ ಸರಣಿಯಲ್ಲಿ 'ಕತ್ತಲೆ ಮತ್ತು ಸಾವಿನಲ್ಲಿ ಅಜ್ಞಾತದ ಭಯವಿದೆ' ಎನ್ನುವ ಮಾತು ಬರುತ್ತದೆ. ಜೀವನದಲ್ಲಿ ಆಗುವ ಬದಲಾವಣೆಗಳ ಹಿಂದಿನ ಭೀತಿಗೂ 'ಅಜ್ಞಾತದ ಭಯ'ವೇ ಕಾರಣ. ಎಷ್ಟೋ ಮಂದಿ ಈ ಬದಲಾವಣೆಗಳನ್ನು ಸ್ವೀಕರಿಸಲಾಗದೆ ಜೀವನದಲ್ಲಿ ಹಿಂದಡಿಯಿಡುತ್ತಾರೆ. ನೌಕರಿಯಲ್ಲಿ ಬಡ್ತಿಯ ಜೊತೆಗೆ ಬರುವ ಹೆಚ್ಚಿನ ಜವಾಬ್ದಾರಿಗಳಿಗೆ ಹೆದರಿ ಬಡ್ತಿಯನ್ನು ನಿರಾಕರಿಸಿದವರಿದ್ದಾರೆ. ಪರಿಣಾಮಗಳಿಗೆ ಹೆದರಿ ಪ್ರಯತ್ನವನ್ನೇ ಮಾಡದವರನ್ನು ನೋಡಿರುತ್ತೇವೆ. ಹೆದರಿಕೆಯ ನಿಲುವಿಗೆ ಪೂರಕವಾಗುವಂತಹ ಕಥೆಗಳನ್ನು, ನೆಪಗಳನ್ನು, ಊಹೆಗಳನ್ನು ಹೆಣೆದು ತಮ್ಮನ್ನು ತಾವು ಸಮಾಧಾನ ಮಾಡಿಕೊಳ್ಳುವವರಿಗೆ ಕೊರತೆಯಿಲ್ಲ. ತಮ್ಮಂತಹ ನಿಲುವಿನ ಮತ್ತೊಬ್ಬರನ್ನು ಹುಡುಕಿ, ಅವರ ಜೊತೆಗೆ ನಿರ್ಧಾರಗಳನ್ನು ಸಮರ್ಥಿಸಿಕೊಳ್ಳುವುದು ಅನೇಕರ ವಿಧಾನ.

ಆದರೆ ಜೀವನವು ಬದಲಾವಣೆಗಳನ್ನು ಅಪ್ಪಿಕೊಳ್ಳುವುದರಲ್ಲಿದೆಯೇ ಹೊರತು, ಅದನ್ನು ನಿರಾಕರಿಸುವುದರಲ್ಲಿ ಅಲ್ಲ. ಈ ವಿಷಯದಲ್ಲಿ ನಮ್ಮ ಮನಃಸ್ಥಿತಿಯ ಬದಲಾವಣೆ ಪ್ರಮುಖ ಘಟ್ಟ. ಬದಲಾವಣೆ ಚಿಕ್ಕದೋ ದೊಡ್ಡದೋ, ಪ್ರತ್ಯಕ್ಷವೋ ಪರೋಕ್ಷವೋ, ನಮ್ಮ ನಿಯಂತ್ರಣದಲ್ಲಿ ಇದೆಯೋ ಇಲ್ಲವೋ, ಅದು ಆಗುತ್ತಲೇ ಇರುತ್ತದೆ. ಬದುಕಿನ ಬದಲಾವಣೆಗಳ ಜೊತೆಗೆ ಎಷ್ಟು ಬೇಗ, ಎಷ್ಟು ಚೆನ್ನಾಗಿ ಸಮತೋಲನ ಸಾಧಿಸಬಲ್ಲೆವು ಎಂಬುದರ ಮೇಲೆ ಮನಸ್ಸಿನ ಪಕ್ವತೆ ನಿರ್ಧಾರವಾಗುತ್ತದೆ. ನಾವಿಂದು ಯಾವ ಪರಿಸ್ಥಿತಿಗೆ ಚೆನ್ನಾಗಿ ಹೊಂದಿಕೊಂಡು 'ಇದು ಬದಲಾಗಬಾರದು' ಎಂದು ಬಯಸುತ್ತೇವೆಯೋ, ಅದು ಮೊದಲಿನಿಂದಲೂ ಹಾಗೆಯೇ ಇರಲಿಲ್ಲ; ಬದಲಿಗೆ, 'ಯಾವ್ಯಾವುದೋ ಸ್ಥಿತ್ಯಂತರಗಳ ಮೂಲಕ ಹಾದು ಅದು ಇಂದು ಈ ಹಂತವನ್ನು ತಲುಪಿದೆ' ಎಂಬ ಅರಿವನ್ನು ಬೆಳೆಸಿಕೊಂಡರೆ ಬದಲಾವಣೆಗಳನ್ನು ಸ್ವೀಕರಿಸುವುದು ಸುಲಭವಾಗುತ್ತದೆ.

ಬದಲಾವಣೆಗೆ ಅನೇಕ ರೀತಿಯ ಸ್ಪಂದನಗಳಿವೆ. ಕೆಲವರು ಅದನ್ನು ಸವಾಲಿನ ರೂಪದಲ್ಲಿ ತೆಗೆದುಕೊಳ್ಳುತ್ತಾರೆ. ಇನ್ನು ಕೆಲವರಿಗೆ ಅದೊಂದು ಕುತೂಹಲ. ಹಲವರಿಗೆ ಅದರ ಬಗ್ಗೆ ಹಿಂಜರಿಕೆ. ಮತ್ತಷ್ಟು ಮಂದಿಗೆ ಅದರ ಕುರಿತಾಗಿ ಭೀತಿ. ಇನ್ನಷ್ಟು ಮಂದಿಗೆ ಸಮಾಜದ ಪ್ರತಿಕ್ರಿಯೆಯ ಬಗ್ಗೆ ಭಯ. ಅನೇಕರಿಗೆ ಭವಿಷ್ಯದ ಚಿಂತೆ. ಹೀಗೆ, ಬದಲಾವಣೆ ಹಲವರಲ್ಲಿ ಹಲವಾರು ಪ್ರತಿಸ್ಪಂದನಗಳನ್ನು ಉಂಟುಮಾಡಬಲ್ಲದು. ಈ ಪೈಕಿ ಬದಲಾವಣೆಗಳನ್ನು ಹೊಸ ಅನುಭವದಂತೆ ಭಾವಿಸುವವರು ಅದರ ನಿರ್ವಹಣೆಯಲ್ಲಿ ಹೆಚ್ಚು ಸಫಲರಾಗುತ್ತಾರೆ ಎಂದು ಹೇಳಲಾಗಿದೆ. ಬದಲಾವಣೆ ಕಡ್ಡಾಯವಾದಾಗ ಅದನ್ನು ಹೇಗಾದರೂ ನಿಭಾಯಿಸಲೇ ಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಭಾವನೆಗಳನ್ನು, ಅನುಭವಗಳನ್ನು, ಸವಾಲುಗಳನ್ನು, ಕಾರ್ಯಸೂಚಿಗಳನ್ನು ಬರೆಯುವುದು ಒಳಿತೆಂದು ತಜ್ಞರ ಅಭಿಮತ. ಒಂದೆಡೆ ಕ್ರಮಬದ್ಧವಾಗಿ ಇವುಗಳನ್ನು ದಾಖಲಿಸುವುದು ಹೆಚ್ಚು ವಿಶ್ವಾಸವನ್ನು ನೀಡುತ್ತದೆ; ಮುಂದಿನ ಬಾರಿ ಬದಲಾವಣೆಗಳನ್ನು ಎದುರಿಸುವಾಗ ಸಹಾಯಕಾರಿಯಾಗುತ್ತದೆ. ಮನಸ್ಸಿನ ಅಮೂರ್ತ ಭಾವಗಳು ಲಿಖಿತರೂಪಕ್ಕೆ ಬಂದಾಗ ಹೆಚ್ಚು ಸ್ಪಷ್ಟವಾಗುತ್ತವೆ. ಆಗ ಅವುಗಳ ಪರಿಹಾರೋಪಾಯಗಳನ್ನು ಚೆನ್ನಾಗಿ ಮಾಡಬಹುದು.

> **ಕೆಲವರು ಬದಲಾವಣೆಗಳನ್ನು ಸ್ವೀಕರಿಸಲಾಗದೆ ಜೀವನದಲ್ಲಿ ಹಿಂದಡಿಯಿಡುತ್ತಾರೆ. ಬದಲಾವಣೆಯನ್ನು ಒಪ್ಪುವುದು ಸೋಲಿನ ಲಕ್ಷಣವೇನಲ್ಲ**

ಕೆಲವು ಬದಲಾವಣೆಗಳು ಬಹಳ ಪ್ರಭಾವ ಬೀರಿದರೂ, ನಮ್ಮ ನಿಯಂತ್ರಣಕ್ಕೆ ಮೀರಿದವು. ದಶಕಗಳ ಗೆಳೆಯನ ಮರಣ, ಹಲವಾರು ವರ್ಷಗಳ ಉದ್ಯೋಗವನ್ನು ಏಕಾಏಕಿ ಕಳೆದುಕೊಳ್ಳುವುದು, ವಸತಿಯ ಬದಲಾವಣೆ ಮೊದಲಾದುವುಗಳು ನಮ್ಮನ್ನು ಬಹುವಾಗಿ ಬಾಧಿಸಿದರೂ, ಅವುಗಳ ಮೇಲೆ ನಮ್ಮ ಹತೋಟಿ ಇರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಹೊಸ ಪರಿಸ್ಥಿತಿಯನ್ನು ಸಾಧ್ಯವಾದಷ್ಟೂ ಬೇಗನೆ ಒಪ್ಪಿಕೊಳ್ಳಬೇಕಾಗುತ್ತದೆ. ನಿರಾಶೆ ಮತ್ತು ಋಣಾತ್ಮಕ ಚಿಂತನೆಗಳು ಮನಸ್ಸನ್ನು ಕುಗ್ಗಿಸುತ್ತವೆ. ಹೊಸ ಸಂದರ್ಭಕ್ಕೆ ಅನುಗುಣವಾಗಿ ಏನೆಲ್ಲಾ ಮಾಡಬಹುದು ಎನ್ನುವ ನಿಟ್ಟಿನಲ್ಲಿ ಧನಾತ್ಮಕ ಚಿಂತನೆ ಸಹಾಯಕ. ಈ ದಿಶೆಯಲ್ಲಿ ತಾಳ್ಮೆ, ಸೂಕ್ಷ್ಮವಾದ ಗಮನಿಸುವಿಕೆ, ಎಚ್ಚರಗಳು ಬಹಳ ಮುಖ್ಯ. ಬದಲಾವಣೆಯನ್ನು ಒಪ್ಪುವ ದಿಕ್ಕಿನಲ್ಲಿ ಹೊಸದೊಂದು ಕಲಿಕೆ ಅಗತ್ಯ ಎಂದಾಗ, ಅದನ್ನು ಶೀಘ್ರವಾಗಿ ಮಾಡುವುದು ಹೆಚ್ಚು ಅನುಕೂಲಕಾರಿ. ಇದರಿಂದ ಬದಲಾವಣೆಯತ್ತ ಹೆಚ್ಚಿನ ಜ್ಞಾನ ಒದಗುತ್ತದೆ; ಅದನ್ನು ನಿಭಾಯಿಸುವ ವಿಶ್ವಾಸ ಮೂಡುತ್ತದೆ.

ಕೆಲವು ಬದಲಾವಣೆಗಳು ಸಮಯವನ್ನು ನೀಡುತ್ತವೆ; ಕೆಲವು ಹಠಾತ್ತಾಗಿ ಆಗುತ್ತವೆ. ಆದರೆ, ಯಾವುದೇ ಬದಲಾವಣೆಗೂ ಹೊಂದಿಕೊಳ್ಳಲು ಸಮಯ ಹಿಡಿಯುತ್ತದೆ. ದೊಡ್ಡಮೊತ್ತದ ಲಾಟರಿ ಬಹುಮಾನ ಗೆದ್ದ ಅನೇಕರು ಅದರಿಂದಾಗುವ ಬದಲಾವಣೆಗಳನ್ನು ನಿರ್ವಹಿಸಲಾಗದೆ ಬಹಳಷ್ಟು ಹಣವನ್ನು ಕಳೆದುಕೊಳ್ಳುತ್ತಾರೆ. ಹೊಸ ಪರಿಸ್ಥಿತಿಯ ಹೊಂದಾಣಿಕೆಗೆ ಸಮಯ ನೀಡಬೇಕು; ಈ ಸಮಯದಲ್ಲಿ ಬಲವಾದ ವಿವೇಚನೆ ಇರಬೇಕು. ಭವಿಷ್ಯದ ಕನಸುಗಳಿಗಿಂತ ವರ್ತಮಾನದ ವಾಸ್ತವವನ್ನು ಸರಿಯಾಗಿ ಗುರುತಿಸಬೇಕು. ದೊಡ್ಡ ಬದಲಾವಣೆಗಳಿಗೆ ಹೊಂದಿಕೊಳ್ಳಲು ಸಣ್ಣ ಬದಲಾವಣೆಗಳನ್ನು ಕಾಲಾನುಸಾರ ಮಾಡುತ್ತಾ ಹೋಗಬೇಕು. ಅನೇಕ ಸಣ್ಣ ಬದಲಾವಣೆಗಳು ಒಗ್ಗೂಡಿ ದೊಡ್ಡ ಸ್ಥಿತ್ಯಂತರವನ್ನು ನಿರ್ವಹಿಸಲು ನೆರವಾಗುತ್ತವೆ.

ಬದಲಾವಣೆಯ ಹಾದಿ ಒಮ್ಮುಖವಲ್ಲ. ಅಂದರೆ, ಆರಂಭಿಕ ಸಾಫಲ್ಯ-ವೈಫಲ್ಯಗಳು ನಮ್ಮ ಅಂತಿಮ ಗುರಿಯಲ್ಲ. ಕೆಲವೊಮ್ಮೆ ಒಂದಡಿ ಮುಂದಿಟ್ಟ ಮೇಲೆ ಎರಡಡಿ ಹಿಂದೆ ಹಾಕಬೇಕಾಗಬಹುದು. ಇದು ಸಹಜವಾದ ಪ್ರಕ್ರಿಯೆ. ಅಂತಹ ಸಂದರ್ಭಗಳಲ್ಲಿ ಧೃತಿಗೆಡುವ ಅಗತ್ಯವಿಲ್ಲ. ಬದಲಾವಣೆಯ ಹಾದಿಯಲ್ಲಿ ತೀರಾ ಕಠಿಣವಾದ ಆತ್ಮವಿಮರ್ಶೆ ಬೇಕಿಲ್ಲ. ಪರಿಸ್ಥಿತಿ ಹತೋಟಿಯಲ್ಲಿಲ್ಲ ಎನಿಸಿದಾಗ ಅಪರೂಪಕ್ಕೆ ಕಾಣುವ ಕಣ್ಣೀರಿನ ಹನಿಗಳು ದೌರ್ಬಲ್ಯದ ಸಂಕೇತವಲ್ಲ. ಮಾರ್ಗದಲ್ಲಿ ಅಡೆತಡೆಗಳು ಇದ್ದರೂ ಗಮ್ಯದ ಕಡೆಗಿನ ಗಮನ ಚಂಚಲವಾಗಬಾರದು. ಪ್ರಯತ್ನ ಸಾಕಷ್ಟಿದ್ದೂ ಸ್ವಲ್ಪವೇ ಪ್ರಗತಿಯಾದರೂ ಸರಿಯೇ, ಆತ್ಮವಿಶ್ವಾಸ ಕುಂದಬಾರದು.

ಬದಲಾವಣೆಯನ್ನು ನಿರ್ವಹಿಸುವಾಗ ಆದ್ಯತೆಗಳನ್ನು ಸ್ಪಷ್ಟಪಡಿಸಬೇಕು. ನೌಕರಿಯಲ್ಲಿ ಬದಲಾವಣೆಯಾದಾಗ, ಅದಕ್ಕೆ ಸಂಬಂಧಿಸಿದ ಕೆಲಸಗಳನ್ನು ಆಯಾ ಸಮಯದಲ್ಲಿ ಅಚ್ಚುಕಟ್ಟಾಗಿ ಮುಗಿಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳುವುದು ಆದ್ಯತೆಯಾಗುತ್ತದೆ. ಕಚೇರಿಯಲ್ಲಿನ ಇತರರ ಜೊತೆಗೆ ಸಾಮಾಜಿಕ ಸಂಬಂಧ ಏರ್ಪಡುವುದು ನಂತರದ ಆದ್ಯತೆ. ಹೀಗೆ ಪ್ರತಿಯೊಂದು ಬದಲಾವಣೆಯೂ ಬಯಸುವ ಕರ್ತವ್ಯಗಳನ್ನು ಆದ್ಯತಾನುಸಾರ ನಿರ್ವಹಿಸುವುದು ಸಾಫಲ್ಯದ ಹಾದಿ. ಹೊಸ ದಾರಿಯಲ್ಲಿ ದೊರಕುವ ಸಣ್ಣಸಣ್ಣ ಅವಕಾಶಗಳನ್ನು ಸದುಪಯೋಗ ಮಾಡಿಕೊಂಡು ಮನಸ್ಸಿನ ವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದು ದೀರ್ಘಕಾಲಿಕವಾಗಿ ಲಾಭದಾಯಕ. ಹೊಸ ಪರಿಸ್ಥಿತಿ ನಿಯಂತ್ರಣಕ್ಕೆ ಬರುತ್ತಿದೆಯೆಂಬ ನಂಬಿಕೆಯೇ ನಾವು ಬೆಳೆಯಲು ಅನುಕೂಲ.

ಬದಲಾವಣೆಯ ವೇಳೆ ನಿರ್ಧಾರಗಳನ್ನು ಕೈಗೊಳ್ಳುವಾಗ ಎಚ್ಚರವಿರಬೇಕು. 'ಏನನ್ನಾದರೂ ಕಳೆದುಕೊಂಡೇವು' ಎಂಬ ಭೀತಿಯಲ್ಲಿ, ಯಾರನ್ನೋ ಮೆಚ್ಚಿಸಬೇಕೆನ್ನುವ ದುಡುಕಿನಲ್ಲಿ, ಪರಿಸ್ಥಿತಿ ನಮ್ಮ ಕೈಮೀರುತ್ತಿದೆ ಎನ್ನುವ ಸಿಟ್ಟಿನಲ್ಲಿ ಮಾಡುವ ನಿರ್ಧಾರಗಳು ಬಹುತೇಕ ತಪ್ಪಾಗುತ್ತವೆ. ಇಂತಹ ವೇಳೆಯಲ್ಲಿ ನಮ್ಮ ಆಯ್ಕೆಗಳನ್ನು ಒಂದೆಡೆ ಬರೆದಿಟ್ಟುಕೊಂಡು, ಆ ಪಟ್ಟಿಯನ್ನು ಕೂಲಂಕಷವಾಗಿ ಪರಿಶೀಲಿಸುವುದು ಒಳ್ಳೆಯ ನಡೆ.

ಬದಲಾವಣೆಯ ಸಮಯದಲ್ಲಿ ನಮಗೆ ಬೆಂಬಲವಾಗಿ ನಿಂತವರಿಗೆ ಕೃತಜ್ಞರಾಗಿರಬೇಕು. ಉದ್ಯೋಗದಲ್ಲಿ ಬದಲಾವಣೆಗಳಾದಾಗ ಕೌಟುಂಬಿಕ ಬೆಂಬಲ ನೆರವಾಗುತ್ತದೆ. ನಾವು ಚೆನ್ನಾಗಿ ನಂಬುವ, ತೀರಾ ಆತ್ಮೀಯರಾದ ಕೆಲವರಲ್ಲಿ ಮಾತ್ರವೇ ನಮ್ಮ ದುಗುಡಗಳನ್ನು ಹಂಚಿಕೊಳ್ಳಬೇಕು. ಕೆಲವು ಬಾರಿ ಇಂತಹ ಮಾತುಕತೆಗಳು ನಮಗೇ ಅರಿವಿಲ್ಲದ ಮಾರ್ಗೋಪಾಯಗಳನ್ನು ತೋರುತ್ತವೆ. ನಮ್ಮ ಭೀತಿಗಳನ್ನು ಊರಿಗೆಲ್ಲಾ ಸಾರಬಾರದು. ಬದಲಾವಣೆಯ ಒತ್ತಡಗಳನ್ನು ಸಹಿಸುವ ಕಲೆಗಾರಿಕೆಯನ್ನು ಬೆಳೆಸಿಕೊಳ್ಳಬೇಕು. ಈ ವಿಷಯದಲ್ಲಿ ಮಾನಸಿಕ ತಜ್ಞರು ನೆರವಾಗಬಲ್ಲರು. ಯಾವುದೇ ದಾರಿ ತೋಚುತ್ತಿಲ್ಲವೆನಿಸಿದಾಗ ನಿಸ್ಸಂಕೋಚವಾಗಿ ಮಾನಸಿಕ ತಜ್ಞರನ್ನು ಭೇಟಿಯಾಗಿ ಸಮಯೋಚಿತ ಪರಿಹಾರಗಳನ್ನು ಕಂಡುಕೊಳ್ಳಬಹುದು. ❖

# ದಣಿದ ದೇಹಕ್ಕೆ ಶಕ್ತಿಯ ಸಂಚಯನ

**ಡಾ. ಪಲ್ಲವಿ ಹೆಗಡೆ**

> **ದೈಹಿಕಶ್ರಮವನ್ನು ಅನುಸರಿಸಿ ಆಹಾರ, ನಿದ್ರೆ, ಅಭ್ಯಂಜನ, ಸ್ನಾನ, ಚಟುವಟಿಕೆಗಳಿಂದ ಮತ್ತೆ ದೇಹವನ್ನು ಸಶಕ್ತಗೊಳಿಸಬಹುದು.**

**ದಣಿವು** ಸಹಜವೋ ಅಸಹಜವೋ ಶಾರೀರಿಕ ಶ್ರಮದಿಂದ ದೇಹವು ದಣಿಯುವುದು ಸಹಜ. ಒಂದಿಲ್ಲೊಂದು ಚಟುವಟಿಕೆಗಳಲ್ಲಿಯೇ ತೊಡಗಿಕೊಂಡಿರುವ ಮನಸ್ಸು-ಇಂದ್ರಿಯಗಳೂ ದಣಿಯುತ್ತವೆ; ಇದರಿಂದ ದೇಹಕ್ಕೂ ಆಯಾಸವಾಗುವುದು. ಇಂತಹ ಬಳಲಿಕೆಗೆ ನಿತ್ಯವೂ ರಾತ್ರಿಯ ಸಹಜ, ಸಕಾಲನಿದ್ರೆ ಆರಾಮದಾಯಕ. ಹೀಗೆ ಶಕ್ತಿ ಕುಂದುವುದು, ನಿದ್ರೆಯಿಂದ ದೇಹಬಲವನ್ನು ಪಡೆಯುವುದು ಸ್ವಾಸ್ಥ್ಯ ಲಕ್ಷಣ. ಇದು ಆರೋಗ್ಯವಂತರಿಗೆ ಸಹಜಕ್ರಿಯೆ.

ಅನಾರೋಗ್ಯವಾದಾಗಲೂ ದೇಹವು ಬಳಲುತ್ತದೆ. ಚಿಕಿತ್ಸೆಯಿಂದ ಸಹಜಶಕ್ತಿಯನ್ನು ಪಡೆದುಕೊಳ್ಳುವುದು, ಕಾಯಿಲೆಯು ಗುಣಮುಖದತ್ತ ಸಾಗುತ್ತಿರುವುದರ ಲಕ್ಷಣ. ಯಾವುದೇ ಬಗೆಯ ದೈಹಿಕ, ಮಾನಸಿಕ ಮತ್ತು ಇಂದ್ರಿಯಗಳ ಚಟುವಟಿಕೆಗಳನ್ನು ಮಾಡದಿದ್ದಾಗಲೂ, ಸುಮ್ಮನೆ ಕುಳಿತುಕೊಂಡಿದ್ದಾಗಲೂ ಸುಸ್ತಾಗುತ್ತಿದ್ದರೆ ಇದು ರಸಕ್ಷಯ, ರಕ್ತದುಷ್ಟಿ, ಮೇದೋದುಷ್ಟಿ, ಶುಕ್ರಕ್ಷಯ, ಓಜೋಕ್ಷಯ, ಪ್ರಮೇಹ, ತೃಷ್ಣಾರೋಗ, ಶ್ವಾಸರೋಗದಂತಹ ಅನಾರೋಗ್ಯದ ಲಕ್ಷಣ. ನಿಖರವಾದ ಚಿಕಿತ್ಸೆಯಿಂದ ಸರಿಹೋಗಬಹುದು.

ಮಹಾನಗರಗಳಲ್ಲಿ ಅಪಾಯಕಾರಿ ಮಟ್ಟಕ್ಕೆ ತಲುಪಿರುವ ವಾತಾವರಣದಲ್ಲಿ ದಣಿಯುತ್ತೇವೆ. ದೂರಪ್ರಯಾಣ ಸಾಮಾನ್ಯವಾಗಿದೆ. ಕೆಲಸದೊತ್ತಡ, ಹಲವನ್ನು ನಿರ್ವಹಿಸುವ ಗಡಿಬಿಡಿಯ ಜೀವನದಿಂದಾಗಿ ಬಳಲುತ್ತೇವೆ. ನಿಸ್ಸತ್ವ ಆಹಾರದಿಂದಲೂ ನಮ್ಮ ಸಹಜಶಕ್ತಿ ಕುಂದುತ್ತಿದೆ, ದಣಿವು ನಮ್ಮನ್ನು ಆವರಿಸುತ್ತಿದೆ. ಬಿಡುವು ಇಲ್ಲದೆ ದುಡಿಯುವುದು ಮತ್ತು ದಣಿಯುವುದು ಇಂದಿನ ಬದುಕಿನ ಅನಿವಾರ್ಯತೆ ಎಂಬಂತಾಗಿದೆ. ಯಾವ ರೀತಿಯಲ್ಲಿ ದಣಿವಾಗಿದೆಯೋ ಹಾಗೆ ಶಕ್ತಿವ್ಯಯವಾಗಿರುತ್ತದೆ, ಅದರಂತೆ ದಣಿವನ್ನು ನಿವಾರಿಸಿಕೊಳ್ಳಬೇಕು.



## ವಿಶ್ರಾಂತಿ ಹೀಗಿರಲಿ

ಎಲ್ಲಾ ದಣಿವಿನಲ್ಲೂ, ವಿರಮಿಸುವುದು ದೇಹದ ಚೇತರಿಕೆಗೆ ಸಹಾಯಕ. ಆದರೆ, ವಿಶ್ರಮಿಸುವ ವಿಧಾನ ಬೇರೆ. ನಡೆದು, ಓಡಿ, ಸೈಕಲ್-ತುಳಿದು, ಕಾಲಿನ ವ್ಯಾಯಾಮದಿಂದ, ನಿಂತು ಕೆಲಸ ಮಾಡುವುದರಿಂದ ಆಯಾಸವಾದಾಗ ಸ್ವಲ್ಪ ಕಾಲ ಕಾಲು ಚಾಚಿಕೊಂಡು ಕೂರುವುದು ಆರಾಮದಾಯಕ. ಈ ಸಂದರ್ಭಗಳಲ್ಲಿ ರಕ್ತದ ಹರಿವು ಕಾಲಿನೆಡೆಗೆ ಹೆಚ್ಚಿರುತ್ತದೆ. ಕಾಲು, ಸೊಂಟ, ಬೆನ್ನು ಸೋತಿರುತ್ತದೆ. ಕೂತಾಗ ರಕ್ತವು ಸಹಜಸ್ಥಿತಿಗೆ ಮರಳುತ್ತದೆ.

ಮೈ ಬೆವರುವಷ್ಟು ವ್ಯಾಯಾಮ, ಭಾರ ಹೊರುವುದು, ದೂರಪ್ರಯಾಣ, ಶಾರೀರಿಕ ಶ್ರಮವಾದಾಗ ಕೈಕಾಲು-ಮೈ ಚಾಚಿಕೊಂಡು ಸಮತಲದ ಮೇಲೆ ಮಲಗುವುದು - 'ಶವಾಸನ'ವು ಸೂಕ್ತ. ಹೃದಯಗತಿಯನ್ನು ತಗ್ಗಿಸಿ, ಉಸಿರಾಟ, ರಕ್ತಸಂಚಾರವನ್ನು ಸಹಜಗೊಳಿಸುವುದು. ಶವಾಸನದಲ್ಲಿ ಉಸಿರಿನ ಸ್ಥಿತಿಯನ್ನು, ಗತಿಯನ್ನು, ಏರಿಳಿತವನ್ನು ಗಮನಿಸುವುದು - ಹೃದಯ, ಶ್ವಾಸಕೋಶಗಳ ಕಾರ್ಯವನ್ನು ಮತ್ತಷ್ಟು ಸುಗಮಗೊಳಿಸುತ್ತದೆ.

ರಾತ್ರಿಯ ಶುರುವಿನಲ್ಲಿ ಸುಮಾರು ಒಂಬತ್ತು-ಹತ್ತು ಗಂಟೆಯೊಳಗೆ ಮಲಗುವುದು, ಮುಂಜಾನೆ ಎಚ್ಚರಾದ ಮೇಲೆ ಏಳುವುದು ಆರೋಗ್ಯದಾಯಕ. ನಿದ್ರೆಯಷ್ಟು ಸರ್ವಾಂಗಗಳನ್ನೂ ಪೋಷಿಸುವ ವಿಶ್ರಾಂತ ವಿಧಾನ ಮತ್ತೊಂದಿಲ್ಲ. ಬೇಸಿಗೆಯಲ್ಲಿ ದಣಿವಾದಾಗ ಹಗಲು ಕೂಡ ಖಾಲಿ ಹೊಟ್ಟೆಯಲ್ಲಿ ತಂಗಾಳಿಯಲ್ಲಿ ಕೊಂಚಕಾಲ ನಿದ್ರಿಸುವುದು ಉತ್ತಮ.

## ಅಭ್ಯಂಜನಗಳು

ಶರೀರಕ್ಕೆ ಜಿಡ್ಡಿನ ಸಂಗ ಶಕ್ತಿದಾಯಕ. ಜಿಡ್ಡು, ಆಂತರಿಕ-ಬಾಹ್ಯಪ್ರಯೋಗದಿಂದ ಜೀವಕೋಶಗಳ ನಡುವೆ ಬೆಸೆಯುವ ಕೆಲಸವನ್ನು ಮಾಡುತ್ತದೆ, ಸವಕಳಿಯನ್ನು ತಡೆಯುತ್ತದೆ. ಅಂದರೆ 'ವಾತದೋಷ'ವನ್ನು ಸರಿಪಡಿಸುತ್ತದೆ. ನರಗಳ ಮೇಲಿನ, ಮೂಳೆಗಳ, ಸಂಧಿಗಳ ಸುತ್ತಲಿನ, ಚರ್ಮ-ಹೃದಯ-ಜಠರ-ಕರುಳು – ಹೀಗೆ ಎಲ್ಲಾ ಅಂಗಾಂಗಗಳ ಪಸೆಯ ಪದರವು ರಕ್ಷಾಕವಚದಂತೆ ಕೆಲಸಮಾಡುತ್ತದೆ. ನಿತ್ಯವೂ ಎಣ್ಣೆ, ತುಪ್ಪದಂತಹ ಜಿಡ್ಡನ್ನು ತಲೆ, ಕಿವಿ, ಮೂಗಿನ ಹೊಳ್ಳೆ, ಪಾದ, ಸಂಧಿಗಳು, ಇಡೀ ಶರೀರಕ್ಕೂ ಪಸರುವಂತೆ ಸವರಿಕೊಳ್ಳುವುದು ಶ್ರಮನಿವಾರಕ. ದಣಿದ ದೇಹಕ್ಕೆ ಬೆಚ್ಚಗಿನ ಎಣ್ಣೆಯ ಅಭ್ಯಂಜನ ಶೀತಗಾಲದಲ್ಲಿ ಹೊಂದುತ್ತದೆ. ಬೇಸಿಗೆಯಲ್ಲಿ ತುಪ್ಪ ಅಥವಾ ಬೆಣ್ಣೆಯ 'ಸಂವಾಹನ' ಸೂಕ್ತ. ಒತ್ತಡ ಹೇರದೆ ಮೃದುವಾಗಿ ಮೈಬಿಸಿಯೇರದಂತೆ ಸವರಿಕೊಳ್ಳುವುದು 'ಸಂವಾಹನ' ಎಂದು ಕರೆಸಿಕೊಳ್ಳುತ್ತದೆ. ಪಾದಗಳಿಗೆ ಎಣ್ಣೆ/ ತುಪ್ಪವನ್ನು ಸವರಿಕೊಳ್ಳುವುದು, ರಾತ್ರಿ ಮಲಗುವ ಮುನ್ನ ಮಾಡಿದರೆ ಇಡೀ ದಿನದ ದಣಿದ ದೇಹವನ್ನು ಗಾಢನಿದ್ರೆಯ ಮೂಲಕ ಸರಿಪಡಿಸುತ್ತದೆ. ತಲೆಗೆ ನೆನೆಯುವಷ್ಟು ಎಣ್ಣೆಯನ್ನು ಹಾಕಿಕೊಳ್ಳುವುದು ಕಣ್ಣು, ಕಿವಿಗಳ ಸತತ ಉಪಯೋಗದಿಂದಾದ, ಗಾಳಿಯಲ್ಲಿ ಮೈ ಒಡ್ಡಿ, ಪ್ರಯಾಣಿಸಿದಾಗಿನ ಆಯಾಸವನ್ನು ತತ್‌ಕ್ಷಣ ನಿವಾರಿಸುತ್ತದೆ. ಮೊಬೈಲ್, ಕಂಪ್ಯೂಟರ್, ಟ್ರಾಫಿಕ್, ಉಚ್ಚಶಬ್ದಗಳ ಗಿಜಿಬಿಜಿಯಿಂದಾದ ದಣಿವನ್ನು, ಇಂದ್ರಿಯಗಳಿಗೆ ಶಕ್ತಿಯನ್ನು ತುಂಬುವುದರ ಮೂಲಕ ಕಾಪಾಡುತ್ತದೆ. ಪಾದಗಳನ್ನು ಎಣ್ಣೆಯಲ್ಲಿ ಮುಳುಗಿಸಿಟ್ಟುಕೊಂಡು ತೊಳೆದುಕೊಳ್ಳುವ ವಿಧಾನಕ್ಕೆ 'ಪಾದಾವಗಾಹ' ಎನ್ನುವರು. ಇದು ಕಾಲಿನ ದಣಿವನ್ನು ತ್ವರಿತವಾಗಿ ಸರಿಪಡಿಸಿ ಬಲಪಡಿಸುತ್ತದೆ.

## ಸ್ನಾನ ಹೀಗಿರಲಿ

ತಲೆ-ಮೈಗೆ ನೀರಿನ ಸ್ಪರ್ಶದಿಂದ ಸಿಗುವ ನವಚೈತನ್ಯವೇ ಬೇರೆ. ಮೈಬೆವರುವಷ್ಟು ಶ್ರಮಪಡುವವರು, ಬೇಸಿಗೆಯಲ್ಲಿ ತಣ್ಣೀರಿನ ಸ್ನಾನದ ಪ್ರಯೋಜನವನ್ನು ಪಡೆಯಬಹುದು. 'ಪರಿಷೇಕಸ್ನಾನ' (ಶವರ್ ಬಾತ್), ಧುಮುಕುವ ಜಲಪಾತದ ಧಾರೆ, ಜಿನುಗುವ ಮಳೆಯಂತಹ ಸಿಂಚನ, ಕೆರೆ-ತೊರೆ-ತೆರೆದ ಬಾವಿಯಲ್ಲಿ ಮುಳುಗುವ 'ಅವಗಾಹ' ಸ್ನಾನ, ತೀರ್ಥದ ಪ್ರೋಕ್ಷಣೆಯಂತಹ ನೀರಿನ ಸ್ಪರ್ಶ – ಹೀಗೆ ಸ್ನಾನದ ಹಲವು ಬಗೆಯಿಂದ ದೇಹಕ್ಕೆ ಚೈತನ್ಯ ದೊರಕುತ್ತದೆ. ನಿತ್ಯವೂ ಸ್ನಾನ ಮಾಡುವುದು ಸ್ವಚ್ಛತೆಗಾಗಿ ಮಾತ್ರವಲ್ಲ ದೇಹ ಮತ್ತು ಇಂದ್ರಿಯಗಳ ಮನೆಯಾದ ಶಿರಸ್ಸಿಗೆ ಬಲವನ್ನು ನೀಡುವುದೂ ಆಗಿದೆ. ಆಲಸ್ಯ ನಿವಾರಿಸಿ, ಶ್ರಮವನ್ನು ಕಳೆಸಿ ದೃಢದೇಹವನ್ನು ನೀಡುವ ಸ್ನಾನ, ನಿತ್ಯಕರ್ಮ. ನಿತ್ಯವೂ ಮೈಗೆ ಬಿಸಿ-ಬೆಚ್ಚಗಿನ ನೀರು, ತಲೆಗೆ ತಣ್ಣೀರು-ಹೂಬಿಸಿ ನೀರು ಉತ್ತಮ. ತಲೆಗೆ ಬಿಸಿನೀರಿನ ಸ್ನಾನ ಇಂದ್ರಿಯಗಳ ದಣಿವಿಗೆ ಕಾರಣ.

## ಹಸಿರಿನ ನಡುವೆ ತಂಗಾಳಿಯಲ್ಲಿ ಅಡ್ಡಾಡಿ

ಚಿಂತೆ-ಚಿಂತನೆಗಳಿಂದ ದಣಿದ ಮನಸ್ಸಿಗೆ, ಒಂದೇ ಕೆಲಸದಲ್ಲಿ ಮುಳುಗಿ ಮುರುಟಿದ ಇಂದ್ರಿಯಗಳಿಗೆ ವಾತಾವರಣದ ಬದಲಾವಣೆ ಬಲದಾಯಕ. ಎಲೆ-ಟೊಂಗೆಗಳ ತೊನೆಸುವ ತಂಗಾಳಿ, ಹೂ-ಮೊಗ್ಗು-ಚಿಗುರುಗಳ ವರ್ಣಮಯ ಪರಿಸರ, ಹಕ್ಕಿಗಳ ಕಲರವ ಮನಸ್ಸಿನ-ಇಂದ್ರಿಯಗಳ ದಣಿವಿಗೆ ಔಷಧರಹಿತ ಚಿಕಿತ್ಸೆ. ಕ್ಲೇಶಕಳೆಯಿಸಿ ಮನೋಹರವಾದ ಶಕ್ತಿದಾಯಕ ಚಟುವಟಿಕೆ. ಗೋಡೆಗಳ ನಡುವೆಯೇ ಹೆಚ್ಚುಹೊತ್ತು ಕಳೆಯುವುದರಿಂದಾಗುವ ಏಕತಾನದ ದಣಿವಿಗೆ ಈ ಅಡ್ಡಾಟ ಪರಿಹಾರ. ಬಿಸಿಲುಗಾಲದಲ್ಲಿ ಬೆಳದಿಂಗಳಿನಲ್ಲಿ ಸಮಯ ಕಳೆಯುವುದು ಚೇತೋಹಾರಿ.

## ಸ್ನೇಹಕೂಟಗಳು ದಣಿವು ನಿವಾರಕಗಳು

ಸ್ನೇಹಕ್ಕೆ ಕರಗುವ ಮರುಗುವ ಜೀವವಿಲ್ಲ. ಜೊತೆಗೂಡಿದರೆ ಜೀವನಪಥ ನಿರಾಯಾಸ ಎನಿಸುತ್ತದೆಯಲ್ಲವೇ? ಸ್ನೇಹದ ಎಳೆಯೊಂದು ನೆಪವೊಂದರಿಂದ ಕೂಡುವುದು ಯಾವುದ್ಯಾವುದೋ ಕೂಟಗಳಲ್ಲಿ. ಸವಿಭೋಜನ, ಸವಿನೋಟ, ಸವಿಶ್ರವಣ, ಸ್ನೇಹಿತರೊಂದಿಗೆ ಮತ್ತಷ್ಟು ಸವಿತರುತ್ತದೆ. ಸಿಹಿ-ಆಹಾರ, ಮಾತು, ಯೋಚನೆ, ಒಡನಾಟದಷ್ಟು ದೇಹಕ್ಕೆ – ಜೀವಕ್ಕೆ ಶಕ್ತಿನೀಡುವುದು ಮತ್ತೇನಿದೆ. ಮಧುರಂ ಅಖಿಲಂ...

## ಶಕ್ತಿದಾಯಕ ಆಹಾರ-ಪಾನೀಯಗಳು

ಮೈಥುನದ ನಂತರದ ದಣಿವಿಗೆ ಹಾಲನ್ನು ಕುಡಿಯುವುದು ಕ್ಷಣದಲ್ಲೇ ಶಕ್ತಿಕಾರಕ. ದೈಹಿಕಾಯಾಸ, ಸತತವಾಗಿ ಮಾತಾಡಿ, ಪ್ರಯಾಣಿಸಿ, ಆಟ-ವ್ಯಾಯಾಮಗಳಿಂದ - ಎಲ್ಲಾ ದೈಹಿಕದಣಿವಿನಲ್ಲಿ ಹಾಲಿನ ಸೇವನೆ ಅಥವಾ ಹಾಲಿನ ಪಾಯಸ, ಖೀರು, ಹಾಲು-ಅನ್ನ, ಹಾಲಿನ ಸಜ್ಜಿಗೆಯಂತಹ ಸಿಹಿಗಳು ಶಕ್ತಿಕಾರಕ. ಬೇಸಿಗೆಯಲ್ಲಿ ದಣಿದು ಬಾಯಾರಿಕೆಯಾಗಿದ್ದರೆ ದ್ರಾಕ್ಷಿ, ಖರ್ಜೂರ, ಅಂಜೂರ, ಮಾವು, ದಾಳಿಂಬೆ, ಕಿತ್ತಳೆಯಂತಹ ವಿವಿಧ ಹಣ್ಣುಗಳ ರಸ-ಪಾನಕಗಳು ಉತ್ತಮ. ಸತತವಾಗಿ ದೈಹಿಕ ದುಡಿಮೆಯುಳ್ಳವರು ಬೇಯಿಸಿದ ಮಾಂಸರಸವನ್ನು ಆಹಾರವಾಗಿ ಸೇವಿಸುವುದು ಉಪಯುಕ್ತ. ಮದ್ಯಪಾನಿಗಳು ಸೂಕ್ತವಾದ ಆಹಾರದೊಟ್ಟಿಗೆ ಮಿತಿಯಲ್ಲೇ ಮೃದು ಮದ್ಯವನ್ನು ಸೇವಿಸುವುದೂ ಶಕ್ತಿದಾಯಕ.

ದೈಹಿಕಶ್ರಮವನ್ನು ಅನುಸರಿಸಿ ಆಹಾರ, ನಿದ್ರೆ, ಅಭ್ಯಂಜನ, ಸ್ನಾನ, ಚಟುವಟಿಕೆಗಳಿಂದ ಮತ್ತೆ ದೇಹವನ್ನು ಸಶಕ್ತಗೊಳಿಸಬಹುದು. ❖



# ಇಪ್ಪತ್ತಕ್ಕೆ ಎಷ್ಟೊಂದು ಚಿಂತೆಗಳು!

**ಡಾ. ಕೆ. ಎಸ್. ಶುಭ್ರತಾ**

**'ಈ ಇಂಜಿನಿಯರಿಂಗ್** ಕೋರ್ಸ್‌ಗೆ ಸೇರಿದ್ದು ಸರಿಯಾಯಿತೇ? ಅಥವಾ ಮೆಡಿಕಲ್ ಮಾಡಬೇಕಿತ್ತೇ?', 'ನನ್ನ ಫೇಸ್‌ಬುಕ್ ಪ್ರೊಫೈಲ್ ಪಿಕ್ಚರ್ ಯಾವುದು ಹಾಕಿದರೆ ಹೆಚ್ಚು ಲೈಕ್ಸ್, ಕಮೆಂಟ್ಸ್ ಬರಬಹುದು?' 'ಮುಂದೆ ಜೀವನದಲ್ಲಿ ಸಾಕಷ್ಟು ದುಡ್ಡು ಮಾಡುವುದು ಹೇಗೆ?'' 'ಮದುವೆ ಈಗಲೇ ಅಥವಾ ಇನ್ನೂ ತಡವಾಗಿ ಆಗಲೇ?' – ಇಪ್ಪತ್ತರಿಂದ ಮೂವತ್ತರ ವಯಸ್ಸಿನಲ್ಲಿ ಮೂಡುವ ನೂರಾರು ಪ್ರಶ್ನೆಗಳಲ್ಲಿ ಇಂಥವು ಕೆಲವು ಉದಾಹರಣೆಗಳಷ್ಟೇ.

ಹದಿಹರೆಯವೇನೋ ಮುಗಿಯುವುದಕ್ಕೆ ಬಂದಿರುತ್ತದೆ. ಹಾಗೆಂದು ಜೀವನ ಪೂರ್ತಿ 'ಸೆಟಲ್' ಆಗಿರುವುದಿಲ್ಲ. ಎಲ್ಲರೂ ಹದಿಹರೆಯದ ಬಗ್ಗೆಯೇ ಯೋಚಿಸುತ್ತಾರೆ. ಹದಿಹರೆಯದ ಮಕ್ಕಳ ಭಾವನೆಗಳು, ಅವರ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಾರೆ. ಹಾಗೆಂದು ಹತ್ತೊಂಬತ್ತು ದಾಟಿ ಇಪ್ಪತ್ತಕ್ಕೆ ಕಾಲಿಟ್ಟ ತಕ್ಷಣ, ಜೀವನ-ಜಗತ್ತು ಸುಂದರವಾಗುತ್ತದೆಯೇ? ಸಮಸ್ಯೆಗಳಿಗೆಲ್ಲಾ ಪರಿಹಾರ ಸಿಗುತ್ತದೆಯೇ? ಖಂಡಿತ ಇಲ್ಲ. ಹೊಸ ಜಾಗ, ಹೊಸ ಚಾಲೆಂಜ್, ಹೊಸ ಕೋರ್ಸ್, ಹೊಸ ಉದ್ಯೋಗ, ಹೊಸ ಸಂಬಂಧ; ಎಷ್ಟೊಂದು ಬದಲಾವಣೆಗಳು!

ವಿಜ್ಞಾನ, ಕಾಮರ್ಸ್ ಅಥವಾ ಕಲೆ ಯಾವುದೇ ಕೋರ್ಸ್‌ನಲ್ಲಿ ಸೇರಿದ್ದರೂ, ಪದವಿ ಸಿಗುತ್ತಿದ್ದಂತೆ, ಮುಂದೇನು ಎಂಬ ಪ್ರಶ್ನೆ. ಸ್ನಾತಕೋತ್ತರ ಪದವಿ ಮಾಡುವುದು ಉತ್ತಮವೋ, ಅಥವಾ ಪೂರ್ತಿ ವಿಷಯವನ್ನೇ ಬದಲಾಯಿಸಬೇಕೋ ಎಂಬ ಗೊಂದಲ.

ಓದೇನೋ ಆಯಿತು. ಯಾವ ಕೆಲಸಕ್ಕೆ ಸೇರುವುದು? ನನ್ನ ಯೋಗ್ಯತೆಗೆ ಈ ಕೆಲಸ ಕಡಿಮೆಯೇನೋ! ಬೆಂಗಳೂರಿನಂಥ ದೊಡ್ಡ ಊರುಗಳಿಗೆ ಹೋಗಬೇಕೇ? ಉದ್ಯೋಗಕ್ಕೆ ಸಂಬಂಧಪಟ್ಟಂತೆ ಕಾಡುವ ಸಂದಿಗ್ಧತೆಗಳು.

ಹದಿವಯಸ್ಸಿನಲ್ಲಿ ಮನೆಯವರ ಹಿಡಿತ ಸ್ವಲ್ಪ ಕಡಿಮೆಯೇ ಎನ್ನಬಹುದು. ಫೇಸ್‌ಬುಕ್, ಇನ್‌ಸ್ಟಾಗ್ರಾಂ ನೋಡಲು ಯಾರ ತಕರಾರೂ ಇಲ್ಲ. ಓದಲು, ಕೆಲಸ ಮಾಡಲು ಹಾಸ್ಟೆಲ್ / ಪಿ.ಜಿ.ಗಳಲ್ಲಿರಬೇಕಾದರೆ ಬೆಳಿಗ್ಗೆಯಿಂದ ಸಂಜೆಯ ತನಕ ಬಿಜಿಯಾಗಿರುವುದು, ರೂಮ್‌ಗೆ ಬಂದಾಕ್ಷಣ ಈ ಸಾಮಾಜಿಕ ಜಾಲತಾಣಗಳೇ ಆಪ್ತ ಸ್ನೇಹಿತರಂತೆ. ಡಿಪಿ ಬದಲಿಸುವುದು, ಅದಕ್ಕೆ ಬರುವ ಲೈಕ್ಸ್ / ಕಮೆಂಟ್ಸ್ ನೋಡಿ ಆನಂದಿಸುವುದು, ವಾಟ್ಸ್‌ಆ್ಯಪ್ ಚಾಟ್ ಮಾಡುವುದು. ಇವೆಲ್ಲದರಲ್ಲಿ ಹೊತ್ತು ಹೋಗುವುದೇ ತಿಳಿಯದು.

ಹದಿಹರೆಯದಲ್ಲಿ ಪ್ರೀತಿಸಿದರೆ ಕೇವಲ 'ಇನ್‌ಫ್ಯಾಚ್ಯುಯೇಷನ್' ಎನ್ನುತ್ತಾರೆ. ಅದೇ ಇಪ್ಪತ್ತರ ದಶಕದಲ್ಲಿ ಪ್ರೀತಿಸಿದರೆ ನಿಜವಾದ ಪ್ರೀತಿಯೇ? ಗೊತ್ತಿಲ್ಲ. ಕೆಲವರು ತಮ್ಮ ಆತ್ಮದ ಗೆಳತಿ /ಗೆಳೆಯನ ಶೋಧ ನಡೆಸಬಹುದು. ಇನ್ನೊಬ್ಬರು, ಅಪ್ಪ-ಅಮ್ಮ ಹೇಳಿದವಳನ್ನೇ/ಹೇಳಿದವನನ್ನೇ ಮದುವೆ ಆಗುತ್ತೇನೆಂದು ಕಾಯುತ್ತಿರಬಹುದು. ಮತ್ತೊಬ್ಬರು ಇಷ್ಟು ಬೇಗ ಮದುವೆಯೇ ಬೇಡವೆಂದು ನಿರ್ಧರಿಸಿರಬಹುದು. ಮಗದೊಬ್ಬರಿಗೆ ಪ್ರೀತಿಸಿದ ಗೆಳತಿ/ಗೆಳೆಯ ಕೈಕೊಟ್ಟು, ಮದುವೆಯ ಸಹವಾಸವೇ ಬೇಡವೆನ್ನಿಸಬಹುದು.

## ದಾರಿದೀಪಗಳು

ಇಪ್ಪತ್ತರ ಈ ಚಿಂತೆಗಳು, ಗೊಂದಲಗಳಿಗೆ ಪರಿಹಾರ ಉಂಟು. ಕೆಲವೊಂದು ಅನುಭವಗಳು, ಕೆಲವೊಂದು ವ್ಯಕ್ತಿಗಳು, ದಾರಿದೀಪಗಳಾಗಿ ಒದಗಬಹುದು.

- ನಿಮಗೆ ವಿಶ್ವಾಸ ಇರುವ ಒಂದು ವ್ಯಕ್ತಿಯೊಡನೆ ನಿಮ್ಮ ಈ ಎಲ್ಲಾ ಗೊಂದಲಗಳನ್ನೂ, ಅದರ ಹಿಂದಿರುವ ಮತ್ತು ಅದರಿಂದುಂಟಾಗುವ ಭಾವನೆಗಳನ್ನೂ ಹಂಚಿಕೊಳ್ಳಿ. ಆ ವ್ಯಕ್ತಿ ನಿಮಗಿಂತ ಹಿರಿಯರಾಗಿದ್ದಲ್ಲಿ, ಅವರ ಅನುಭವದ ಮಾತುಗಳು ನಿಮಗೆ ಸಾಂತ್ವನ ನೀಡಬಹುದು.
- ಓದು ಮತ್ತು ಅಧ್ಯಯನಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು, ಅದೇ ಕಾರ್ಯಕ್ಷೇತ್ರದಲ್ಲಿರುವವರೊಂದಿಗೆ ಮಾತನಾಡಿ. ನಿಮ್ಮ ಸಾಮರ್ಥ್ಯ-ಶ್ರಮಪಡುವ ಗುಣ ಮತ್ತು ಆದ್ಯತೆಗಳ ಮೇರೆಗೆ ಒಂದು ನಿರ್ಧಾರಕ್ಕೆ ಬನ್ನಿ.
- ಸಾಮಾಜಿಕ ಜಾಲತಾಣಗಳ ಬಗ್ಗೆ ಎಚ್ಚರ ಅತ್ಯಗತ್ಯ. ಬಳಕೆಯ ಸಮಯದ ಪರಿಮಿತಿಯನ್ನು ನಾವೇ ಹಾಕಿಕೊಳ್ಳಬೇಕು. ನೈಜ ಜೀವನದಲ್ಲಿ ಸಂಬಂಧಿಕರೊಂದಿಗೆ ಮಾತನಾಡುವುದಕ್ಕೆ, ಬೆರೆಯುವುದಕ್ಕೆ, ಕುಟುಂಬದ ಕಾರ್ಯಕ್ರಮಗಳಿಗೆ ಹೋಗುವುದಕ್ಕೆ ಈ ಸಾಮಾಜಿಕ ಜಾಲತಾಣಗಳು ಬದಲೀ ವ್ಯವಸ್ಥೆಗಳಲ್ಲ ಎಂಬುದನ್ನು ಮನಗಾಣಬೇಕು.
- ಗಂಡು ಮಕ್ಕಳಾಗಲೀ-ಹೆಣ್ಣು ಮಕ್ಕಳಾಗಲೀ ಓದಿ ಆರ್ಥಿಕವಾಗಿ ಸ್ವತಂತ್ರರಾಗದ ಹೊರತು, ಸಂಸಾರ ಸಾಗರದಲ್ಲಿ ಬಿದ್ದರೆ, ಸ್ವಲ್ಪ ಕಷ್ಟವೇ ಸರಿ. ಪ್ರೀತಿ-ಪ್ರೇಮದಲ್ಲಿ ಸಿಲುಕಿದ್ದರೂ, ದೈಹಿಕ ದೌರ್ಜನ್ಯ–ಲೈಂಗಿಕ ದೌರ್ಜನ್ಯಕ್ಕೆ ಒಳಗಾಗದ ಹಾಗೆ ನಮ್ಮನ್ನು ನಾವು ಕಾಪಾಡಿಕೊಳ್ಳುವುದು ಅತ್ಯಗತ್ಯ.

ಇಪ್ಪತ್ತರ ಸಮಸ್ಯೆಗಳನ್ನು ಎದುರಿಸುವ ವಿಧಾನಗಳನ್ನು ಕುರಿತಂತೆ ಪ್ರೇರಣೆ ನೀಡುವ ಹಲವಾರು ಪುಸ್ತಕಗಳಿವೆ. ಹೊಸ ಆಲೋಚನೆಗಳನ್ನು ಹುಟ್ಟು ಹಾಕುವಂತ ಟೆಡ್‌ಟಾಕ್‌ಗಳಿವೆ. ಒಳ್ಳೆಯ ವೆಬ್‌ಸೈಟ್‌ಗಳಿವೆ. ಇವೆಲ್ಲದರಿಂದ ಉಪಯೋಗ ಪಡೆದುಕೊಳ್ಳಿ.

ನಿರ್ಧಾರ ಮಾಡಲಾಗದೇ ತುಂಬಾ ಚಿಂತೆಯಾಗಿ, ಗೊಂದಲದಲ್ಲಿದ್ದಾಗ ಒಳ್ಳೆಯ ಹಾಡೊಂದನ್ನು ಕೇಳಿ. ಪ್ರಾಣಾಯಾಮ, ಧ್ಯಾನದಂತಹ ಕ್ರಿಯೆಗಳನ್ನು ಮಾಡಿ. ಮನಸ್ಸು ಸ್ವಲ್ಪ ಉಲ್ಲಸಿತವಾಗಬಹುದು.ಒಂದು ನೆನಪಿಡಿ: ಗೊಂದಲಗಳ ಗೂಡಾಗಿರುವ ಈ ನಿಮ್ಮ ಮನಸ್ಸಿನ ಸ್ಥಿತಿ ತಾತ್ಕಾಲಿಕವಷ್ಟೇ. ❖

# ಸೇತುವೆ ಜಲಾವೃತ, ಸಂಪರ್ಕ ಕಡಿತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಹಲವು ಜಿಲ್ಲೆಗಳಲ್ಲಿ ಸೋಮವಾರವೂ ಮಳೆಯ ಅಬ್ಬರ ಮುಂದುವರಿದಿದ್ದು, ಜನ ಜೀವನ ತತ್ತರಗೊಂಡಿದೆ. ಕೆರೆ ಕಟ್ಟೆಗಳು ಕೋಡಿ ಬಿದ್ದು, ಗ್ರಾಮಗಳಿಗೆ ನೀರು ನುಗ್ಗಿತ್ತು. ಸೇತುವೆಗಳು ಜಲಾವೃತಗೊಂಡು ಸಂಚಾರ ಸ್ಥಗಿತಗೊಂಡಿತ್ತು.

ಚಾಮರಾಜನಗರ ಹಾಗೂ ಯಳಂದೂರು ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಬೆಳೆ ನಷ್ಟವಾಗಿದೆ. ಕೆರೆಕಟ್ಟೆಗಳು ಕೋಡಿ ಬಿದ್ದು, ಚಾಮರಾಜನಗರ–ಸಂತೇಮರಹಳ್ಳಿ ನಡುವಿನ ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ಹಲವು ಗ್ರಾಮಗಳಿಗೆ ರಸ್ತೆಗಳು, ಸೇತುವೆಗಳು ಜಲಾವೃತಗೊಂಡು ಸಂಚಾರ ಸ್ಥಗಿತಗೊಂಡಿತ್ತು. ಯಳಂದೂರು ತಾಲ್ಲೂಕಿನಲ್ಲಿ ಕಬಿನಿ ನಾಲೆ ಹಾಗೂ ಸುವರ್ಣಾವತಿ ನದಿ ಉಕ್ಕಿ ಹರಿದು ಕಂದಹಳ್ಳಿ, ಕೆಸ್ತೂರು, ಅಂಬಳೆ, ಯರಿಯೂರು ಜಲಾವೃತಗೊಂಡು ಮನೆಗಳಿಗೆ ನೀರು ನುಗ್ಗಿತ್ತು.

'ನಾಲ್ಕೈದು ದಶಕಗಳ ಅವಧಿಯಲ್ಲಿ ಇಷ್ಟೊಂದು ಮಳೆಯಾಗಿದ್ದನ್ನು ನೋಡಿಲ್ಲ' ಎಂದು ಚಾಮರಾಜನಗರದ ಹಿರಿಯ ನಾಗರಿಕರು ಹೇಳಿದ್ದಾರೆ.

ಕೊಡಗು ಜಿಲ್ಲೆಯ ಪಯಸ್ವಿನಿ ನದಿ ಉಕ್ಕಿ ಕೊಯನಾಡಿನ ಕಿಂಡಿ ಅಣೆಕಟ್ಟೆಗೆ ಮರದ ದಿಮ್ಮಿಗಳು ಸಿಲುಕಿದ್ದು, ಐದು ಮನೆಗಳಿಗೆ ನೀರು ನುಗ್ಗಿತ್ತು. ನಾಪೋಕ್ಲು ರಸ್ತೆಯಲ್ಲಿ ಸಂಚಾರ ಸ್ಥಗಿತಗೊಂಡಿದೆ.

ಕೊಡಗು ಜಿಲ್ಲೆಯಲ್ಲಿ ಸುರಿದ ಭಾರಿ ಮಳೆಗೆ ಸುಳ್ಯ ತಾಲ್ಲೂಕಿನ ಸಂಪಾಜೆ ಪರಿಸರದಲ್ಲಿ ಸೋಮವಾರ ಪ್ರವಾಹ ಕಾಣಿಸಿಕೊಂಡಿದ್ದು, ಭಾರಿ ಹಾನಿ ಸಂಭವಿಸಿದೆ. ಕೊಯನಾಡಿನಲ್ಲಿ ಕಿಂಡಿ ಅಣೆಕಟ್ಟೆಗೆ ಬೃಹತ್ ಗಾತ್ರದ ಮರದ ದಿಮ್ಮಿಗಳು ಬಂದು ಅಪ್ಪಳಿಸಿ ನಿಂತಿದ್ದು, ಈ ಪರಿಸರದ ಹಲವು ಮನೆಗಳು ಜಲಾವೃತಗೊಂಡಿವೆ. ಚೆಂಬು ಗ್ರಾಮದ ಆನೆಹಳ್ಳ ಎಂಬಲ್ಲಿ ಕಿಂಡಿ ಅಣೆಕಟ್ಟು ನೀರಿನಲ್ಲಿ ಕೊಚ್ಚಿಹೋಗಿದ್ದು, ದಬ್ಬಡ್ಕದಲ್ಲೂ ಗುಡ್ಡ ಕುಸಿದಿದೆ.

ಹುಬ್ಬಳ್ಳಿ ತಾಲ್ಲೂಕಿನ ಇಂಗಳಹಳ್ಳಿಯ ಜಮೀನಿನಲ್ಲಿ ಹಳ್ಳದ ಪ್ರವಾಹದಲ್ಲಿ ಸಿಲುಕಿದ್ದ ಜಮೀನಿನ ಮಾಲೀಕ ಹಾಗೂ 28 ಕೂಲಿ ಕಾರ್ಮಿಕರನ್ನು ಅಗ್ನಿಶಾಮಕ ಸಿಬ್ಬಂದಿ ರಕ್ಷಿಸಿದ್ದಾರೆ.

ರಾಮನಗರ ಹಾಗೂ ಚನ್ನಪಟ್ಟಣ ತಾಲ್ಲೂಕುಗಳಲ್ಲಿ ಮುಂಜಾನೆ 4 ಗಂಟೆ ಸುಮಾರಿಗೆ ಆರಂಭಗೊಂಡ ಮಳೆ ಬೆಳಿಗ್ಗೆ 10ರವರೆಗೆ ಸತತವಾಗಿ ಸುರಿಯಿತು. ಇದರಿಂದಾಗಿ ರಾಮನಗರದಲ್ಲಿ ಪ್ರವಾಹದಂತೆ ನೀರು ನುಗ್ಗಿದ್ದು, ಮುಂಜಾನೆ ಪಟ್ಟಣ ಭಾಗಶಃ ಜಲಾವೃತಗೊಂಡಿತ್ತು.

ರಾಮನಗರದ ಗಾಂಧಿನಗರದಲ್ಲಿ ಕೃಷ್ಣ ಹಾಗೂ ಮುದ್ದಲ್ಲಪ್ಪ ಅವರ ಮನೆಯ ಗೋಡೆ ಕುಸಿದು 30ಕ್ಕೂ ಹೆಚ್ಚು ಕುರಿ ಸಾವನ್ನಪ್ಪಿವೆ. ರಾಮನಗರದ ಭಕ್ಕರೆಕೆರೆ ಸಮೀಪ ರೈಲ್ವೆ ಸೇತುವೆಯಲ್ಲಿ ಬಿರುಕು ಕಾಣಿಸಿಕೊಂಡಿದ್ದು, ಇದರಿಂದಾಗಿ ಬೆಳಿಗ್ಗೆ ಕೆಲ ಹೊತ್ತು ರೈಲುಗಳ ಸಂಚಾರದಲ್ಲಿ ವ್ಯತ್ಯಯ ಆಗಿತ್ತು. ಚನ್ನಮಾನಹಳ್ಳಿ ಕೆರೆ ಕೋಡಿ ಒಡೆದು ಹಳಿಗಳಲ್ಲಿ ನೀರು ನಿಂತಿತ್ತು.

ಚನ್ನಪಟ್ಟಣ ತಾಲ್ಲೂಕಿನ ಕಣ್ವ ಜಲಾಶಯದಿಂದ ಭಾರಿ ಪ್ರಮಾಣದಲ್ಲಿ ನದಿಗೆ ನೀರು ಹರಿಸಿದ್ದು, ಸಾಕಷ್ಟು ಗ್ರಾಮಗಳಲ್ಲಿ ಮನೆಗಳಿಗೆ ನೀರು ನುಗ್ಗಿದೆ. ರಸ್ತೆಗಳ ಸಂಪರ್ಕ ಕಡಿತಗೊಂಡಿತ್ತು. ಮಂಗಳವಾರ ಪೇಟೆಯಲ್ಲಿ ಮಹಿಳೆಯೊಬ್ಬರು ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದು, ಇನ್ನೂ ದೇಹ ಪತ್ತೆಯಾಗಿಲ್ಲ.

**ಮೂರು ದಿನ ಮಳೆ:** ರಾಜ್ಯಾದ್ಯಂತ ಬಹುತೇಕ ಕಡೆ ಮೂರು ದಿನ ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮಂಗಳವಾರ 15ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.



ಸುಬ್ರಮಣ್ಯ ಸಮೀಪದ ಕಲ್ಲಾಜೆಯ ಭೈಲು ಎಂಬಲ್ಲಿ ಕಿಂಡಿ ಅಣೆಕಟ್ಟು ಸಂಪೂರ್ಣ ಮರಗಳಿಂದ ತುಂಬಿರುವುದು



ರಾಮನಗರದಲ್ಲಿ ಸೋಮವಾರ ಅತಿವೃಷ್ಟಿಯಿಂದ ಹಾನಿಗೀಡಾದ ಪ್ರದೇಶಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವೀಕ್ಷಿಸಿದರು. ಸಚಿವ ಆರ್.ಅಶೋಕ, ಶಾಸಕರಾದ ಎಚ್.ಡಿ. ಕುಮಾರಸ್ವಾಮಿ, ಅನಿತಾ ಕುಮಾರಸ್ವಾಮಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ಜೊತೆಗಿದ್ದರು

## ಕಾರು ಹರಿದು ಜಿಲ್ಲಾಧಿಕಾರಿಗೆ ತೀವ್ರ ಪೆಟ್ಟು

ಚನ್ನಪಟ್ಟಣ ತಾಲ್ಲೂಕಿನ ಕೋಲೂರು ಗಾಂಧಿ ಗ್ರಾಮದಲ್ಲಿ ಸಂತ್ರಸ್ತರನ್ನು ಮಾತನಾಡಿಸಿ ವಾಪಸ್ ಆಗುವ ವೇಳೆ ಜಿಲ್ಲಾಧಿಕಾರಿ ಅವಿನಾಶ್ ಮೆನನ್ ಅವರ ಕಾಲಿನ ಮೇಲೆ ಕಾರು ಹರಿದು ಕಾಲಿನ ಮೂಳೆಗಳು ಮುರಿದಿವೆ.

## ತೇಲಿ ಹೋದ ಮೀನುಗಳು

ಲಕ್ಷ್ಮೇಶ್ವರ ತಾಲ್ಲೂಕಿನಾದ್ಯಂತ ಭಾನುವಾರ ರಾತ್ರಿಯಿಂದ ಮಧ್ಯರಾತ್ರಿ 1ರವರೆಗೆ ಸುರಿದ ಭಾರಿ ಮಳೆಗೆ ಶೆಟ್ಟಿಕೇರಿ ಗ್ರಾಮದ ಕೆರೆ ತುಂಬಿ ಹರಿದಿದ್ದರಿಂದ, ಕೆರೆಯಲ್ಲಿ ಸಾಕಣೆ ಮಾಡಿದ್ದ ಲಕ್ಷಾಂತರ ಮೀನುಗಳು ತೇಲಿ ಹೋಗಿವೆ.

## ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು |
|---|---|---|---|---|
| ಕೆ ಆರ್ ಎಸ್* | 124.80 | 124.45 | 31,467 | 46,135 |
| ಹಾರಂಗಿ | 2,859 | 2,856.54 | 3,050 | 3,050 |
| ಕಬಿನಿ | 2,284 | 2283.81 | 16,593 | 20,000 |
| ಹೇಮಾವತಿ | 2,922 | 2,921.90 | 5,791 | 6,290 |
| ಲಿಂಗನಮಕ್ಕಿ | 1,819 | 1,814 | 6,969 | 6,819 |
| ಸೂಪಾ (ಮೀ) | 564 | 550.18 | 5,998 | 2,113 |
| ಮಾಣಿ | 595 | 588 | 721 | - |
| ತುಂಗಭದ್ರಾ | 1,633 | 1,632.58 | 69,659 | 54,321 |
| ಮಲಪ್ರಭಾ | 2079.50 | 2,078.70 | 5,662 | 894 |
| ಘಟಪ್ರಭಾ | 2,175 | 2,175.00 | 3,810 | 3,810 |
| ಭದ್ರಾ | 186 | 184 | 6,533 | 5,931 |
| ಆಲಮಟ್ಟಿ (ಮೀ) | 519.60 | 519.60 | 27,488 | 25,451 |
| ನಾರಾಯಣಪುರ (ಮೀ) | 492.25 | 492.08 | 20,000 | 19,680 |

* ನೆಲಮಟ್ಟದಿಂದ

# ಮಹಾಮಳೆಗೆ ನಲುಗಿದ ಜನತೆ

ಒಂದನೇ ಪುಟದಿಂದ...

ರಾಮನಗರದ ರಾಮಕೃಷ್ಣ ಆಸ್ಪತ್ರೆಯ ತಳ ಮಹಡಿ ಪೂರ್ತಿ ಜಲಾವೃತಗೊಂಡಿದ್ದು, ರೋಗಿಗಳು ಪರದಾಡಿದರು. ತುರ್ತಾಗಿ ರೋಗಿಗಳು ಮತ್ತು ದುಬಾರಿ ವೈದ್ಯಕೀಯ ಉಪಕರಣಗಳನ್ನು ಮೇಲಿನ ಮಹಡಿಗೆ ಸ್ಥಳಾಂತರ ಮಾಡಲಾಯಿತು.

ಬೆಂಗಳೂರು- ಮೈಸೂರು ಹತ್ತು ಪಥಗಳ ಹೆದ್ದಾರಿಯಲ್ಲಿ ಇಡೀ ದಿನ ಸಂಚಾರ ಅಸ್ತವ್ಯಸ್ತಗೊಂಡಿದ್ದು, ಜನರು ಪರದಾಡಿದರು. ಬಸವನಪುರ ಅಂಡರ್ ಪಾಸ್ ಬಳಿ ಮಳೆ ಪ್ರವಾಹದಲ್ಲಿ ನಾಲ್ಕೈದು ಕಾರುಗಳು, ಆಟೊ ಹಾಗೂ ಒಂದು ಬಸ್ ಮುಳುಗಡೆ ಆಗಿತ್ತು. ಬಿಳಗುಂಬ ಅಂಡರ್ ಪಾಸ್‌ನಲ್ಲಿ ಖಾಸಗಿ ಬಸ್ ಸಿಲುಕಿದ್ದು, ಸ್ಥಳೀಯರು ಪ್ರಯಾಣಿಕರ ನೆರವಿಗೆ ಧಾವಿಸಿದರು. ಹೆದ್ದಾರಿಯಲ್ಲಿ ಕಿಲೋಮೀಟರ್ ಗಟ್ಟಲೆ ಉದ್ದಕ್ಕೆ ವಾಹನಗಳು ನಿಂತಿದ್ದವು.

ರಾಮನಗರ ಹಾಗೂ ಚನ್ನಪಟ್ಟಣ ರೈಲು ನಿಲ್ದಾಣಗಳಲ್ಲಿ ನೀರು ನಿಂತಿತ್ತು. ರಾಮನಗರದ ರೈಲ್ವೆ ಅಂಡರ್ ಪಾಸ್‌ನಲ್ಲಿ ಕೆಎಸ್ ಆರ್ ಟಿಸಿ ಬಸ್ ನೀರಿನಲ್ಲಿ ಸಿಲುಕಿದ್ದು, ಅಗ್ನಿಶಾಮಕ ಸಿಬ್ಬಂದಿ ರಕ್ಷಣೆ ಮಾಡಿದರು.

ಕೊಡಗಿನಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಬಹುತೇಕ ಕೆರೆಗಳು ತುಂಬಿ ಹರಿದಿವೆ. ನೂರಾರು ಎಕರೆ ಕೃಷಿ ಭೂಮಿ ಜಲಾವೃತವಾಗಿ, ಹಲವು ಗ್ರಾಮಗಳಿಗೆ ನೀರು ನುಗ್ಗಿತ್ತು. ಮಡಿಕೇರಿ– ಮಂಗಳೂರು ರಸ್ತೆಯ 7ನೇ ಮೈಲಿ ಬಳಿ ಗುಡ್ಡದ ಮಣ್ಣು ರಸ್ತೆಗೆ ಕುಸಿದಿದೆ. ಭಾಗಮಂಡಲದ ತ್ರಿವೇಣಿ ಸಂಗಮ ಜಲಾವೃತಗೊಂಡಿದೆ.

ಚನ್ನಪಟ್ಟಣ, ರಾಮನಗರದಲ್ಲಿ ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ ಬಂದ್ ಆಗಿರುವುದರಿಂದ ಮಂಡ್ಯ ಜಿಲ್ಲೆಯ ಮದ್ದೂರು ಬಳಿಯೇ ವಾಹನಗಳ ಮಾರ್ಗ ಬದಲಾಯಿಸಲಾಗಿತ್ತು. ಮೈಸೂರು ಕಡೆ ವಾಹನಗಳು ಮದ್ದೂರು– ಹುಲಿಯೂರು ದುರ್ಗ, ಕುಣಿಗಲ್ ಮೂಲಕ ಬೆಂಗಳೂರು ತಲುಪಿದವು.

ಹಾವೇರಿ ಜಿಲ್ಲೆಯ ಅಕ್ಕೂರ ಮತ್ತು ಮರಡೂರ ಗ್ರಾಮಗಳ ನಡುವೆ ವರದಾ ನದಿಗೆ ನಿರ್ಮಿಸಿರುವ ಸೇತುವೆ ಪ್ರವಾಹಕ್ಕೆ ಸಂಪೂರ್ಣ ಕೊಚ್ಚಿ ಹೋಗಿದೆ. 20ಕ್ಕೂ ಹೆಚ್ಚು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆ ಕುಸಿದಿರುವುದರಿಂದ ಗ್ರಾಮದ ಜನರು ಗುತ್ತಲ ಮತ್ತು ಹೊಸರಿತ್ತಿ ಗ್ರಾಮಕ್ಕೆ ಹೋಗಲು 20 ಕಿ.ಮೀ ಸುತ್ತುವರೆದು ಸಂಚರಿಸುತ್ತಿದ್ದಾರೆ.

ಸುಬ್ರಹ್ಮಣ್ಯ ಸಮೀಪದ ಕಡಮಕಲ್ಲು ಎಸ್ಟೇಟ್ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ಭಾರಿ ಭೂ ಕುಸಿತ ಉಂಟಾಗಿದ್ದು, ಹೊಳೆಯಲ್ಲಿ ಮಣ್ಣು ಕೊಚ್ಚಿಕೊಂಡು ಬಂದಿದೆ. ಮೂರನೇ ಬಾರಿಗೆ ಉಪ್ಪುಕಳ ಕಾಲು ಸೇತುವೆ ಕೊಚ್ಚಿ ಹೋಗಿದೆ.

## ಅತಿವೃಷ್ಟಿ ಹಾನಿ ಪರಿಶೀಲಿಸಿದ ಸಿ.ಎಂ

ಒಂದನೇ ಪುಟದಿಂದ...

'ಮಳೆಯಿಂದ ಹಾನಿಗೊಳಗಾದ ಮನೆ ಮಾಲೀಕರಿಗೆ ₹50 ಸಾವಿರದಿಂದ ₹5 ಲಕ್ಷದವರೆಗೆ ಪರಿಹಾರ ನೀಡಲಾಗುವುದು. ಜಿಲ್ಲೆಯಲ್ಲಿ ಬೆಳೆ ಹಾನಿ ಸಂಬಂಧ ಜಂಟಿ ಸರ್ವೆ ನಡೆಸಲಾಗುವುದು. ಕೇಂದ್ರ ಸರ್ಕಾರ ಸೂಚಿಸಿರುವ ಪರಿಹಾರಕ್ಕಿಂತ ದುಪ್ಪಟ್ಟು ನೆರವು ನೀಡಲಾಗುವುದು' ಎಂದು ಮುಖ್ಯಮಂತ್ರಿ ಪತ್ರಕರ್ತರಿಗೆ ಮಾಹಿತಿ ನೀಡಿದರು.

ಕಂದಾಯ ಸಚಿವ ಆರ್. ಅಶೋಕ್, ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಚನ್ನಪಟ್ಟಣ ಶಾಸಕ ಎಚ್.ಡಿ. ಕುಮಾರಸ್ವಾಮಿ, ರಾಮನಗರ ಶಾಸಕಿ ಅನಿತಾ ಕುಮಾರಸ್ವಾಮಿ, ಸಂಸದ ಡಿ.ಕೆ. ಸುರೇಶ್, ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಜೊತೆಗಿದ್ದರು.

## ಪೋಕ್ಸೊ: ಪ್ರಮುಖ ಅಸ್ತ್ರ

**ಬೆಂಗಳೂರು:** ಲೈಂಗಿಕ ಅಪರಾಧಗಳಿಂದ ಮಕ್ಕಳನ್ನು ರಕ್ಷಿಸುವ ಕಾಯ್ದೆಯು (ಪೋಕ್ಸೊ ಕಾಯ್ದೆ) 2012ರ ನವೆಂಬರ್‌ನಲ್ಲಿ ಜಾರಿಗೆ ಬಂತು. ಪೋಕ್ಸೊ ಕಾಯ್ದೆ ಎಂದೇ ಕರೆಯಲಾಗುವ ಈ ಕಾಯ್ದೆಗೆ 2019ರಲ್ಲಿ ತಿದ್ದುಪಡಿಯನ್ನೂ ತರಲಾಗಿದೆ. ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸುವುದು ಈ ಕಾಯ್ದೆಯ ಮುಖ್ಯ ಉದ್ದೇಶ. ಎಲ್ಲ ರೀತಿಯ ಲೈಂಗಿಕ ಅಪರಾಧಗಳನ್ನೂ ಪೋಕ್ಸೊ ಕಾಯ್ದೆಯು ತನ್ನ ವ್ಯಾಪ್ತಿಯಲ್ಲಿ ಸೇರಿಸಿಕೊಂಡಿದೆ.

ಸ್ಪರ್ಶ, ಸ್ಪರ್ಶ ಇಲ್ಲದ ಲೈಂಗಿಕ ಕೃತ್ಯಗಳು, ಅತ್ಯಾಚಾರ, ಮಕ್ಕಳಿಗೆ ಲೈಂಗಿಕ ಸಂಪರ್ಕದ ಕೃತ್ಯದ ವಿಡಿಯೊ ಅಥವಾ ಚಿತ್ರಗಳನ್ನು ತೋರಿಸುವುದು ಮುಂತಾದ ಯಾವುದೇ ರೀತಿಯ ಲೈಂಗಿಕ ಅಪರಾಧವನ್ನು ಪೋಕ್ಸೊ ಕಾಯ್ದೆ ಅಡಿಯಲ್ಲಿ ವಿಚಾರಣೆಗೆ ಒಳಪಡಿಸಬಹುದು.

ಪೋಕ್ಸೊ ಕಾಯ್ದೆ ಅಡಿಯಲ್ಲಿ ದಾಖಲಾಗುವ ಪ್ರಕರಣಗಳನ್ನು ಸಂಜ್ಞೇಯ ಮತ್ತು ಜಾಮೀನರಹಿತ ಅಪರಾಧ ಎಂದು ಪರಿಗಣಿಸಲಾಗುತ್ತದೆ.

ಹೆಣ್ಣು ಮಕ್ಕಳು ಮಾತ್ರವಲ್ಲದೆ, ಗಂಡು ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯದ ವಿರುದ್ಧವೂ ಈ ಕಾಯ್ದೆಯನ್ನು ಅನ್ವಯಿಸಬಹುದು ಎಂಬುದು ಇನ್ನೊಂದು ವಿಶೇಷ.

ಆರೋಪವು ಸಾಬೀತಾಗುವವರೆಗೆ ಆರೋಪಿಯು ನಿರಪರಾಧಿ ಎಂಬ ನ್ಯಾಯದಾನದ ತತ್ವವು ಪೋಕ್ಸೊ ಪ್ರಕರಣಗಳಿಗೆ ಅನ್ವಯ ಆಗುವುದಿಲ್ಲ. ದೂರು ದಾಖಲಾಗಿದೆ ಎಂದರೆ, ಆರೋಪಿಗೆ ಲೈಂಗಿಕ ದೌರ್ಜನ್ಯ ಎಸಗುವ ಉದ್ದೇಶ ಇತ್ತು ಎಂದೇ ಪರಿಗಣಿಸಲಾಗುವುದು.

# ಮುರುಘಾ ಶ್ರೀಗೆ ಬಂಧನ ಭೀತಿ

ಒಂದನೇ ಪುಟದಿಂದ...

ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮಕ್ಕೆ ನುಗ್ಗಿದ ಸ್ಥಳೀಯರು ಶರಣರ ಪ್ರತಿಮೆ ಧ್ವಂಸಗೊಳಿಸಿದರು.

**ಅರ್ಧ ದಿನ ಕಾಣದ ಸ್ವಾಮೀಜಿ:** ಶಿವಮೂರ್ತಿ ಮುರುಘಾ ಶರಣರು ಸೋಮವಾರ ಬೆಳಿಗ್ಗೆಯಿಂದ ಅರ್ಧ ದಿನ ಕಣ್ಮರೆಯಾಗಿದ್ದು ಹಲವು ವದಂತಿಗಳಿಗೆ ಕಾರಣವಾಯಿತು. ಗ್ರಾಮಾಂತರ ಠಾಣೆಯ ಪೊಲೀಸರು ಮಠಕ್ಕೆ ಧಾವಿಸಿ ಶರಣರು ಮಠದಲ್ಲಿಲ್ಲ ಎಂಬುದನ್ನು ಖಚಿತಪಡಿಸಿಕೊಂಡರು. ಅವರು ಹೊರಟ ಮಾರ್ಗದ ಜಾಡುಹಿಡಿದ ಪೊಲೀಸರಿಗೆ ಬೆಳಗಾವಿಯತ್ತ ಪ್ರಯಾಣ ಬೆಳಸುತ್ತಿದ್ದುದು ಗೊತ್ತಾಗಿದೆ. ಸಂಪರ್ಕಿಸುವ ಪ್ರಯತ್ನ ವಿಫಲವಾಗಿದ್ದರಿಂದ ಪೊಲೀಸರು ಅನಿವಾರ್ಯವಾಗಿ ಅವರು ಪ್ರಯಾಣಿಸುತ್ತಿದ್ದ ಕಾರಿನ ಬೆನ್ನುಬಿದ್ದರು.

ರಾಷ್ಟ್ರೀಯ ಹೆದ್ದಾರಿ–48ರಲ್ಲಿ ಸಾಗುತ್ತಿದ್ದ ಶರಣರ ಕಾರು ಧಾರವಾಡ ದಾಟಿ ಬೆಳಗಾವಿ ಜಿಲ್ಲೆಯ ಕಿತ್ತೂರು ಹಾಗೂ ಎಂ.ಕೆ. ಹುಬ್ಬಳ್ಳಿಯ ನಡುವೆ ಇರುವುದನ್ನು ಪೊಲೀಸರು ಪತ್ತೆ ಮಾಡಿದರು. ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ಟೋಲ್ ಗೇಟ್ ಬಳಿ ನಿಯೋಜನೆಗೊಂಡ ಪೊಲೀಸ್ ಸಿಬ್ಬಂದಿ, ಹೆದ್ದಾರಿಯಲ್ಲಿ ಸಾಗುವ ಪ್ರತಿ ವಾಹನವನ್ನು ತಡೆದು ಸ್ವಾಮೀಜಿಗಾಗಿ ತಪಾಸಣೆ ನಡೆಸಿದರು. ಇದರ ಸುಳಿವು ದೊರೆತಿದ್ದರಿಂದ ಸ್ವಾಮೀಜಿಯವರು ತಮ್ಮ ಮುಂದಿನ ಪ್ರಯಾಣವನ್ನು ಮೊಟಕುಗೊಳಿಸಿ ವಾಪಸಾದರು ಎಂದು ಮೂಲಗಳು ಖಚಿತಪಡಿಸಿವೆ. ಪೊಲೀಸರು ಒತ್ತಾಯಪೂರ್ವಕವಾಗಿ ಸ್ವಾಮೀಜಿಯನ್ನು ತಡೆದು, ಚಿತ್ರದುರ್ಗಕ್ಕೆ ಮರಳುವಂತೆ ಸೂಚನೆ ನೀಡಿದರು. ಪೊಲೀಸರ ಬೆಂಗಾವಲಿನಲ್ಲಿ ಶರಣರು ಚಿತ್ರದುರ್ಗದ ಮಠಕ್ಕೆ ಹಿಂದಿರುಗಿದರು ಎಂದು ತಿಳಿದುಬಂದಿದೆ.

## 'ಪಲಾಯನ ಮಾಡುವುದಿಲ್ಲ'

'ಈ ನೆಲದ ಕಾನೂನು ಗೌರವಿಸುವ ಮಠಾಧೀಶರು ನಾವು. ತನಿಖೆಗೆ ಎಲ್ಲ ರೀತಿಯ ಸಹಕಾರ ನೀಡುತ್ತೇವೆ. ಯಾವುದೇ ಕಾರಣಕ್ಕೂ ಪಲಾಯನ ಮಾಡುವುದಿಲ್ಲ' ಎಂದು ಮಠಕ್ಕೆ ವಾಪಸಾದ ಶಿವಮೂರ್ತಿ ಮುರುಘಾ ಶರಣರು ಭಕ್ತರಿಗೆ ಅಭಯ ನೀಡಿದರು.

'ಇಂತಹ ಸಮಸ್ಯೆಗಳು 15 ವರ್ಷಗಳಿಂದ ಮಠದ ಒಳಗಿದ್ದವು. ಈಗಷ್ಟೇ ಇದು ಹೊರಬಿದ್ದಿದೆ. ಇದನ್ನು ಧೈರ್ಯದಿಂದ ಎದುರಿಸಲು ಸಜ್ಜಾಗಿದ್ದೇವೆ. ಈ ಸಂಕಷ್ಟದಿಂದ ಹೊರಗೆ ಬರುವ ಸಂಪೂರ್ಣ ವಿಶ್ವಾಸವಿದೆ' ಎಂದರು.

## ಸ್ಥಳ ಮಹಜರು

ಸಂತ್ರಸ್ತ ಬಾಲಕಿಯರನ್ನು ತನಿಖಾಧಿಕಾರಿಗಳು ಸೋಮವಾರ ಸಂಜೆ 4ಕ್ಕೆ ಮಠಕ್ಕೆ ಕರೆತಂದು ಸ್ಥಳ ಮಹಜರು ನಡೆಸಿದರು. ಮುರುಘಾ ಶರಣರು ತಂಗುತ್ತಿದ್ದ 'ಬೆಡ್‌ರೂಂ' ಹಾಗೂ ಸ್ನಾನದ ಕೊಠಡಿಗೆ ತೆರಳಿ ಎರಡೂವರೆ ಗಂಟೆಗೂ ಹೆಚ್ಚು ಕಾಲ ಸ್ಥಳ ಮಹಜರು ನಡೆಸಿದರು. ಸಂತ್ರಸ್ತ ಬಾಲಕಿಯರು ಮಂಗಳವಾರ ನ್ಯಾಯಾಧೀಶರ ಎದುರು ಹೇಳಿಕೆ ನೀಡಲಿದ್ದಾರೆ.

## ಮಠದಲ್ಲಿ ಬಿಗುವಿನ ವಾತಾವರಣ

ವೀರಶೈವ ಲಿಂಗಾಯತ ಸಮುದಾಯದ ಮುಖಂಡರು ಮಧ್ಯಾಹ್ನ 1 ಗಂಟೆಗೆ ಮಠಕ್ಕೆ ಧಾವಿಸುವಂತೆ ಭಕ್ತರಿಗೆ ಕರೆ ನೀಡಿದರು. ಸಾಮಾಜಿಕ ಜಾಲತಾಣದ ಮೂಲಕ ಹರಿದಾಡಿದ ಸಂದೇಶ ಕಂಡು ಭಕ್ತರ ದಂಡು ಮಠದತ್ತ ಹರಿದುಬಂತು. ಹಾವೇರಿ ಜಿಲ್ಲಾ ವ್ಯಾಪ್ತಿಯಲ್ಲಿ ಶರಣರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂಬ ವದಂತಿ ಭಕ್ತರನ್ನು ಕೆರಳಿಸಿತ್ತು.

# ಮುರುಘಾ ಶರಣರ ಪ್ರತಿಮೆ ಧ್ವಂಸ

ಪ್ರಜಾವಾಣಿ ವಾರ್ತೆ

**ಹೊಳಲ್ಕೆರೆ:** ಶಿವಮೂರ್ತಿ ಮುರುಘಾ ಶರಣ ವಿರುದ್ಧ ಕೇಳಿ ಬಂದಿರುವ ಆರೋಪದಿಂದ ಆಕ್ರೋಶಗೊಂಡ ಸಾರ್ವಜನಿಕರು ತಾಲ್ಲೂಕಿನ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದಲ್ಲಿದ್ದ ಅವರ ಪ್ರತಿಮೆಯನ್ನು ಸೋಮವಾರ ಧ್ವಂಸಗೊಳಿಸಿದರು. ಶಿವಮೂರ್ತಿ ಮುರುಘಾ ಶರಣರ ಅಣಕು ಶವಯಾತ್ರೆ ನಡೆಸಿ ಭಾವಚಿತ್ರಗಳನ್ನು ಸುಟ್ಟುಹಾಕಿದರು.

ಮಲ್ಲಾಡಿಹಳ್ಳಿ, ಕೆಂಗುಂಟೆ, ದುಮ್ಮಿ, ರಾಮಘಟ್ಟ ಸೇರಿ ಸುತ್ತಲಿನ ಗ್ರಾಮದ ಯುವಕರು ಏಕಾಏಕಿ ಆಶ್ರಮಕ್ಕೆ ನುಗ್ಗಿ ದಾಂಧಲೆ ನಡೆಸಿದರು. ಪ್ರತಿಮೆಯನ್ನು ಹಾರೆಯಿಂದ ಉರುಳಿಸಿದರು. ಶಿವಮೂರ್ತಿ ಶರಣರ ಭಾವಚಿತ್ರಗಳನ್ನು ಹೊರಗೆ ತಂದು ಗ್ರಾಮದ ಮುಖ್ಯ ವೃತ್ತದಲ್ಲಿ ಬೆಂಕಿಹಾಕಿ ಆಕ್ರೋಶ ವ್ಯಕ್ತಪಡಿಸಿದರು. 'ರಾಘವೇಂದ್ರ ಸ್ವಾಮೀಜಿ ಮಲ್ಲಾಡಿಹಳ್ಳಿ ಆಶ್ರಮವನ್ನು ಎತ್ತರಕ್ಕೆ ಕೊಂಡೊಯ್ದಿದ್ದರು. ಶಿವಮೂರ್ತಿ ಮುರುಘಾ ಶರಣರು ಆಶ್ರಮದ ಅಧ್ಯಕ್ಷರಾದ ಬಳಿಕ ಹಿನ್ನಡೆಯಾಗಿದೆ' ಎಂದು ಆಗ್ರಹಿಸಿದರು.

## 'ಆಶ್ರಮಕ್ಕೂ, ಮಠಕ್ಕೂ ಸಂಬಂಧವಿಲ್ಲ'

**ಚಿತ್ರದುರ್ಗ:** ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮಕ್ಕೂ ಚಿತ್ರದುರ್ಗದ ಮುರುಘಾ ಮಠಕ್ಕೂ ಆರ್ಥಿಕ, ಆಡಳಿತಾತ್ಮಕ ಹಾಗೂ ವ್ಯವಹಾರಿಕವಾಗಿ ಯಾವುದೇ ಸಂಬಂಧವಿಲ್ಲ ಎಂದು ಅನಾಥ ಸೇವಾಶ್ರಮ ವಿಶ್ವಸ್ಥ ಸಮಿತಿ ಸ್ಪಷ್ಟಪಡಿಸಿದೆ.

'ಆಶ್ರಮದ ಟ್ರಸ್ಟಿಗಳಲ್ಲಿ ಒಬ್ಬರಾಗಿರುವ ಶಿವಮೂರ್ತಿ ಮುರುಘಾ ಶರಣರು ಆಶ್ರಮದ ಅಧ್ಯಕ್ಷ ಸ್ಥಾನದಲ್ಲಿದ್ದಾರೆ. ಅದು ಗೌರವದಿಂದ ನೀಡಲಾದ ಸ್ಥಾನ. ಇತ್ತೀಚಿನ ಬೆಳವಣಿಗೆಗಳಿಂದ ಆಶ್ರಮದ ಘನತೆಗೆ ಧಕ್ಕೆ ಉಂಟಾಗಿದ್ದು, ಶೀಘ್ರ ಸಭೆ ಕರೆದು ಚರ್ಚಿಸಲಾಗುವುದು' ಎಂದು ಗೌರವ ಕಾರ್ಯದರ್ಶಿ ಪ್ರೊ.ಕೆ.ಇ. ರಾಧಾಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಕರಣ ವರ್ಗಾವಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಕಾಯ್ದೆಯಡಿ ದಾಖಲಾಗಿರುವ ಪ್ರಕರಣದ ತನಿಖೆಯನ್ನು ನೆರೆಯ ರಾಜ್ಯಕ್ಕೆ ವರ್ಗಾಯಿಸಬೇಕು ಎಂದು ದಲಿತ ಸಂಘಟನೆಗಳ ಒಕ್ಕೂಟ ಹಾಗೂ ದಲಿತ ಹಕ್ಕುಗಳ ಸಮಿತಿಗಳು ಆಗ್ರಹಿಸಿವೆ.

'ಆರೋಪಿ ಮುರುಘಾ ಶರಣರು ಬಲಾಢ್ಯರಾಗಿದ್ದಾರೆ. ರಾಜ್ಯ ಸರ್ಕಾರ ಹಾಗೂ ಅಧಿಕಾರದಲ್ಲಿರುವ ರಾಜಕಾರಣಿಗಳು ಅವರ ಬೆಂಬಲಕ್ಕೆ ನಿಂತಿದ್ದಾರೆ. ಹೀಗಾಗಿ, ಸಂತ್ರಸ್ತ ಬಾಲಕಿಯರಿಗೆ ನ್ಯಾಯ ಸಿಗುವ ಲಕ್ಷಣಗಳೂ ಕಾಣಿಸುತ್ತಿಲ್ಲ. ಪ್ರಕರಣವನ್ನು ನೆರೆ ರಾಜ್ಯಕ್ಕೆ ವರ್ಗಾಯಿಸಬೇಕು' ಎಂದು ದಲಿತ ಸಂಘಟನೆಗಳ ಒಕ್ಕೂಟದ ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರಗೋಡು, ಎನ್.ವೆಂಕಟೇಶ್, ವಿ.ನಾಗರಾಜ್, ಎನ್. ಮುನಿಸ್ವಾಮಿ, ಲಕ್ಷ್ಮೀನಾರಾಯಣ ನಾಗವಾರ, ದಲಿತ ಹಕ್ಕುಗಳ ಸಮಿತಿಯ ಗೋಪಾಲಕೃಷ್ಣ ಹರಳಹಳ್ಳಿ, ಎನ್. ನಾಗರಾಜ್, ಬಿ. ರಾಜಶೇಖರಮೂರ್ತಿ, ಎನ್. ರಾಜಣ್ಣ ಮತ್ತು ನಾಗಣ್ಣ ಎಚ್. ಒತ್ತಾಯಿಸಿದ್ದಾರೆ.

**ಬಂಧನಕ್ಕೆ ಆಗ್ರಹ:** ಪೋಕ್ಸೊ ಕಾಯ್ದೆಯಡಿದೂರು ದಾಖಲು ಹಿನ್ನೆಲೆಯಲ್ಲಿ ಶಿವಮೂರ್ತಿ ಮುರುಘಾ ಶರಣರನ್ನು ಕೂಡಲೇ ಬಂಧಿಸಬೇಕು ಎಂದು ಕರ್ನಾಟಕ ಸಾಮಾಜಿಕ ನ್ಯಾಯ ಸಮಿತಿ ಒತ್ತಾಯಿಸಿದೆ.

'ಲೈಂಗಿಕ ದೌರ್ಜನ್ಯ ಪ್ರಕರಣ ಮುಚ್ಚಿಡಲು ಸಂಧಾನಕ್ಕೆ ಮುಂದಾಗಿರುವ ಮುಖಂಡರು ಹಾಗೂ ಇತರರ ಮೇಲೆ ಪ್ರಕರಣ ದಾಖಲಿಸಬೇಕು' ಎಂದು ಸಮಿತಿ ಜೆ.ಆರ್.ಶಿವಶಂಕರ್, ದೊಣೆಹಳ್ಳಿ ಗುರುಮೂರ್ತಿ ಆಗ್ರಹಿಸಿದ್ದಾರೆ.

## 'ಯಾರಿಂದಲೂ ಒತ್ತಡ ಬಂದಿಲ್ಲ'

ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ದಾಖಲಾದ ಪೋಕ್ಸೊ ಪ್ರಕರಣದ ಕುರಿತು ಎಲ್ಲಾ ಆಯಾಮದಿಂದಲೂ ತನಿಖೆ ನಡೆಯುತ್ತಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಿಂದಲೂ ಒತ್ತಡ ಬಂದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದ ಮಕ್ಕಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಅವರ ಪೋಷಕರನ್ನು ಸಹ ಸಂಪರ್ಕಿಸಿ ಮಾಹಿತಿ ಸಂಗ್ರಹಿಸಲು ಮುಂದಾಗಿದ್ದೇವೆ. ಪೋಕ್ಸೊ ಕಾಯ್ದೆಯಡಿ ತನಿಖೆ ಮುಂದುವರಿದಿದೆ

**ಅಲೋಕ್ ಕುಮಾರ್,** ಅಪರಾಧ ಮತ್ತು ಕಾನೂನು ಸುವ್ಯವಸ್ಥೆ ಎಡಿಜಿಪಿ

**ಮುರುಘಾ ಶರಣರ ಪ್ರಕರಣದ ತನಿಖೆ ನಿಷ್ಪಕ್ಷಪಾತವಾಗಿರಲಿದೆ. ತನಿಖೆಗೆ ಮೊದಲೇ ಅಪರಾಧಿ ಅಥವಾ ನಿರಪರಾಧಿ ಪ್ರಮಾಣಪತ್ರ ನೀಡಲಾಗದು**

**ಸಿ.ಟಿ.ರವಿ**
ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

## ಸಚಿವ ಆರಗ ವಿರುದ್ಧ ದೂರು

ಲೈಂಗಿಕ ಕಿರುಕುಳ ಪ್ರಕರಣದ ಆರೋಪಿ ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಶರಣರ ಗೃಹ ಸಚಿವ ಆರಗ ಜ್ಞಾನೇಂದ್ರ, ಪೊಲೀಸ್ ಮಹಾನಿರ್ದೇಶಕರು ರಕ್ಷಿಸುತ್ತಿದ್ದಾರೆ ಎಂದು ಆರೋಪಿಸಿ ಮಾನವ ಹಕ್ಕುಗಳ ಹೋರಾಟ ಮತ್ತು ಭ್ರಷ್ಟಾಚಾರ ವಿರೋಧಿ ಸಂಸ್ಥೆಯ ಅಧ್ಯಕ್ಷ ಎಸ್.ಆರ್.ರಾಘವೇಂದ್ರ, ರಾಜ್ಯಪಾಲರಿಗೆ ದೂರುನೀಡಿದ್ದಾರೆ.

'ಪ್ರಕರಣದಲ್ಲಿ ಗೃಹ ಸಚಿವರು ಮತ್ತು ಗೃಹ ಇಲಾಖೆ ಕಾನೂನಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದಾರೆ. ಆರೋಪಿ ಸ್ವಾಮೀಜಿ ಬಂಧಿಸುವಂತೆ ಗೃಹಸಚಿವರು ಸೂಚಿಸಬೇಕಿತ್ತು. ಆದರೆ, ದೂರಿನ ಹಿಂದೆ ಪಿತೂರಿ ಇದೆ ಎಂದು ಹೇಳಿಕೆ ನೀಡಿದ್ದಾರೆ. ಇವರ ಅಧೀನದ ಪೊಲೀಸರ ತನಿಖೆಯಿಂದ ನ್ಯಾಯ ದೊರಕುವ ವಿಶ್ವಾಸವಿಲ್ಲ' ಎಂದಿದ್ದಾರೆ.

ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ತನಿಖೆ ಉಸ್ತುವಾರಿ ಇರಬೇಕು. ದೇಶದ ಉನ್ನತ ತನಿಖಾ ಸಂಸ್ಥೆಗಳಿಗೆ ಪ್ರಕರಣ ವರ್ಗಾಯಿಸಬೇಕು ಎಂದಿದ್ದಾರೆ.

## ಸಂಕ್ಷಿಪ್ತ ಸುದ್ದಿ

### ಆಣೆ–ಪ್ರಮಾಣ ಮಾಡಿದ ಶಾಸಕ ಶಿವಲಿಂಗೇಗೌಡ

**ಮಂಗಳೂರು:** ಬಿಜೆಪಿಯ ಕೆಲ ನಾಯಕರ ಹೇಳಿಕೆಯ ವಿರುದ್ಧ ಹಾಸನ ಜಿಲ್ಲೆ ಅರಸೀಕೆರೆ ಶಾಸಕ ಶಿವಲಿಂಗೇಗೌಡ ಸೋಮವಾರ ಧರ್ಮಸ್ಥಳದಲ್ಲಿ ಆಣೆ–ಪ್ರಮಾಣ ಮಾಡಿದರು.

ನೇತ್ರಾವತಿ ನದಿಯಲ್ಲಿ ಸ್ನಾನ ಮಾಡಿ ಬಂದ ಅವರು, ಧರ್ಮಸ್ಥಳ ಮಂಜುನಾಥ ಸ್ವಾಮಿ ದರ್ಶನ ಪಡೆದರು. ಬೆಂಬಲಿಗರ ಜತೆ ಬಂದಿದ್ದ ಅವರು ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿದರು.

ನಂತರ ಸುದ್ದಿಗಾರರ ಜತೆ ಮಾತನಾಡಿ, 'ನಾನು ರಾಗಿ ಕಳ್ಳ ಅಂದಿದ್ದರು, ನಾನು ಏನೂ ಕದ್ದಿಲ್ಲ ಅಂತ ಆಣೆ– ಪ್ರಮಾಣ ಮಾಡಿದ್ದೇನೆ. ಯಾಕೆ ಈ ಆರೋಪ ಮಾಡಿದ್ದಾರೆ ಅನ್ನುವುದು ನನಗೇ ಗೊತ್ತಿಲ್ಲ. ರೈತರಿಗೆ ರಾಗಿ ಕೊಡಿಸಲು ಸಾಕಷ್ಟು ಹೋರಾಟ ಮಾಡಿದ್ದೇನೆ. ಬಿಜೆಪಿ ಮುಖಂಡರು ನನ್ನ ವಿರುದ್ಧ ಆರೋಪ ಮಾಡಿದ್ದರು. ಅವರನ್ನೂ ಧರ್ಮಸ್ಥಳಕ್ಕೆ ಆಹ್ವಾನಿಸಿದ್ದೆ. ಈಗ ಅವರು ಏನು ದಾಖಲೆ ಇದೆ ಅದನ್ನು ಬಿಡುಗಡೆಗೊಳಿಸಲಿ. ನಿರಪರಾಧಿಗಳನ್ನು ಸಾರ್ವಜನಿಕವಾಗಿ ನಿಂದನೆ ಮಾಡುವುದು ಸರಿಯಲ್ಲ' ಎಂದರು.

### ಬಾಲಕನಿಗೆ ವಿಚಿತ್ರ ಶಿಕ್ಷೆ!

**ಚಿಕ್ಕನಾಯಕನಹಳ್ಳಿ (ತುಮಕೂರು):** ಪದೇ ಪದೇ ಚಡ್ಡಿಯಲ್ಲಿ ಮೂತ್ರ ಮಾಡುತ್ತಿದ್ದ ತಾಲ್ಲೂಕಿನ ಮೂರು ವರ್ಷದ ವಿದ್ಯಾರ್ಥಿಯನ್ನು ಗದರಿಸಲು ಅಂಗನವಾಡಿ ಕೇಂದ್ರದ ಶಿಕ್ಷಕಿ ಮತ್ತು ಸಹಾಯಕಿ ಸೇರಿ ಬಾಲಕನ ಗುಪ್ತಾಂಗವನ್ನು ಬೆಂಕಿಕಡ್ಡಿಯಿಂದ ಸುಟ್ಟಿದ್ದಾರೆ. ಇದರಿಂದ ಆತನ ಗುಪ್ತಾಂಗ ಮತ್ತು ತೊಡೆಯ ಬಳಿ ಸುಟ್ಟ ಗಾಯಗಳಾಗಿವೆ.

ಇತ್ತೀಚೆಗೆ ನಡೆದ ಈ ಘಟನೆ ಗೊತ್ತಾಗುತ್ತಲೇ ಜಿಲ್ಲಾ ಮಕ್ಕಳ ಹಕ್ಕು ರಕ್ಷಣಾ ಘಟಕದ ಅಧಿಕಾರಿಗಳು ಸೋಮವಾರ ಗ್ರಾಮಕ್ಕೆ ಧಾವಿಸಿ ಮಕ್ಕಳು, ಶಿಕ್ಷಕಿ, ಸಹಾಯಕಿ ಮತ್ತು ಬಾಲಕನ ಪೋಷಕರ ಹೇಳಿಕೆ ಪಡೆದಿದ್ದಾರೆ. ಕೇಂದ್ರದ ಶಿಕ್ಷಕಿ ಹಾಗೂ ಸಹಾಯಕಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ತಾಲ್ಲೂಕು ಅಧಿಕಾರಿ ನೋಟಿಸ್ ನೀಡಿ ತಪ್ಪೊಪ್ಪಿಗೆ ಪತ್ರ ಪಡೆದಿದ್ದಾರೆ.

## ಕರ್ನಾಟಕ ಯಕ್ಷಗಾನ ಅಕಾಡೆಮಿಯ 2022ನೇ ಸಾಲಿನ ಪ್ರಶಸ್ತಿಗಳು ಪ್ರಕಟ

# ಗಣೇಶ ಕೊಲೆಕಾಡಿಗೆ 'ಪಾರ್ತಿಸುಬ್ಬ ಪ್ರಶಸ್ತಿ'


ಪ್ರಜಾವಾಣಿ ವಾರ್ತೆ


ಗಣೇಶ ಕೊಲೆಕಾಡಿ


ಪುತ್ತಿಗೆ ರಘುರಾಮ ಹೊಳ್ಳ


ಪಟ್ಲ ಸತೀಶ್ ಶೆಟ್ಟಿ


ಭಾಗವತ ಚಂದಯ್ಯ


ಭಾಗವತ ಉಮೇಶ ಭಟ್


ಕೆ.ಪಿ.ಹೆಗಡೆ

**ಬೆಂಗಳೂರು:** ಕರ್ನಾಟಕ ಯಕ್ಷಗಾನ ಅಕಾಡೆಮಿಯ 2022ನೇ ಸಾಲಿನ ಪ್ರಶಸ್ತಿಗಳು ಪ್ರಕಟವಾಗಿದ್ದು, 'ಪಾರ್ತಿಸುಬ್ಬ ಪ್ರಶಸ್ತಿ'ಗೆ ಪ್ರಸಂಗಕರ್ತ ಹಾಗೂ ಯಕ್ಷಗಾನ ಗುರು ಗಣೇಶ ಕೊಲೆಕಾಡಿ ಆಯ್ಕೆಯಾಗಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಅಕಾಡೆಮಿ ಅಧ್ಯಕ್ಷ ಜಿ.ಎಲ್. ಹೆಗಡೆ ಅವರು ಪ್ರಶಸ್ತಿ ಪಟ್ಟಿ ಬಿಡುಗಡೆ ಮಾಡಿದರು. ಅಕಾಡೆಮಿ ರಿಜಿಸ್ಟ್ರಾರ್ ಎಸ್.ಎಚ್. ಶಿವರುದ್ರಪ್ಪ ಇದ್ದರು.

'ಗಣೇಶ ಕೊಲೆಕಾಡಿ ಅವರು ಯಕ್ಷಗಾನ ತಾಳಮದ್ದಳೆಯ ಅರ್ಥಧಾರಿಯಾಗಿ, ಅನೇಕ ತಾಳಮದ್ದಳೆಗಳಲ್ಲಿ ಪಾತ್ರಧಾರಿಯಾಗಿಯೂ ಕಾಣಿಸಿಕೊಂಡಿದ್ದಾರೆ. 'ಪಾರ್ತಿಸುಬ್ಬ ಪ್ರಶಸ್ತಿ'ಯು ₹ 1 ಲಕ್ಷ ನಗದು ಒಳ ಗೊಂಡಿದೆ' ಎಂದು ಜಿ.ಎಲ್. ಹೆಗಡೆ ಎಂದರು.

2022ನೇ ಸಾಲಿನ 'ಗೌರವ ಪ್ರಶಸ್ತಿ'ಗೆ ತೆಂಕುತಿಟ್ಟು ಯಕ್ಷಗಾನ ಕಲಾವಿದ ಪುತ್ತಿಗೆ ರಘುರಾಮ ಹೊಳ್ಳ (ಮಂಗಳೂರು), ತೆಂಕುತಿಟ್ಟು ಭಾಗವತ ಪಟ್ಲ ಸತೀಶ್ ಶೆಟ್ಟಿ (ಮಂಗಳೂರು), ಮೂಡಲಪಾಯ ಯಕ್ಷಗಾನ ಭಾಗವತ ಹಾಗೂ ಕಲಾವಿದ ಭಾಗವತ ಚಂದಯ್ಯ (ತುಮಕೂರು), ಭಾಗವತ ಹಾಗೂ ಪಾರಂಪರಿಕ ಯಕ್ಷಗಾನ ಕಲಾವಿದ ಭಾಗವತ ಉಮೇಶ ಭಟ್ ಬಾಡ (ಉತ್ತರ ಕನ್ನಡ) ಮತ್ತು ಭಾಗವತ ಹಾಗೂ ಬಡಗುತಿಟ್ಟು ಯಕ್ಷಗಾನ ಕಲಾವಿದ ಕೆ.ಪಿ. ಹೆಗಡೆ (ಉಡುಪಿ) ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿ ತಲಾ ₹ 50 ಸಾವಿರ ನಗದು ಒಳಗೊಂಡಿದೆ.

'ಯಕ್ಷಸಿರಿ ವಾರ್ಷಿಕ ಪ್ರಶಸ್ತಿ'ಗೆ ಯಕ್ಷಗಾನ ಕ್ಷೇತ್ರದ 10 ಮಂದಿ ಸಾಧಕರನ್ನು ಆಯ್ಕೆ ಮಾಡಲಾಗಿದೆ. 'ಕರ್ಕಿ ಹಿರಿಯ ಪರಮಯ್ಯ ಹಾಸ್ಯಗಾರ ಪ್ರಶಸ್ತಿ'ಗೆ ಪಾರಂಪರಿಕ ಯಕ್ಷಗಾನ ಕಲಾವಿದ ಹುಕ್ಕಳಮಕ್ಕಿ ಕಮಲಾಕರ ಹೆಗಡೆ (ಉತ್ತರ ಕನ್ನಡ) ಭಾಜನರಾಗಿದ್ದಾರೆ. ಈ ಪ್ರಶಸ್ತಿಗಳು ತಲಾ ₹ 25 ಸಾವಿರ ನಗದು ಒಳಗೊಂಡಿವೆ.

2021ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಮಂಗಳೂರಿನ ಪೊಳಲಿ ನಿತ್ಯಾನಂದ ಕಾರಂತ ಅವರ 'ಯಕ್ಷಗಾನ ಪ್ರಸಂಗ ಸಂಪುಟ', ಬೆಳಗಾವಿಯ ಎಲ್.ಎಸ್. ಶಾಸ್ತ್ರಿ ಅವರ 'ಯಕ್ಷಗಾನ ನಕ್ಷತ್ರಗಳು', ವಿದ್ಯಾರಶ್ಮಿ ಪೆಲತ್ತಡ್ಕ ಅವರ 'ಯಕ್ಷಗಾನ ಲೀಲಾವಳಿ' ಕೃತಿಗಳು ಆಯ್ಕೆಯಾಗಿವೆ. ಈ ಬಹುಮಾನವು ತಲಾ ₹ 25 ಸಾವಿರ ನಗದು ಒಳಗೊಂಡಿವೆ.

'ಅಕಾಡೆಮಿಯ ವಾರ್ಷಿಕ ಪ್ರಶಸ್ತಿಗಳ ಪ್ರದಾನ ಸಮಾರಂಭ ಸೆಪ್ಟೆಂಬರ್ 2 ಅಥವಾ 3ನೇ ವಾರದಲ್ಲಿ ಉಡುಪಿಯ ಕಮಲಶಿಲೆಯಲ್ಲಿ ನಡೆಯಲಿದೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ' ಎಂದು ಜಿ.ಎಲ್. ಹೆಗಡೆ ತಿಳಿಸಿದರು.

**'ಯಕ್ಷಸಿರಿ ವಾರ್ಷಿಕ ಪ್ರಶಸ್ತಿ'ಗೆ ಆಯ್ಕೆಯಾದವರು**

| ಹೆಸರು | ಜಿಲ್ಲೆ | ವಿಭಾಗ |
|---|---|---|
| ಕೋಳ್ಯೂರು ರಾಮು ಶೆಟ್ಟಿ | ಹೊರನಾಡು ಕನ್ನಡಿಗ | ಯಕ್ಷಗಾನ ಕಲಾವಿದ |
| ಕೃಷ್ಣಗಾಣಿಗ ಕೋಡಿ | ಉಡುಪಿ | ಬಡಗುತಿಟ್ಟು ಯಕ್ಷಗಾನ ಕಲಾವಿದ |
| ಕೃಷ್ಣನಾಯ್ಕ ಜ. ಬೇಡ್ಕಣಿ | ಉತ್ತರ ಕನ್ನಡ | ಬಡಾಬಡಗು ಯಕ್ಷಗಾನ ಕಲಾವಿದ |
| ಶುಭಾನಂದ ಶೆಟ್ಟಿ | ಕಾಸರಗೋಡು | ತೆಂಕುತಿಟ್ಟು ಯಕ್ಷಗಾನ ಕಲಾವಿದ |
| ಬಾಲಕೃಷ್ಣ ನಾಯಕ್ | ಉಡುಪಿ | ಬಡಗುತಿಟ್ಟು ಯಕ್ಷಗಾನ ಪ್ರಸಾಧನ ಕಲಾವಿದ |
| ಕವ್ವಾಳೆ ಗಣಪತಿ ಭಾಗವತ | ಉತ್ತರ ಕನ್ನಡ | ಬಡಾಬಡಗು ಯಕ್ಷಗಾನ ಕಲಾವಿದ |
| ಎಸ್.ಪಿ. ಅಪ್ಪಯ್ಯ | ಬೆಂಗಳೂರು | ಮೂಡಲಪಾಯ ಯಕ್ಷಗಾನ ಕಲಾವಿದ |
| ಡಿ. ಭೀಮಯ್ಯ | ತುಮಕೂರು | ಮೂಡಲಪಾಯ ಯಕ್ಷಗಾನ ಕಲಾವಿದ |
| ಕೊಲ್ಲೂರು ಕೊಗ್ಗ ಆಚಾರ್ಯ | ಉಡುಪಿ | ಬಡಗುತಿಟ್ಟು ಯಕ್ಷಗಾನ ಹಿಮ್ಮೇಳ ಕಲಾವಿದ |
| ಅಜಿತ್ ಕುಮಾರ್ ಜೈನ್ | ಉಡುಪಿ | ತೆಂಕುತಿಟ್ಟು ಯಕ್ಷಗಾನ ಕಲಾವಿದ |

## 'ನಂದಿನಿ' 12 ಉತ್ಪನ್ನ ಮಾರುಕಟ್ಟೆಗೆ

**ಬೆಂಗಳೂರು:** ಗಣೇಶ ಹಬ್ಬದ ಪ್ರಯುಕ್ತ ಕೆಎಂಎಫ್ 12 ನೂತನ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

'ಖೋವಾ ಬಾದಾಮ್ ರೋಲ್, ಖೋವಾ ಗೋಡಂಬಿ ರೋಲ್, ಖೋವಾ ಚಾಕೊಲೇಟ್ ರೋಲ್, ಖೋವಾ ಲಾಡು, ಬೆಲ್ಲದ ಬರ್ಫಿ, ಪನೀರ್ ಬರ್ಫಿ, ಕಲಾಕಂದ್, ಬಿಸ್ಕತ್‌ಗಳು, ಪನೀರ್ ಮುರುಕು ಮತ್ತು ಗುಡ್‌ಲೈಫ್ ಚಾಕೊಲೇಟ್ ಗಿಫ್ಟ್ ಬಾಕ್ಸ್ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಲಾಗಿದೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಸತೀಶ್ ತಿಳಿಸಿದರು.

'ಅಧುನಿಕ ತಂತ್ರಜ್ಞಾನದ ಮೂಲಕ ಕೆಎಂಎಫ್ ಮಾರಾಟ ಜಾಲವನ್ನು ವಿಸ್ತರಿಸಿಕೊಳ್ಳುತ್ತಿದೆ. 2027ಕ್ಕೆ ಅಂದಾಜು 1.30 ಕೋಟಿ ಲೀಟರ್ ಹಾಲು ಸಂಗ್ರಹಿಸುವ ಗುರಿ ಹೊಂದಲಾಗಿದೆ. ಪ್ರಸ್ತುತ ಪ್ರತಿ ದಿನ 83 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಹಾಲಿನ ಗುಣಮಟ್ಟ ವಿಷಯದಲ್ಲಿ ರಾಜಿ ಮಾಡಿಕೊಳ್ಳುತ್ತಿಲ್ಲ' ಎಂದು ವಿವರಿಸಿದರು.

'ಕೆಎಂಎಫ್ ಚಾಕೊಲೇಟ್‌ಗೆ ಅಪಾರ ಬೇಡಿಕೆ ಇದೆ. 3 ತಿಂಗಳಲ್ಲಿ 50 ಟನ್ ಚಾಕೊಲೇಟ್ ಮಾರಲಾಗಿದೆ. ಡಿಸೆಂಬರ್ ವೇಳೆಗೆ 100 ಟನ್‌ಮಾರುವ ಗುರಿ ಹೊಂದಲಾಗಿದೆ. ಬೆಂಗಳೂರು ಸೇರಿ ವಿವಿಧೆಡೆ ನಂದಿನಿ ಕೆಫೆ ತೆರೆಯಲಾಗಿದೆ. ಸೆ.30ರಂದು ಮಂಗಳೂರಿನಲ್ಲಿ ಕೆಫೆ ಆರಂಭಿಸಲಾಗುವುದು' ಎಂದರು.

'ಸೆ.12ರಿಂದ 15ರವರೆಗೆ ದೆಹಲಿಯಲ್ಲಿ ಅಂತರರಾಷ್ಟ್ರೀಯ ಡೇರಿ ಫೆಡರೇಷನ್ ವತಿಯಿಂದ 'ವಿಶ್ವ ಡೇರಿ ಶೃಂಗ ಸಭೆ' ನಡೆಯಲಿದೆ. ಇದರ ಪ್ರಾಯೋಜಕತ್ವವನ್ನು ಅಮೂಲ್ ಜತೆಯಲ್ಲಿ ಕೆಎಂಎಫ್ ವಹಿಸಿದೆ. ಇಲ್ಲಿ 15 ಉತ್ಪನ್ನ ಬಿಡುಗಡೆ ಮಾಡಲಾಗುವುದು' ಎಂದರು.

**ಜಂಬೂ ಸವಾರಿಯಲ್ಲಿ ಕೆಎಂಎಫ್ ಸ್ತಬ್ಧಚಿತ್ರ:** ದಸರಾ ಜಂಬೂ ಸವಾರಿಯಲ್ಲಿ ಇದೇ ಮೊದಲ ಬಾರಿ ಕೆಎಂಎಫ್ ಸ್ತಬ್ಧಚಿತ್ರ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರದಲ್ಲಿ ವಿಶೇಷ ಮಾರಾಟ ಮಳಿಗೆ ತೆರೆಯಲು ನಿರ್ಧರಿಸಿದೆ ಎಂದು ಬಿ.ಸಿ. ಸತೀಶ್ ತಿಳಿಸಿದರು.

## ಜನೋತ್ಸವಕ್ಕೆ ತಿರುಗೇಟು: 'ಕೈ' ಜನಜಾಗೃತಿ

ಒಂದನೇ ಪುಟದಿಂದ

ಎಐಸಿಸಿ ಕಾರ್ಯದರ್ಶಿಗಳಾದ ಅಭಿಷೇಕ್ ದತ್, ಮಯೂರ್ ಜಯಕುಮಾರ್, ವಿಷ್ಣುನಾಥನ್, ರೋಜಿ ಎಂ.ಜಾನ್, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಈಶ್ವರ್ ಖಂಡ್ರೆ, ಸಲೀಂ ಅಹ್ಮದ್, ಆರ್. ಧ್ರುವನಾರಾಯಣ್, ಸತೀಶ ಜಾರಕಿಹೊಳಿ, ಕೆಪಿಸಿಸಿ ಸಂವಹನ ಮತ್ತು ಸಾಮಾಜಿಕ ಜಾಲತಾಣ ಘಟಕದ ಅಧ್ಯಕ್ಷ ಪ್ರಿಯಾಂಕ್ ಖರ್ಗೆ ಇದ್ದರು.

### ಕಾಂಗ್ರೆಸ್ ಪ್ರಶ್ನೆಗಳು

ರೈತರಿಗೆ ನಿರಂತರ ವಿದ್ಯುತ್ ಯಾವಾಗ? ಸ್ವಸಹಾಯ ಸಂಘಗಳಿಗೆ, ರೈತ ಸಂಘಗಳಿಗೆ ಕಡಿಮೆ ಬಡ್ಡಿ ದರದಲ್ಲಿ ನೀಡುವ ಸಾಲ ಯೋಜನೆ ಏನಾಯಿತು? ಮಹಿಳೆಯರಿಗೆ ಉಚಿತ ಸ್ಮಾರ್ಟ್ ಫೋನ್ ಯೋಜನೆ ಏನಾಯಿತು? ಮಹಿಳಾ ಉದ್ಯಮಿಗಳಿಗೆ ₹ 100 ಕೋಟಿ ನೀಡುವ ಭರವಸೆ ಎಲ್ಲಿದೆ? 57 ಸಾವಿರ ಶಿಕ್ಷಕರ ಖಾಲಿ ಹುದ್ದೆ ಭರ್ತಿ ಯಾವಾಗ? ಶಾಲಾ-ಕಾಲೇಜುಗಳ ಶುಲ್ಕ ನಿಯಂತ್ರಣ ಪ್ರಾಧಿಕಾರದ ಅನುಷ್ಠಾನವೆಲ್ಲಿ? 70 ಪದವಿ ಕಾಲೇಜುಗಳ ನಿರ್ಮಾಣದ ಭರವಸೆ ಏನಾಯಿತು? ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳ ₹ 3 ಸಾವಿರ ಕೋಟಿ ವಿದ್ಯಾರ್ಥಿವೇತನ ಎಲ್ಲಿದೆ? ₹ 15 ಸಾವಿರ ಕೋಟಿ ವಸತಿ ಯೋಜನೆ ಅನುಷ್ಠಾನ ಯಾವಾಗ? ವಾಲ್ಮೀಕಿ ಭವನಗಳ ನಿರ್ಮಾಣ ಏನಾಯಿತು? ವಿಶ್ವಗುರು ಬಸವಣ್ಣ, ಕುವೆಂಪು, ನಾರಾಯಣ ಗುರುಗಳಿಗೆ ಅಪಮಾನವೇಕೆ ಮಾಡಿದಿರಿ? ಕಸ ಮುಕ್ತ ಬೆಂಗಳೂರಿನ ಭರವಸೆ ಏನಾಯಿತು?















| ಕ್ರಮ ಸಂಖ್ಯೆ | ಸರ್ವೆ ನಂಬ್ರ | ಜಮೀನಿನ ತರಹೆ | ಜಮೀನಿನ ವಿವರಣೆ | ಜಮೀನಿನ ವಿಸ್ತೀರ್ಣ (ಚದರಮೀಟರ್ ಗಳಲ್ಲಿ) | ಭೂ ಮಾಲೀಕರು / ಹಿತಾಸಕ್ತಿದಾರರ ಹೆಸರು. |
|---|---|---|---|---|---|
| 45 | 313/13 | ಖಾಸಗಿ | ಖುಷ್ಕಿ | 284 | ಸೀಮಾ ಶೇಕ್ ಸಲೀಮುದ್ದೀನ್ ಕೋಂ ಸಲೀಮುದ್ದೀನ್ |
| 46 | 313/2 | ಖಾಸಗಿ | ಕೃಷಿಯೇತರ | 20 | ಮಹಮ್ಮದ್ ಇಸಾಕ್ |
| 47 | 313/3 | ಖಾಸಗಿ | ಖುಷ್ಕಿ | 284 | ಗಿರಿಯಪ್ಪ ನಾಯ್ಕ್ ಬಿನ್ ನಾಗು ಹೆಂಗ್ಸು |
| 48 | 313/4 | ಖಾಸಗಿ | ಖುಷ್ಕಿ | 284 | ಸೀತು ಹೆಂಗ್ಸು ಬಿನ್ ನಾಗು ಹೆಂಗ್ಸು |
| 49 | 313/P | ಖಾಸಗಿ | ಕೃಷಿಯೇತರ | 71 | ಮಹಮ್ಮದ್ ಇಸಾಕ್,ಸೀಮಾ ಶೇಕ್ ಸಲೀಮುದ್ದೀನ್ ಕೋಂ ಸಲೀಮುದ್ದೀನ್ (ಹಿತಾಸಕ್ತಿದಾರರು)313/14 |
| 50 | 358/4A | ಸರಕಾರ | ಖುಷ್ಕಿ | 600 | ಸರಕಾರ |
| 51 | 358/4B | ಖಾಸಗಿ / ಸರಕಾರ | ಖುಷ್ಕಿ | 263 | ಸಾಲ್ವದೋರ್ ಸೋಜಾ ಬಿನ್ ಪೌಲ್ ಸೋಜಾ 358/4B1 |
| 52 | 358/4B | ಖಾಸಗಿ / ಸರಕಾರ | ಖುಷ್ಕಿ | 537 | ಸರಕಾರ 358/4B2 |
| 53 | 390/1A1 | ಖಾಸಗಿ | ಕೃಷಿಯೇತರ | 769 | ವಲೇರಿಯನ್ ಸಿಕ್ವೇರಾ ಬಿನ್ ದಿ.ಮೋಂತು ಸಿಕ್ವೇರಾ, ಮೈಕಲ್ ಸಿಕ್ವೇರಾ ಬಿನ್ ದಿ.ಮೋಂತು ಸಿಕ್ವೇರಾ ಮತ್ತು ಇತತರು |
| 54 | 390/1A2 | ಖಾಸಗಿ | ಕೃಷಿಯೇತರ / ಖುಷ್ಕಿ | 203 | ತಾಹಿರಾ ಫೀರ್ ಸಾಹೇಬ್, ಕೈರುಂಬಿ, ಅಬ್ಬುಯಾನೆ ಹುಸೈನ್, ಜರೀನ ಮತ್ತು ಇತರರು |
| 55 | 390/1A2 | ಖಾಸಗಿ | ಕೃಷಿಯೇತರ / ಖುಷ್ಕಿ | 202 | ತಾಹಿರಾ ಫೀರ್ ಸಾಹೇಬ್, ಕೈರುಂಬಿ, ಅಬ್ಬುಯಾನೆ ಹುಸೈನ್, ಜರೀನ ಮತ್ತು ಇತರರು |
| 56 | 390/1B | ಖಾಸಗಿ | ಖುಷ್ಕಿ | 607 | ವಲೇರಿಯನ್ ಸಿಕ್ವೇರಾ ಬಿನ್ ದಿ.ಮೋಂತು ಸಿಕ್ವೇರಾ, |
| 57 | 411/2 | ಖಾಸಗಿ | ಕೃಷಿಯೇತರ | 728 | ಫೆಲಿಕ್ಸ್ ಡಿ'ಸಿಲ್ವ ಬಿನ್ ಎ.ಡಿಸಿಲ್ವ |
| 58 | 411/3 | ಖಾಸಗಿ / ಸರಕಾರ | ಪೊರಂಬೋಕು/ ಕೃಷಿಯೇತರ | 2598 | ಸರಕಾರ, ಮಾರ್ಗರೇಟ್ ಮಸ್ಕರೇನ್ಹಸ್ (ಹಿತಾಸಕ್ತಿದಾರರು) |
| 59 | 411/3 | ಖಾಸಗಿ / ಸರಕಾರ | ಪೊರಂಬೋಕು/ ಕೃಷಿಯೇತರ | 112 | ಲೀಲಾ ಕೋಂ ಕರಿಯ (ಮನೆ ನಿವೇಶನ ಮಂಜೂರು) |
| 60 | 429/1 | ಖಾಸಗಿ | ಕೃಷಿಯೇತರ | 931 | ಮಿಸ್ರಿಯಾ ಬಾನು ಬಿನ್ ಬಿ.ಕೆ.ಉಸ್ಮಾನ್ |
| 61 | 429/2 | ಸರಕಾರ | ಖುಷ್ಕಿ | 60 | ಸರಕಾರ |
| 62 | 429/7 | ಖಾಸಗಿ | ಕೃಷಿಯೇತರ | 405 | ಮಿಸ್ರಿಯಾ ಬಾನು ಬಿನ್ ಬಿ.ಕೆ.ಉಸ್ಮಾನ್ |
| 63 | 429/9 | ಖಾಸಗಿ | ಖುಷ್ಕಿ | 162 | ಅಬೂಬಕ್ಕರ್ |
| 64 | 480/10 | ಖಾಸಗಿ | ಖುಷ್ಕಿ | 3238 | ಸುನಂದ, ಸುಮಿತ್ರ, ಶೇಖರ ಪೂಜಾರಿ, ಶಿವಾನಂದ ಪೂಜಾರಿ, ಶಾರದಾ ಎಸ್ ಅಮೀನ್ |
| 65 | 480/8 | ಖಾಸಗಿ | ಖುಷ್ಕಿ | 404 | ಪ್ರಕಾಶ್ ಅಮೀನ್, ಬಿನ್ ದೂಜ ಅಂಚನ್, ಸುರೇಶ್ ಅಂಚನ್ ಬಿನ್ ದೂಜ ಅಂಚನ್, ಸುಲೋಚನಾ ಬಿನ್ ದೋಜ ಅಂಚನ್ |
| 66 | 480/9 | ಖಾಸಗಿ | ಖುಷ್ಕಿ | 931 | ರಾಜೀವಿ ವಿಶ್ವನಾಥ ಅಂಚನ್, ಕೋಂ ವಿಶ್ವನಾಥ ಅಂಚನ್, ಸತೀಶ್ ಅಂಚನ್ ಬಿನ್ ವಿಶ್ವನಾಥ ಅಂಚನ್, ಸುಧಾಕರ ಅಂಚನ್ ಬಿನ್ ವಿಶ್ವನಾಥ ಅಂಚನ್.ಸುಜಯ ನಾಯ್ಕ್ ಬಿನ್ ವಿಶ್ವನಾಥ ಅಂಚನ್ |
| 67 | 534/10 | ಖಾಸಗಿ | ಖುಷ್ಕಿ | 1012 | ಯೋಗಿನಿ |
| 68 | 534/23 | ಖಾಸಗಿ | ಖುಷ್ಕಿ | 283 | ಕೃಷ್ಣ ಎಸ್.ಪೂಜಾರಿ |

| ಕ್ರಮ ಸಂಖ್ಯೆ | ಸರ್ವೆ ನಂಬ್ರ | ಜಮೀನಿನ ತರಹೆ | ಜಮೀನಿನ ವಿವರಣೆ | ಜಮೀನಿನ ವಿಸ್ತೀರ್ಣ (ಚದರಮೀಟರ್ ಗಳಲ್ಲಿ) | ಭೂ ಮಾಲೀಕರು / ಹಿತಾಸಕ್ತಿದಾರರ ಹೆಸರು. |
|---|---|---|---|---|---|
| 69 | 534/5 | ಖಾಸಗಿ | ಖುಷ್ಕಿ | 408 | ಶೀನ ಪೂಜಾರಿ |
| 70 | 534/8 | ಖಾಸಗಿ | ಕೃಷಿಯೇತರ / ಖುಷ್ಕಿ | 405 | ಶಾಲಿನಿ |
| 71 | 534/8 | ಖಾಸಗಿ | ಕೃಷಿಯೇತರ / ಖುಷ್ಕಿ | 607 | ಶಾಲಿನಿ |
| 72 | 534/9 | ಖಾಸಗಿ | ಖುಷ್ಕಿ | 81 | ಯಾಧವ ಪೂಜಾರಿ |
| 73 | 543/1 | ಖಾಸಗಿ | ಖುಷ್ಕಿ | 50 | ಡಾ। ಗೀತಾಭಟ್ ಕೋಂ ಡಾ. ಗೋಪಿನಾಥ ಭಟ್ |
| 74 | 543/2 | ಖಾಸಗಿ | ಖುಷ್ಕಿ | 607 | ಶ್ರೀನಿವಾಸ ನಾಯ್ಕ್ ಬಿನ್ ರುಕ್ಮಿಣಿ, ಲಕ್ಷ್ಮೀ ಬಾಯಿ ಬಿನ್ ರುಕ್ಮಿಣಿ, ಭಾಸ್ಕರ ಬಿನ್ ಸುಂದರ ಪೂಜಾರಿ |
| 75 | 543/3 | ಖಾಸಗಿ | ಖುಷ್ಕಿ | 931 | ವಿಷ್ಣು ನಾಯ್ಕ್ ಮೋಹನ್ ನಾಯ್ಕ್,ವಿಠಲ ನಾಯ್ಕ್, ಜಗದೀಶ ನಾಯ್ಕ್, ಲೀಲಾ ಮತ್ತು ಇತರರು |
| 76 | 543/6 | ಖಾಸಗಿ | ಕೃಷಿಯೇತರ | 4047 | ಭಾಸ್ಕರ ಬಿನ್ ಸುಂದರ ಪೂಜಾರಿ |
| 77 | 543/7 | ಖಾಸಗಿ | ಖುಷ್ಕಿ | 2024 | ಗಿರಿಜಾ ಪೂಜಾರ್ತಿ |
| 78 | 561 | ಖಾಸಗಿ | ಕೃಷಿಯೇತರ | 3764 | ಆಲ್ವಿನ್ ವಾಲ್ಟರ್ ಡಿ ಸೋಜಾ ಬಿನ್ ಸಾಲ್ವದೊರ್ ಡಿ'ಸೋಜಾ |
| 79 | 562/1P | ಖಾಸಗಿ | ಖುಷ್ಕಿ | 364 | ಮಹಮ್ಮದ್ ಬಿನ್ ಇಸ್ಮಾಯಿಲ್, ಇಬ್ರಾಹಿಂ ಮತ್ತು ಇತರರು 562/1 |
| 80 | 562/2 | ಖಾಸಗಿ | ಕೃಷಿಯೇತರ | 4047 | ಹೆಚ್ ಎಮ್ ಹನೀಫ್ ಬಿನ್ ಅಬ್ದುಲ್ ಖಾದರ್ ಮತ್ತು ಇತರರು (ಹಿತಾಸಕ್ತಿದಾರರು), ಮಹಮ್ಮದ್ ಇರ್ಫಾನ್, ಜುಬೈದ, ನಿಯಾಝ್, ಐಸಮ್ಮ, ಕಮರುನ್ನೀಸಾ, ಅಬೂಬಕ್ಕರ್, ಕೆ ಹೆಚ್ ಅಬ್ದುಲ್ ರಹಿಮಾನ್, ರೈಹಾನ ಕೋಂ ಎಮ್. ಎ. ಅಬುಸಾಲಿ, ಜ್ಯೋತಿ ಎಮ್. |
| 81 | 562/3 | ಖಾಸಗಿ | ಖುಷ್ಕಿ | 404 | ಅಬೂಬಕ್ಕರ್ ಬಿನ್ ಬಾವುದ್ದೀನ್ |
| 82 | 562/4 | ಖಾಸಗಿ | ಕೃಷಿಯೇತರ | 445 | ಮುಮ್ತಾಝ್ ಕೋಂ ಅಬ್ದುಲ್ ಖಾದರ್ |
| 83 | 562/6 | ಖಾಸಗಿ | ಕೃಷಿಯೇತರ | 364 | ಅಮೀನಾ ಕೋಂ ಹೆಚ್ ಹುಸೈನ್ ಮತ್ತು ಇತರರು |
| 84 | 562/7 | ಖಾಸಗಿ | ಕೃಷಿಯೇತರ | 202 | ಅಮೀನಾ ಕೋಂ ಹೆಚ್ ಹುಸೈನ್ |
| 85 | 622/3 | ಖಾಸಗಿ | ಖುಷ್ಕಿ | 4209 | ತುಕರಾಮ ಗೌಡ |
| 86 | 628/1 | ಖಾಸಗಿ | ಖುಷ್ಕಿ | 223 | ಕೊಪ್ಪಳ ಹಂಝ ಬ್ಯಾರಿ ಬಿನ್ ಅಹಮ್ಮದ್ ಹಾಜಿ |
| 87 | 628/2 | ಖಾಸಗಿ / ಸರಕಾರ | ಖುಷ್ಕಿ | 5463 | ಸರಕಾರ, ಮೊಯಿದ್ದೀನ್ ಜುಮ್ಮಾ ಮಸ್ಜಿದ್ ಮತ್ತು ಅಲ್ ಮದರಸತುಲ್ ಖದ್ರಿಯಾ ಹಂಡೇಲು |
| 88 | 628/2 | ಖಾಸಗಿ / ಸರಕಾರ | ಖುಷ್ಕಿ | 607 | ಹೆಚ್ ಮಹಮ್ಮದ್ ಬಿನ್ ಅಹ್ಮದ್ 628/3 |
| 89 | 697/1 | ಖಾಸಗಿ | ಖುಷ್ಕಿ | 283 | ಅಹ್ಮದ್ ಬಾವಾ ಬಿನ್ ಟಿ.ಖಲಂದರ್ ಯಾನೆ ಖಲಂದರ್ ಬ್ಯಾರಿ |
| 90 | 697/1 | ಖಾಸಗಿ | ಖುಷ್ಕಿ | 445 | ಹಸನಬ್ಬ 697/3 |
| 91 | 697/2 | ಖಾಸಗಿ | ಕೃಷಿಯೇತರ | 1012 | ಅಬೂಬಕ್ಕರ್ ಸಿದ್ದಿಕ್ ಬಿನ್ ಅಬ್ಬಾಸ್ ಬ್ಯಾರಿ |
| 92 | 8/16 | ಖಾಸಗಿ | ತರಿ | 1416 | ಜಗದೀಶ ಶೆಟ್ಟಿ ಬಿನ್ ದೊಡ್ಡಯ್ಯ ಶೆಟ್ಟಿ, ಅಶೋಕ ಬಿನ್ ದೊಡ್ಡಯ್ಯ ಶೆಟ್ಟಿ, ಮತ್ತು ಇತರರು, 8/26 |
| | ಒಟ್ಟು | | | 121206.94 | |

[F. No. 13011/1/2013/PIU-Mangalore/Shimoga-Mangalore Section/3D]
**RAJESH GUPTA, Director**

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್: editpage@prajavani.co.in



# ಅಭಿಮತ



## ಸುಭಾಷಿತ

ಅಹಂಕಾರವು ಅಸಂಬದ್ಧ, ಅವಿಧೇಯ, ಅಶಿಸ್ತು, ಒರಟುತನ, ಕಠಿಣವಾದ ನಡೆ ಮತ್ತು ಸ್ವಸಮರ್ಥನೆಯ ಸ್ವಭಾವಗಳ ಮಿಶ್ರಣವಾಗಿರುತ್ತದೆ.

–ಶಿವಾನಂದ ಸರಸ್ವತಿ

## ಕಮಿಷನ್ ಆರೋಪ: ಮರೆಮಾಚಲು ಆಗದು, ತನಿಖೆಗೆ ಆದೇಶಿಸಲೇಬೇಕು

**ರಾಜ್ಯದಲ್ಲಿ** ಕಾಮಗಾರಿಗಳ ಗುತ್ತಿಗೆಯ ಬಿಲ್ ಪಡೆಯಲು ಶೇಕಡ 40ರಷ್ಟು ಕಮಿಷನ್ ನೀಡಬೇಕು ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘವು ಆರೋಪಿಸಿತು. ಇದಾಗಿ ಒಂದು ವರ್ಷ ಕಳೆದಿದ್ದರೂ ಈ ಆರೋಪದ ಬಗ್ಗೆ ತನಿಖೆ ನಡೆದಿಲ್ಲ ಎಂಬುದು ಒಪ್ಪಬಹುದಾದ ವಿಚಾರ ಅಲ್ಲ. ರಾಜ್ಯದಲ್ಲಿ ಗುತ್ತಿಗೆದಾರರು ಕಾಮಗಾರಿ ಗುತ್ತಿಗೆ ಮೊತ್ತದ ಶೇ 40ರವರೆಗಿನ ಮೊತ್ತವನ್ನು ಕಮಿಷನ್ ರೂಪದಲ್ಲಿ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ನೀಡಬೇಕು, ಇಲ್ಲದಿದ್ದರೆ ಗುತ್ತಿಗೆದಾರರಿಗೆ ಹಣ ಪಾವತಿ ಆಗುವುದಿಲ್ಲ ಎಂದು ಸಂಘವು ಹಿಂದಿನ ವರ್ಷದ ಜುಲೈನಲ್ಲಿ ಆರೋಪಿಸಿತ್ತು. ಕಮಿಷನ್ ಎಂಬ ಪದವನ್ನು ಸರಳವಾಗಿ 'ಲಂಚ' ಎನ್ನಬಹುದು. ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗಲೇ ಸಂಘವು ಮೊದಲಿಗೆ ತನ್ನ ದೂರನ್ನು ಪ್ರಧಾನಿ ಕಚೇರಿಗೆ ಸಲ್ಲಿಸಿತ್ತು. ಆ ಬಳಿಕ ಮುಖ್ಯಮಂತ್ರಿಯಾದ ಬಸವರಾಜ ಬೊಮ್ಮಾಯಿ ಅವರಲ್ಲಿಗೆ ದೂರನ್ನು ಒಯ್ದಿತ್ತು. ನಂತರ, ಪ್ರಧಾನಿ ನರೇಂದ್ರ ಮೋದಿ ಅವರಿಗೂ ಪತ್ರ ಬರೆದು ಮಧ್ಯಪ್ರವೇಶ ಮಾಡುವಂತೆ ಆಗ್ರಹಿಸಿತ್ತು. ಸರಿಸುಮಾರು ಒಂದು ವರ್ಷದವರೆಗೆ ಈ ವಿಚಾರವಾಗಿ ಮೌನ ವಹಿಸಿದ ಪ್ರಧಾನಿ ಮೋದಿ ಅವರು, ನಂತರ ಅಸ್ಪಷ್ಟವಾಗಿ ಪ್ರತಿಕ್ರಿಯಿಸಿದರು. ಮುಖ್ಯಮಂತ್ರಿ ಬೊಮ್ಮಾಯಿ ಅವರು ಗುತ್ತಿಗೆಗಳ ಟೆಂಡರ್ ಪ್ರಕ್ರಿಯೆಯನ್ನು ಇನ್ನಷ್ಟು ಪಾರದರ್ಶಕ ಆಗಿಸಲು ಕೆಲವು ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿದರು. ಆದರೆ ವಾಸ್ತವದಲ್ಲಿ ಯಾವ ಬದಲಾವಣೆಯೂ ಜಾರಿಗೆ ಬಂದಿಲ್ಲ ಎಂದು ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರು ಆರೋಪಿಸಿದ್ದಾರೆ. ಒಟ್ಟು ₹ 22 ಸಾವಿರ ಕೋಟಿ ಮೊತ್ತದ ಬಿಲ್ ಪಾವತಿಗಳನ್ನು ಈಗಲೂ ತಡೆಹಿಡಿಯಲಾಗಿದೆ ಎಂದು ಕೂಡ ಅವರು ಹೇಳಿದ್ದಾರೆ. ಈ ಪ್ರಕರಣದಲ್ಲಿ ಸಂಘವು ಇದೇ ಮೊದಲ ಬಾರಿಗೆ, ಗುತ್ತಿಗೆದಾರರಿಗೆ ಲಂಚಕ್ಕಾಗಿ ಕಿರುಕುಳ ನೀಡುತ್ತಿದ್ದಾರೆ ಎಂದು ಸಚಿವರೊಬ್ಬರ ಮೇಲೆ ಬೊಟ್ಟು ಮಾಡಿದೆ. ಬೊಮ್ಮಾಯಿ ಅವರು ಈ ಪ್ರಕರಣದ ಬಗ್ಗೆ ತನಿಖೆಗೆ ಈ ವೇಳೆಗೆ ಆದೇಶ ಹೊರಡಿಸಿ, ಪ್ರಕರಣದ ಆಳಕ್ಕೆ ಇಳಿಯುವ ಕೆಲಸ ಮಾಡಬೇಕಿತ್ತು. ಆದರೆ ಅವರು ಗುತ್ತಿಗೆದಾರರ ಕಡೆಯಿಂದ ದಾಖಲೆಗಳು ಬೇಕು, ಆಧಾರ ಬೇಕು ಎಂದು ಕೇಳುತ್ತಿದ್ದಾರೆ. ಆರೋಪಕ್ಕೆ ಗುರಿಯಾಗಿರುವ ಸಚಿವ ಮುನಿರತ್ನ ಅವರು ಮಾನನಷ್ಟ ಮೊಕದ್ದಮೆ ದಾಖಲಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಇಂತಹ ಪ್ರತಿಕ್ರಿಯೆಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಲಂಚಕ್ಕೆ ಬೇಡಿಕೆ ಇರಿಸುವ ಯಾವುದೇ ವ್ಯಕ್ತಿ ಅದನ್ನು ಮುಕ್ತವಾಗಿ ಮಾಡುವುದಿಲ್ಲ, ಲಂಚ ಕೇಳಿದ್ದಕ್ಕೆ ದಾಖಲೆಗಳನ್ನು ಉಳಿಸಿರುವುದಿಲ್ಲ ಕೂಡ. ಲಂಚ ಪಡೆದುಕೊಂಡಿದ್ದಕ್ಕೆ ರಸೀದಿ ನೀಡುವುದಿಲ್ಲ. ಗುತ್ತಿಗೆದಾರರ ಸಂಘವು ಮಾಡಿರುವ ಆರೋಪಗಳು ನಿಜವೋ ಅಲ್ಲವೋ ಎಂಬುದನ್ನು ವಿಸ್ತೃತ ತನಿಖೆಯ ಮೂಲಕ ಮಾತ್ರವೇ ಕಂಡುಕೊಳ್ಳಬಹುದು, ಆ ತನಿಖೆಯು ಹಣದ ಹರಿವು ಹೇಗಾಗಿದೆ ಎಂಬುದರ ಪರಿಶೀಲನೆ ನಡೆಸಬೇಕಾಗುತ್ತದೆ. ಸಂಘವು ಆರೋಪ ಮಾಡಿ ಒಂದು ವರ್ಷ ಕಳೆದಿದ್ದರೂ ಸರ್ಕಾರವು ತನಿಖೆಗೆ ಮುಂದಾಗುತ್ತಿಲ್ಲದಿರುವುದನ್ನು ಗಮನಿಸಿದರೆ, ಸತ್ಯವು ಹೊರ ಬರುವುದು ಅದಕ್ಕೆ ಬೇಕಾಗಿಲ್ಲ ಎಂದು ಅನ್ನಿಸುತ್ತಿದೆ.



ಸರ್ಕಾರದಲ್ಲಿನ ವ್ಯಾಪಕ ಭ್ರಷ್ಟಾಚಾರದ ಬಗ್ಗೆ ದೂರು ಇರುವುದು ಗುತ್ತಿಗೆದಾರರಲ್ಲಿ ಮಾತ್ರವೇ ಅಲ್ಲ, ಸರ್ಕಾರ ಅನುದಾನ ಬಿಡುಗಡೆ ಮಾಡುವ ಹಲವು ಸಂಸ್ಥೆಗಳಿಂದಲೂ ಇಂತಹ ಆರೋಪಗಳು ಕೇಳಿಬಂದಿರುವುದು ಗಮನಾರ್ಹ

ಕೆಂಪಣ್ಣ ಅವರು ಹಿಂದಿನ ವಾರ ಆರೋಪವನ್ನು ಪುನರುಚ್ಚರಿಸುವ ಮೊದಲು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದರು, ಹೀಗಾಗಿ ಇಡೀ ಪ್ರಕರಣವು ಈಗ ಕಾಂಗ್ರೆಸ್‌ಪ್ರೇರಿತ ಆಗಿದೆ ಎಂದು ಮುಖ್ಯಮಂತ್ರಿ ಹೇಳುವುದು ವಿವೇಕದ ಮಾತಲ್ಲ. ಇದು, ಪ್ರಕರಣದ ವಿಚಾರವಾಗಿ ಯಾವುದೇ ತನಿಖೆ ಸಾಧ್ಯವಿಲ್ಲ ಎನ್ನುವಂಥ ಯತ್ನ. ಸಂಘವು ಮೊದಲಿಗೆ ಪ್ರಧಾನಿ ಹಾಗೂ ಬೊಮ್ಮಾಯಿ ಅವರಲ್ಲಿ ತನ್ನ ದೂರನ್ನು ಒಯ್ದಿತ್ತು. ಆದರೆ ಆ ದೂರಿನ ಆಧಾರದಲ್ಲಿ ಇಬ್ಬರೂ ಯಾವುದೇ ಕ್ರಮ ಕೈಗೊಳ್ಳದೆ ಇದ್ದಾಗ ಸಂಘವು ವಿರೋಧ ಪಕ್ಷದ ಮೊರೆ ಹೋದಂತೆ ಕಾಣುತ್ತಿದೆ. ಸಂಘವು ಆರೋಪ ಹೊರಿಸಿರುವ ಸಚಿವರನ್ನು ಪಾರುಮಾಡಲು ಯತ್ನಿಸುವುದು ಕೂಡ ಬಿಜೆಪಿಗೆ ಶೋಭೆ ತರುವುದಿಲ್ಲ. ವಾಸ್ತವದಲ್ಲಿ ಈ ಸಚಿವರು ಕಾಂಗ್ರೆಸ್ಸಿನಲ್ಲಿ ಇದ್ದಾಗ 'ಅವರು ಭ್ರಷ್ಟ' ಎಂದು ಬಿಜೆಪಿಯೇ ದೂರಿತ್ತು. ಅವರು ಬಿಜೆಪಿ ಸೇರಿದ ತಕ್ಷಣ ಪರಿಶುದ್ಧರಾದರೇ? ಗುತ್ತಿಗೆದಾರರು ಲೋಕಾಯುಕ್ತದ ಮೊರೆ ಹೋಗಬಹುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಆದರೆ ಇಲ್ಲಿ ಆರೋಪ ಇರುವುದು ಇಡೀ ಸರ್ಕಾರ ಹಾಗೂ ಸಚಿವರ ಮೇಲೆ. ತನಿಖೆಗೆ ಆದೇಶಿಸಿ, ತಮ್ಮದೇ ನೇತೃತ್ವದ ಸರ್ಕಾರದ ಮೇಲಿನ ಆರೋಪದ ಸತ್ಯಾಸತ್ಯತೆಯನ್ನು ಜಾಹೀರುಪಡಿಸಬೇಕಿರುವುದು ಅವರ ಕರ್ತವ್ಯ.

ಸರ್ಕಾರದ ಗುತ್ತಿಗೆಗಳನ್ನು ನೀಡುವಲ್ಲಿ ಭ್ರಷ್ಟಾಚಾರ ಇದೆ, ಲಂಚಗುಳಿತನ ಇದೆ ಎಂಬುದು ಹಲವರಿಗೆ ಗೊತ್ತಿರುವ ಸಂಗತಿ. ಭ್ರಷ್ಟಾಚಾರಕ್ಕೆ ಅಸ್ತದವೇ ಇಲ್ಲ ಎಂದು ಅರೆಕ್ಷಣ ಭಾವಿಸುವುದಾದರೆ, ನಮ್ಮ ರಸ್ತೆಗಳು ದಶಕಗಳಿಂದ ಇರುವ ಕೆಟ್ಟ ಸ್ಥಿತಿಯಲ್ಲಿ ಇರುತ್ತಿದ್ದವೇ? ನಗರದ ತ್ಯಾಜ್ಯ ಸಂಗ್ರಹ ಹಾಗೂ ವಿಲೇವಾರಿ ಇಷ್ಟು ನಿಷ್ಕ್ರಿಯವಾಗಿರುತ್ತಿತ್ತೇ? ಈ ವೇಳೆಗೆ ನಗರಗಳಲ್ಲಿ ಒಳ್ಳೆಯ ವಾಹನ ನಿಲುಗಡೆ ವ್ಯವಸ್ಥೆ ಇಲ್ಲವಾಗಿರುತ್ತಿತ್ತೇ? ಲಂಚವಾಗಿ ಪಡೆಯುವ ಹಣವನ್ನು ಅಧಿಕಾರಿಶಾಹಿ ವ್ಯವಸ್ಥೆಯಲ್ಲಿ ಹಾಗೂ ರಾಜಕಾರಣಿಗಳ ನಡುವೆ ಹಂಚಿಕೊಳ್ಳುವ ಸಾಂಸ್ಥಿಕ ವ್ಯವಸ್ಥೆಯೊಂದು ಇದೆ ಎಂಬುದೂ ಬಹುತೇಕರಿಗೆ ಗೊತ್ತಿದೆ. ಈ ರೀತಿ ಲಂಚದ ಹಣ ಹಂಚಿಕೊಳ್ಳುವುದನ್ನು ದಶಕಗಳಿಂದ ಕರಗತ ಮಾಡಿಕೊಳ್ಳಲಾಗಿದೆ. ಗುತ್ತಿಗೆದಾರರು ಈ ವ್ಯವಸ್ಥೆಯಲ್ಲಿ ಸ್ವಇಚ್ಛೆಯಿಂದ ಪಾಲುದಾರರೂ ಆಗಿದ್ದರು. ಲಂಚಕ್ಕಾಗಿನ ಬೇಡಿಕೆಯು ನಿಭಾಯಿಸುವ ಮಟ್ಟದಲ್ಲಿ ಇದ್ದಷ್ಟು ಕಾಲ, ತಮ್ಮನ್ನು ದಶಕಗಳಿಂದ ಬೆಳೆಸಿದ್ದ ಈ ವ್ಯವಸ್ಥೆಯನ್ನು ಇಲ್ಲವಾಗಿಸುವ ಬಯಕೆ ಅವರಿಗೂ ಇರಲಿಲ್ಲ ಎಂಬಂತೆ ಕಾಣುತ್ತದೆ. ವ್ಯವಸ್ಥೆಯು ತೀರಾ ದುರಾಸೆಗೆ ತಿರುಗದೆ ಇದ್ದಿದ್ದರೆ, ಗುತ್ತಿಗೆದಾರರ ವಹಿವಾಟಿನ ಜೀವ ಹಿಂಡುವ ಸ್ಥಿತಿಗೆ ತಲುಪದೆ ಇದ್ದಿದ್ದರೆ ಅವರು ದೂರು ಹೇಳುವ ಮಟ್ಟಕ್ಕೆ ಬಹುಶಃ ಬರುತ್ತಿರಲಿಲ್ಲವೇನೋ.

ಸರ್ಕಾರದಲ್ಲಿನ ವ್ಯಾಪಕ ಭ್ರಷ್ಟಾಚಾರದ ಬಗ್ಗೆ ದೂರು ಇರುವುದು ಗುತ್ತಿಗೆದಾರರಲ್ಲಿ ಮಾತ್ರವೇ ಅಲ್ಲ ಎಂಬುದನ್ನು ಗಮನಿಸಬೇಕು. ಸರ್ಕಾರವು ಅನುದಾನ ಬಿಡುಗಡೆ ಮಾಡುವ ಹಲವು ಸಂಸ್ಥೆಗಳಿಂದಲೂ ಇಂತಹ ಆರೋಪಗಳು ಕೇಳಿಬಂದಿವೆ. ಅಂದರೆ, ಅನುದಾನದ ಒಟ್ಟು ಮೊತ್ತದಲ್ಲಿ ಶೇಕಡ 30ರಿಂದ ಶೇ 40ರವರೆಗೆ ಕಡಿತಕ್ಕೆ ಒಪ್ಪಿಗೆ ನೀಡದಿದ್ದರೆ ಅನುದಾನದ ಮೊತ್ತ ಬಿಡುಗಡೆ ಆಗುವುದೇ ಇಲ್ಲ ಎಂಬ ಆರೋಪಗಳು ಇವೆ. ಸಹಾಯಕ ಪ್ರಾಧ್ಯಾಪಕರು ಹಾಗೂ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್‌ಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಬಂದಾಗ ಸರ್ಕಾರವು ಆರಂಭದಲ್ಲಿ ಅದನ್ನು ಅಲ್ಲಗಳೆಯಿತು, ತನಿಖೆಗೆ ಆದೇಶಿಸುವುದನ್ನು ಸಾಧ್ಯವಾದಷ್ಟು ಕಾಲ ವಿಳಂಬ ಮಾಡಿತು. ನಂತರ ಹೆಜ್ಜೆ ಹಿಂದೆ ಸರಿಸಿ, ಒಲ್ಲದ ಮನಸ್ಸಿನಿಂದ ತನಿಖೆಗೆ ಆದೇಶಿಸಿತು. ಈಗ ಬೊಮ್ಮಾಯಿ ನೇತೃತ್ವದ ಸರ್ಕಾರದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು 13 ಸಾವಿರಕ್ಕೂ ಹೆಚ್ಚಿನ ಶಾಲೆಗಳ ಆಡಳಿತ ಮಂಡಳಿಗಳನ್ನು ಪ್ರತಿನಿಧಿಸುವ ಸಂಘಟನೆಯು ಪ್ರಧಾನಿಯವರಿಗೆ ದೂರು ನೀಡಿದೆ.

ಇವನ್ನೆಲ್ಲ ಉಪೇಕ್ಷೆ ಮಾಡುವ ಸರ್ಕಾರವು ಯಾವುದನ್ನು ಇನ್ನು ಮುಂದೆ ಮುಚ್ಚಿಡಲು ಸಾಧ್ಯ ಇಲ್ಲವೋ ಅದನ್ನು ಮುಚ್ಚಿಡಲು ಯತ್ನಿಸುತ್ತಿದೆ. ಹೀಗೆ ಮಾಡುವ ಮೂಲಕ ಬೊಮ್ಮಾಯಿ ಅವರು ತಾವು ಮುಖ್ಯಮಂತ್ರಿ ಆಗಿರುವ ಅವಧಿಯಲ್ಲಿ ನಡೆದಿರುವ ಭ್ರಷ್ಟಾಚಾರಗಳನ್ನು ಮರೆಮಾಚಬಹುದು. ಅಲ್ಲದೆ, ತಮ್ಮ ಹಿಂದಿನ ಅವಧಿಯಲ್ಲಿನ ಭ್ರಷ್ಟಾಚಾರವನ್ನೂ ಮರೆಮಾಚಬಹುದು. ಈ ಮೂಲಕ ಅವರು ಭ್ರಷ್ಟಾಚಾರ ಹಾಗೂ ಅದನ್ನು ಪೋಷಿಸುವ ಈ ವ್ಯವಸ್ಥೆಯನ್ನು ಮುಂದೊಂದು ದಿನ ಕೊನೆಗೊಳಿಸುವ ಯಾವುದೇ ಪ್ರಯತ್ನವನ್ನು ಮುಗಿಸಿಹಾಕುತ್ತಿರಬಹುದು. ಆದರೆ, ಈ ರೀತಿ ಮಾಡದೆ ಆರೋಪಗಳ ಬಗ್ಗೆ ಸಿಬಿಐ, ಇ.ಡಿ., ಐ.ಟಿ. ಜಂಟಿ ತನಿಖೆಗೆ ಅವರು ಆದೇಶ ಮಾಡಿದರೆ ಅದು ದೇಶಕ್ಕೆ ಹಾಗೂ ರಾಜ್ಯಕ್ಕೆ ಮಾಡುವ ದೊಡ್ಡ ಸೇವೆ ಆಗುತ್ತದೆ.

ಪ್ರಧಾನಿ ಮೋದಿ ಅವರು ಆಗಸ್ಟ್ 15ರಂದು ಕೆಂಪುಕೋಟೆಯಲ್ಲಿ ನಿಂತು ಭ್ರಷ್ಟಾಚಾರದ ವಿರುದ್ಧ ಸಮರ ಸಾರಿದರು. ಆದರೆ ಇದುವರೆಗೆ ನಾವು ಕಂಡಿರುವ ವಿದ್ಯಮಾನಗಳು ಅವರ ಮಾತುಗಳಲ್ಲಿ ಭರವಸೆ ಮೂಡಿಸುವಂತೆ ಇಲ್ಲ. ಇ.ಡಿ., ಸಿಬಿಐ, ಐ.ಟಿ.ಯಂತಹ ಕೇಂದ್ರೀಯ ತನಿಖಾ ಸಂಸ್ಥೆಗಳು ವಿರೋಧ ಪಕ್ಷಗಳ ನಾಯಕರ ವಿರುದ್ಧ ಬಹಳ ಮುಕ್ತವಾಗಿ ತನಿಖೆ ನಡೆಸುತ್ತವೆ, ಕೆಲವೊಮ್ಮೆ ಆಧಾರವೇ ಇಲ್ಲದಿದ್ದರೂ ತನಿಖೆ ನಡೆಸುತ್ತವೆ, ಯಾವುದಾದರೂ ಒಂದು ಕಳಂಕವನ್ನು ಹುಡುಕುವ ದುರುದ್ದೇಶದಿಂದ ತನಿಖೆ ನಡೆಸುತ್ತವೆ. ಆದರೆ ಪ್ರಧಾನಿಯವರು ಕರ್ನಾಟಕದ ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಕೇಳಿಬಂದಿರುವ ಗಂಭೀರ ಭ್ರಷ್ಟಾಚಾರದ ಆರೋಪದ ಬಗ್ಗೆ ತನಿಖೆಗೆ ಆದೇಶಿಸಿಲ್ಲ. ಇದು ರವಾನೆ ಮಾಡುವ ಸಂದೇಶ ಒಂದೇ. ಭ್ರಷ್ಟಾಚಾರವನ್ನು ನಿರ್ಮೂಲಗೊಳಿಸುವುದಾಗಿ ಮತ್ತೆ ಮತ್ತೆ ಮಾಡುವ ಘೋಷಣೆಗಳು ದೊಡ್ಡ ದನಿಯ ಮಾತುಗಳು ಮಾತ್ರ. ಅದರ ಹಿಂದೆ ಇರುವ ನಿಜವಾದ ಗುರಿ ತಮ್ಮ ನೇತೃತ್ವದ ಸರ್ಕಾರ ಹಾಗೂ ಪಕ್ಷಕ್ಕೆ ವ್ಯಕ್ತವಾಗುವ ಎಲ್ಲ ಟೀಕೆಗಳನ್ನು, ರಾಜಕೀಯ ವಿರೋಧಗಳನ್ನು ನಿರ್ಮೂಲಗೊಳಿಸುವುದು.

### 25 ವರ್ಷಗಳ ಹಿಂದೆ — ಶನಿವಾರ, 30-8-1997

**• 70 ಪೆಟ್ರೋಲ್ ಬಂಕ್ ಏಜೆನ್ಸಿಗಳ ರದ್ದು**

**ನವದೆಹಲಿ, ಆ. 29 (ಪಿಟಿಐ)**– ಕ್ಯಾಪ್ಟನ್ ಸತೀಶ್ ಶರ್ಮಾ ಅವರು ಕೇಂದ್ರದ ಪೆಟ್ರೋಲಿಯಂ ಸಚಿವರಾಗಿದ್ದಾಗ ವಿವೇಚನಾ ಕೋಟಾದ ಅಡಿಯಲ್ಲಿ ವಿತರಿಸಿದ 70 ಪೆಟ್ರೋಲ್ ಪಂಪ್, ಅಡುಗೆ ಅನಿಲ ಮತ್ತು ಸೀಮೆಎಣ್ಣೆ ಏಜೆನ್ಸಿಗಳನ್ನು ದೆಹಲಿ ಹೈಕೋರ್ಟ್ ಇಂದು ರದ್ದುಪಡಿಸಿತು.

ಇದರಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಸೊಸೆ ಟಿ.ಎಸ್. ಅನಿತಾ, ಕಾನೂನು ಕಾರ್ಯದರ್ಶಿ ವಿ.ಕೆ. ಅಗರವಾಲ್ ಅವರ ಪತ್ನಿ ಉಷಾ ಅವರಿಗೆ ನೀಡಿದ ಏಜೆನ್ಸಿಗಳೂ ಸೇರಿವೆ.

'ದೇವೇಗೌಡರ ಸೊಸೆ ಎಂಬ ಕಾರಣಕ್ಕಾಗಿಯೇ ಅನಿತಾ ಅವರಿಗೆ ಪೆಟ್ರೋಲ್ ಬಂಕ್ ಮಂಜೂರು ಮಾಡಲಾಗಿದೆ. ಅವರು ನಿರುದ್ಯೋಗಿ ಎಂಜಿನಿಯರ್ ಎಂಬ ಕಾರಣಕ್ಕೆ ನೀಡಿಲ್ಲ' ಎಂದು ಹೈಕೋರ್ಟ್ ಹೇಳಿದೆ.


### 50 ವರ್ಷಗಳ ಹಿಂದೆ — ಬುಧವಾರ, 30-8-1972

**• ಸೆ. 15ರ ವೇಳೆಗೆ ಉಭಯ ಸೇನಾ ಪಡೆಗಳ ವಾಪಸಾತಿ**

**ನವದೆಹಲಿ, ಆ. 29**– ಸುಭದ್ರ ಶಾಂತಿ ಸ್ಥಾಪನೆಗಾಗಿ ಸಿಮ್ಲಾ ಒಪ್ಪಂದವನ್ನು ಅಕ್ಷರಶಃ ಹಾಗೂ ಮನಸಾ ಕಾರ್ಯಗತಗೊಳಿಸುವ ತಮ್ಮ ಸಂಕಲ್ಪವನ್ನು ಭಾರತ ಮತ್ತು ಪಾಕಿಸ್ತಾನಗಳು ಇಂದು ಪುನರುಚ್ಚರಿಸಿವೆ. ಒಪ್ಪಂದದ ಅನುಷ್ಠಾನಗೊಳ್ಳುವಂತೆ ಮಾಡಲು ಅಧಿಕಾರಿಗಳು ಮಾತುಕತೆ ನಡೆಸಿದ ಬಳಿಕ ನೀಡಿರುವ ಹೇಳಿಕೆಯಲ್ಲಿ ಈ ಸಂಕಲ್ಪ ವ್ಯಕ್ತವಾಗಿದೆ.

ರಿಷಿ, ಲಿಜ್ ಇಬ್ಬರಲ್ಲಿ ಯಾರೇ ಪ್ರಧಾನಿಯಾದರೂ ಬ್ರಿಟನ್– ಭಾರತದ ಸಂಬಂಧ ಬದಲಾಗದು

## ಬ್ರಿಟನ್: ಬ್ರೆಕ್ಸಿಟ್, ಬೋರಿಸ್, ಮುಂದೇನು?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

**ಬ್ರಿಟನ್,** ಸಮಸ್ಯೆಗಳ ಸುಳಿಯಿಂದ ಎದ್ದುಬರಲು ಹೆಣಗಾಡುತ್ತಿದೆ. ಆರು ವರ್ಷಗಳ ಹಿಂದೆ ಡೇವಿಡ್ ಕ್ಯಾಮರೂನ್ ಅವರು ಬ್ರಿಟನ್ ಪ್ರಧಾನಿಯಾಗಿದ್ದ ಅವಧಿಯಲ್ಲಿ ಅಲ್ಲಿನ ಅರ್ಧದಷ್ಟು ಜನ ತಮ್ಮ ಸಮಸ್ಯೆಗಳಿಗೆ ಮೂಲ ಕಾರಣ ತಾವು ಐರೋಪ್ಯ ಒಕ್ಕೂಟದ ಭಾಗವಾಗಿರುವುದು ಎಂದು ವಾದಿಸುತ್ತಿದ್ದರು. 'ಒಕ್ಕೂಟದ ಭಾಗವಾಗಿರುವುದೇ ಕ್ಷೇಮ' ಎಂಬ ನಿಲುವು ತಳೆದಿದ್ದ ಕ್ಯಾಮರೂನ್ ತಮ್ಮ ಸ್ಥಾನವನ್ನು ತ್ಯಜಿಸಬೇಕಾಯಿತು. ನಂತರ ಬ್ರೆಕ್ಸಿಟ್ ಪರ ವಕಾಲತ್ತು ವಹಿಸಿದ್ದ ಥೆರೇಸಾ ಮೇ ಆ ಜಾಗಕ್ಕೆ ಬಂದರು. ಆದರೆ ಸಂಸತ್ತಿನಲ್ಲಿ ಬಹುಮತವಿರದ ಕಾರಣ ಬ್ರೆಕ್ಸಿಟ್ ಕರಾರಿಗೆ ಸಂಸತ್ತಿನ ಮನವೊಲಿಸಲು ಸೋತು ಅಧಿಕಾರ ತ್ಯಜಿಸಿದರು. ಬ್ರೆಕ್ಸಿಟ್ ಪರ ದೊಡ್ಡದೊಂದು ಅಲೆ ಎದ್ದಾಗ, ಅದನ್ನು ಏರಿ ಕುಳಿತ ಬೋರಿಸ್ ಜಾನ್ಸನ್ ಬ್ರಿಟನ್ ಪ್ರಧಾನಿಯಾದರು.

ಬೋರಿಸ್ ಜಾನ್ಸನ್ ಅವರು ಬ್ರಿಟನ್ ಪ್ರಧಾನಿಯಾದಾಗ ಅವರನ್ನು ಅಮೆರಿಕದ ಅಧ್ಯಕ್ಷರಾಗಿದ್ದ ಡೊನಾಲ್ಡ್ ಟ್ರಂಪ್ ಅವರಿಗೆ ಹೋಲಿಸಲಾಗಿತ್ತು. ಟ್ರಂಪ್ ಅವರು ಮೆಕ್ಸಿಕೊ ಗೋಡೆ ಕುರಿತು ಮಾತನಾಡುತ್ತಿದ್ದ ಮಾದರಿಯಲ್ಲೇ ಬ್ರೆಕ್ಸಿಟ್ ಕುರಿತು ಬೋರಿಸ್ ಮಾತನಾಡುತ್ತಿದ್ದರು. ಬೋರಿಸ್ ಅವರ ಅವಕಾಶವಾದಿ ವ್ಯಕ್ತಿತ್ವದ ಬಗ್ಗೆ ಒಂದು ಕತೆ ಇದೆ. ಬ್ರೆಕ್ಸಿಟ್ ವಿಷಯದಲ್ಲಿ ಅವರಿಗೆ ಒಂದು ನಿಖರ ನಿಲುವು ಇರಲಿಲ್ಲವಂತೆ. ಐರೋಪ್ಯ ಒಕ್ಕೂಟದಲ್ಲಿ ಉಳಿಯಬೇಕು ಎಂದು ಪ್ರತಿಪಾದಿಸುವ ಒಂದು ಭಾಷಣವನ್ನು, ಬ್ರೆಕ್ಸಿಟ್ ಅನಿವಾರ್ಯ ಏಕೆ ಎಂದು ಮತ್ತೊಂದು ಭಾಷಣವನ್ನು ಬೋರಿಸ್ ಸಿದ್ಧಪಡಿಸಿಕೊಂಡಿದ್ದರಂತೆ. ಯಾವಾಗ ಅಂದಿನ ಪ್ರಧಾನಿ ಕ್ಯಾಮರೂನ್ ಅವರು ಒಕ್ಕೂಟದಲ್ಲೇ ಉಳಿಯುವ ನಿಲುವು ತಳೆದರೋ, ಪಕ್ಷ ಮತ್ತು ದೇಶವನ್ನು ಮುನ್ನಡೆಸುವ ಸಮಯ ಇದೀಗ ತನ್ನದು ಎಂದು ಬ್ರೆಕ್ಸಿಟ್ ಪರ ಸಿದ್ಧಮಾಡಿಕೊಂಡಿದ್ದ ಭಾಷಣ ಹಿಡಿದು ಜಾನ್ಸನ್ ಮುಖ್ಯಭೂಮಿಕೆಗೆ ಬಂದರಂತೆ.

2019ರ ಸಾರ್ವತ್ರಿಕ ಚುನಾವಣೆಯಲ್ಲಿ ಬೋರಿಸ್ ಜಾನ್ಸನ್ ಸ್ಪಷ್ಟಬಹುಮತದೊಂದಿಗೆ ಪ್ರಧಾನಿಯಾದ ಕಾರಣ, ಬ್ರೆಕ್ಸಿಟ್ ಕರಾರಿಗೆ ಸಂಸತ್ತಿನ ಒಪ್ಪಿಗೆ ಪಡೆಯುವುದು ಕಷ್ಟವಾಗಲಿಲ್ಲ. ಬ್ರೆಕ್ಸಿಟ್ ಪರ ಜನರ ಮನವೊಲಿಸುವಾಗ ಬೋರಿಸ್ ಅವರು ಜನರಲ್ಲಿ ಆಶಾವಾದ ತುಂಬಿದ್ದರು. ಐರೋಪ್ಯ ಒಕ್ಕೂಟದಿಂದ ಹೊರಬಂದರೆ ವಾಣಿಜ್ಯಿಕ ಚಟುವಟಿಕೆಗಳಲ್ಲಿ ಚುರುಕುತನ ತರಬಹುದು, ಆರ್ಥಿಕವಾಗಿ ಶಕ್ತರಾಗಬಹುದು, ಗತ ವೈಭವಕ್ಕೆ ಮರಳಬಹುದು ಎಂದು ಜನರನ್ನು ಹುರಿದುಂಬಿಸಿದ್ದರು. ಆದರೆ ವರುಷ ಕಳೆದರೂ ಬ್ರೆಕ್ಸಿಟ್‌ನಿಂದ ಆದ ಲಾಭ ಪೂರ್ಣಪ್ರಮಾಣದಲ್ಲಿ ಗೋಚರಿಸಲಿಲ್ಲ. ಜೊತೆಗೆ ಅದೇ ವೇಳೆಗೆ ಕೊರೊನಾ ಸೋಂಕು ಜಗತ್ತನ್ನು ಆವರಿಸಿಕೊಂಡಿತು. ಬ್ರಿಟನ್ ಆರ್ಥಿಕವಾಗಿ ಮತ್ತಷ್ಟು ಜರ್ಜರಿತಗೊಂಡಿತು.

ಬ್ರೆಕ್ಸಿಟ್ ಭರವಸೆ ಹುಸಿಗೊಳ್ಳುತ್ತಿದ್ದ ಹಂತದಲ್ಲೇ ಬೋರಿಸ್ ಅವರನ್ನು ಪೇಚಿಗೆ ಸಿಲುಕಿಸುವ ಬೆಳವಣಿಗೆಗಳು ನಡೆದವು. ಕೊರೊನಾದ ಲಾಕ್‌ಡೌನ್ ಅವಧಿಯಲ್ಲಿ ಬೋರಿಸ್ ತಮ್ಮ ಸಿಬ್ಬಂದಿಯ ಜೊತೆ ಮೋಜಿನ ಕೂಟ ನಡೆಸಿದ್ದರು. ಇಂಗ್ಲೆಂಡಿನ ಜನಸಾಮಾನ್ಯರು ಸಂಕಷ್ಟದಲ್ಲಿದ್ದಾಗ, ತಾವೇ ರೂಪಿಸಿದ ನಿಯಮಗಳನ್ನು ಗಾಳಿಗೆ ತೂರಿ ಮೋಜುಕೂಟದಲ್ಲಿ ಪ್ರಧಾನಿ ಭಾಗಿಯಾಗಿದ್ದರು ಎಂಬ ಸುದ್ದಿ ಹೊರಬಿತ್ತು. ಕನ್ಸರ್ವೇಟಿವ್ (ಟೋರಿ) ಪಕ್ಷದಲ್ಲಿ ಭಿನ್ನಸ್ವರ ಎದ್ದಿತು. ನಂತರ ಸರ್ಕಾರದ ಉಪಮುಖ್ಯ ಸಚೇತಕ ಕ್ರಿಸ್ ಪಿಂಚರ್ ಕುರಿತ ಹಗರಣ ಬೆಳಕಿಗೆ ಬಂದಾಗ, ಟೋರಿ ಪಕ್ಷವು ಬೋರಿಸ್ ವಿರುದ್ಧ ಬಹಿರಂಗವಾಗಿ ಅಸಮಾಧಾನ ಹೊರಹಾಕಿತು. ಜನರ ವಿಶ್ವಾಸವನ್ನು ಬೋರಿಸ್ ಕಳೆದುಕೊಳ್ಳುತ್ತಿದ್ದಾರೆ ಎಂಬ ಸೂಚನೆ ಸಿಕ್ಕಿದಾಗ, ಸರ್ಕಾರದ ಭಾಗವಾಗಿದ್ದ ಹಲವು ಪ್ರಮುಖರು ರಾಜೀನಾಮೆ ಇತ್ತರು. ಕೊನೆಗೆ ಪಕ್ಷದ ವಿಶ್ವಾಸ ಕಳೆದುಕೊಂಡ ಬೋರಿಸ್ ತಮ್ಮ ಹುದ್ದೆಗೆ ಒಲ್ಲದ ಮನಸ್ಸಿನಿಂದ ರಾಜೀನಾಮೆ ನೀಡಬೇಕಾಯಿತು.

ಹಾಗಾದರೆ ಮುಂದೇನು? ಟೋರಿ ಪಕ್ಷದ ನಾಯಕತ್ವಕ್ಕೆ ನಡೆಯುತ್ತಿರುವ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಬೋರಿಸ್ ಅವರ ಸಂಪುಟದಲ್ಲಿ ವಿತ್ತ ಸಚಿವರಾಗಿದ್ದ ರಿಷಿ ಸುನಕ್ ಮತ್ತು ವಿದೇಶಾಂಗ ಸಚಿವೆಯಾಗಿರುವ ಲಿಜ್ ಟ್ರಸ್ ಇದ್ದಾರೆ. ಟೋರಿ ಪಕ್ಷದ ನಾಯಕರಾಗಿ ಆಯ್ಕೆಯಾದವರು ಪ್ರಧಾನಿಯಾಗುತ್ತಾರೆ. 2021ರ ಡಿಸೆಂಬರ್‌ವರೆಗೂ ರಿಷಿ ಸುನಕ್ ಅವರ ಜನಪ್ರಿಯತೆ ಏರುಗತಿಯಲ್ಲಿತ್ತು. ಒಂದು ಹಂತದಲ್ಲಿ ಬೋರಿಸ್ ಜಾನ್ಸನ್ ಅವರನ್ನೂ ರಿಷಿ ಸುನಕ್ ಜನಪ್ರಿಯತೆಯ ಕ್ರಮಾಂಕದಲ್ಲಿ ಮೀರಿಸಿದ್ದರು. ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಅವರು ಪ್ರಧಾನಿ ಅಭ್ಯರ್ಥಿಯಾಗಬಹುದು ಎನ್ನಲಾಗುತ್ತಿತ್ತು. ಆದರೆ ನಂತರದ ದಿನಗಳಲ್ಲಿ ಅವರ ಜನಪ್ರಿಯತೆ ಕುಸಿಯಿತು. ತೆರಿಗೆ ಏರಿಸುವ ಕುರಿತು ಅವರು ಕೈಗೊಂಡ ಕ್ರಮ ಅವರನ್ನು ಹಿಂದಕ್ಕೆ ಎಳೆಯಿತು. ಕೊರೊನಾ ಸೃಷ್ಟಿಸಿದ ಆರ್ಥಿಕ ಬಿಕ್ಕಟ್ಟನ್ನು ಸಮರ್ಪಕವಾಗಿ ರಿಷಿ ನಿರ್ವಹಿಸಲಿಲ್ಲ, ಚೀನಾದ ಕುರಿತು ಮೃದು ಧೋರಣೆ ಹೊಂದಿದ್ದಾರೆ, ರಿಷಿ ಅವರ ಪತ್ನಿ ಅಕ್ಷತಾ ಮೂರ್ತಿ ತಮ್ಮ ಸಾಗರೋತ್ತರ ಆದಾಯದ ಮೇಲೆ ತೆರಿಗೆಯನ್ನು ಪಾವತಿಸಿಲ್ಲ ಎಂಬ ಆರೋಪಗಳು ಕೇಳಿಬಂದವು.

ಮುಂದೆ ಭಾರತದಲ್ಲಿ ಹೋಗಿ ನೆಲೆಸುತ್ತೇವೆ ಎಂಬರ್ಥದ ಮಾತನ್ನು ರಿಷಿ ಅವರ ಪತ್ನಿ ಆಡಿದ್ದು, ರಿಷಿ ಅವರು ಅಮೆರಿಕದ ಗ್ರೀನ್ ಕಾರ್ಡ್ ಹೊಂದಿದ್ದಾರೆ ಎಂಬ ಸಂಗತಿಗಳು ಮುನ್ನೆಲೆಗೆ ಬಂದವು. ರಿಷಿ ಅವರ ಬದ್ಧತೆಯ ಕುರಿತು ಪ್ರಶ್ನೆ ಮೊಳೆಯಿತು. ಜನಪ್ರಿಯತೆ ಮುಕ್ಕಾಯಿತು. ಅತ್ತ ಲಿಜ್ ಟ್ರಸ್ ಅವರು ತೆರಿಗೆ ಕಡಿತದ ಪ್ರಸ್ತಾವ ಮುಂದಿಟ್ಟು, ಜಾನ್ಸನ್ ಬೆಂಬಲಿಗರನ್ನು ಸೆಳೆದುಕೊಂಡು ಏಣಿಯ ಮೊದಲ ಮೆಟ್ಟಿಲಿಗೆ ಏರಿದರು. ಮುಖ್ಯವಾಗಿ ಕನ್ಸರ್ವೇಟಿವ್ ಪಕ್ಷದ ಹೆಚ್ಚಿನ ಮತದಾರರು ಹಿರಿಯ ತಲೆಮಾರಿನವರು, ಶ್ವೇತವರ್ಣೀಯರು ಮತ್ತು ಸಂಪ್ರದಾಯವಾದಿಗಳು ಆಗಿರುವುದರಿಂದ ಅವರು ಟ್ರಸ್ ಅವರತ್ತ ಒಲವು ತೋರಬಹುದೇ ಎಂಬ ಪ್ರಶ್ನೆ ಇದೀಗ ಎದ್ದಿದೆ. ಸೆಪ್ಟೆಂಬರ್ 5ರಂದು ಉತ್ತರ ಹೊರಬೀಳಲಿದೆ.


ಪಕ್ಷದ ಆಂತರಿಕ ಚುನಾವಣೆಯಲ್ಲಿ ಯಾರೇ ಗೆದ್ದರೂ, ನೂತನ ಪ್ರಧಾನಿಯನ್ನು ಎದುರುಗೊಳ್ಳಲು ಸಮಸ್ಯೆಗಳು ಸರತಿಯಲ್ಲಿ ನಿಂತಿವೆ. ಈ ವರ್ಷಾಂತ್ಯದ ವೇಳೆಗೆ ಬ್ರಿಟನ್ ಆರ್ಥಿಕ ಹಿಂಜರಿತವನ್ನು ಎದುರಿಸಲಿದೆ ಎಂದು 'ಬ್ಯಾಂಕ್ ಆಫ್ ಇಂಗ್ಲೆಂಡ್' ತನ್ನ ವರದಿಯಲ್ಲಿ ಹೇಳಿದೆ. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಆರ್ಥಿಕ ತಜ್ಞರು ಮಂಡಿಸಿರುವ 'ದಿ ಬಿಗ್ ಬ್ರೆಕ್ಸಿಟ್' ವರದಿಯಲ್ಲಿ, ಬ್ರಿಟನ್ ಆರ್ಥಿಕತೆಯ ಮೇಲೆ ಬ್ರೆಕ್ಸಿಟ್ ನಕಾರಾತ್ಮಕ ಪರಿಣಾಮ ಉಂಟುಮಾಡಿದೆ. ಸ್ಪರ್ಧಾತ್ಮಕತೆ, ಉತ್ಪಾದನಾ ಸಾಮರ್ಥ್ಯ ಕುಗ್ಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಉಕ್ರೇನ್ ಯುದ್ಧದಿಂದಾಗಿ ಜಾಗತಿಕ ಪೂರೈಕೆ ಜಾಲದಲ್ಲಿ ವ್ಯತ್ಯಯ ಉಂಟಾಗಿದೆ. ಬೆಲೆ ಏರಿಕೆ ಜನರನ್ನು ಬಾಧಿಸುತ್ತಿದೆ. ಇಂಧನ ವೆಚ್ಚ ಅಧಿಕಗೊಂಡಿದೆ. ವ್ಯಾಪಾರ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ ಐರೋಪ್ಯ ಒಕ್ಕೂಟದ ಜಟಿಲ ಕಾನೂನುಗಳು ಇನ್ನೂ ಜಾರಿಯಲ್ಲಿವೆ. ಈ ನೀತಿ ನಿಯಮಗಳನ್ನು ಪುನರ್‌ಪರಿಶೀಲಿಸಿ ಅಗತ್ಯ ಮಾರ್ಪಾಡು ಮಾಡಿಕೊಳ್ಳುವ ಅಗತ್ಯವಿದೆ.

ಒಂದೊಮ್ಮೆ ಟ್ರಸ್ ಅವರು ಟೋರಿ ಪಕ್ಷದ ನಾಯಕರಾಗಿ ಹೊರಹೊಮ್ಮಿದರೆ, ಬ್ರಿಟನ್ ಪ್ರಧಾನಿ ಹುದ್ದೆಗೇರಿದ ಮೂರನೇ ಮಹಿಳೆ ಎನಿಸಿಕೊಳ್ಳಲಿದ್ದಾರೆ. ರಿಷಿ ಸುನಕ್ ಅವರಿಗೆ ಅದೃಷ್ಟ ಒಲಿದರೆ, ಭಾರತೀಯ ಮೂಲದವರೊಬ್ಬರು ಇಂಗ್ಲೆಂಡಿಗೆ ಪ್ರಧಾನಿಯಾದರು ಎಂಬುದು ಹೆಗ್ಗಳಿಕೆಯಾಗಲಿದೆ. ಮೇಲಾಗಿ ಕನ್ನಡಿಗ ಎನ್.ಆರ್. ನಾರಾಯಣಮೂರ್ತಿ ಮತ್ತು ಸುಧಾಮೂರ್ತಿ ದಂಪತಿಯ ಅಳಿಯ ಎಂಬ ಕಾರಣದಿಂದ, ಅವರು ಬ್ರಿಟನ್ ಪ್ರಧಾನಿಯಾಗಬಹುದೇ ಎಂಬ ಕುತೂಹಲ ಭಾರತೀಯರಲ್ಲಿ ಗುಲಗಂಜಿಯಷ್ಟು ಹೆಚ್ಚಿದೆ. ಇಬ್ಬರಲ್ಲಿ ಯಾರು ಆಯ್ಕೆಯಾದರೂ ದ್ವಿಪಕ್ಷೀಯವಾಗಿ ಭಾರತ- ಬ್ರಿಟನ್ ನಡುವಿನ ಸಂಬಂಧದಲ್ಲಿ ಹೆಚ್ಚೇನೂ ಬದಲಾವಣೆ ಆಗದು.

ಹಣದುಬ್ಬರ, ಆರ್ಥಿಕ ಹಿಂಜರಿತ, ಆಂತರಿಕ ರಾಜಕೀಯ ಬಿಕ್ಕಟ್ಟು, ಯುರೋಪಿನ ಅಸ್ಥಿರತೆ, ಉಕ್ರೇನ್-ರಷ್ಯಾ ಸಂಘರ್ಷದ ಛಾಯೆ ಎಂಬ ಸವಾಲುಗಳ ಬುಗುಟೆಗಳನ್ನು ದಾಟಿ, ಕಳೆಗುಂದಿರುವ ಬ್ರಿಟನ್ನಿಗೆ ನೂತನ ಪ್ರಧಾನಿ ಚೈತನ್ಯ ತುಂಬಬಲ್ಲರೇ ಎಂಬುದನ್ನು ಕಾದು ನೋಡಬೇಕು.



## ಚುರುಮುರಿ



### ಅದಲಿ- ಬದಲಿ

• ಲಿಂಗರಾಜು ಡಿ.ಎಸ್.

**'ಬೆಕ್ಕೆ ಬೆಕ್ಕೆ ಮುದ್ದಿನ ಸೊಕ್ಕೆ ಎಲ್ಲಿಗೆ ಹೋಗಿದ್ದೆ'** ತಾತಾ, ಇಲಿ ಕಂಡೇಟಿಗೆ ಬೆಕ್ಕು ಹಿಡಿಯಕ್ಕೋಗದು ಬೆಕ್ಕಿನ ಚಾಲು ಅಲ್ಲವಾ?' ಅಂದ ತುರೇಮಣೆ ಮೊಮ್ಮಗ ತಾತನ ಮುಖ ಕಂಡೇಟಿಗೆ.

'ಹ್ಞೂಂ ಕನಪ್ಪ, ಇವಾಗಿನ ಬೆಕ್ಕುಗಳು ಕಾಸು, ಸೈಟು ಕಂಡೇಟಿಗೆ ಎಪ್ಪೆಸ್ ಮಾಡಿಬುಡ್ತವೆ. ಅದುಕ್ಕೆ ರೋಡಾದ ರೋಡೆಲ್ಲಾ ಸ್ವಿಮ್ಮಿಂಗ್ ಪೂಲ್ ಆಗ್ಯದೆ! ಈ ಕಳ್ಳ ಬೆಕ್ಕುಗಳು ಪರ್ಸೆಂಟೇಜು ಅಂದ್ರೆ ಪ್ರಾಣ ಬುಡ್ತವೆ. ಈಗ ವಿಧಾನಸೌಧ, ಸರ್ಕಾರಿ ಕಚೇರಿಗಳಲ್ಲಿ ಬಂದು ತುಂಬೋಗ್ಯವೆ ಮಗ' ಅಂದ್ರು ತುರೇಮಣೆ.

'ಇದೇನ್ಸಾ ಈ ಥರ ಪಾಠ ಹೇಳಿಕೊಡ್ತಿದ್ದರಿ ಮಗೀಗೆ. ಬೆಕ್ಕಣ್ಣ ಬಂದು ಬೋದಾನು ಹುಸಾರು' ಅಂತಂದೆ.

'ಬಿಡಿಎ ಬದಲಿ ಸೈಟು ಮಂಜೂರಿ, ಕಂಟ್ರಾಕ್ಟರ್ ತಾವು ಕೋಟಿ-ಕೋಟಿ ಪರ್ಸೆಂಟೇಜ್ ದುಡ್ಡು, ದಾಖಲೆಗಳನ್ನೇ ತಿದ್ದೋ ಅಕ್ರಮದ ಬೆಕ್ಕುಗಳ ಕಥೆ ಕನೋ ಇದು!' ತುರೇಮಣೆ ವಿವರಿಸಿದರು.

'ಕೋರ್ಟು ಬ್ಯಾಡಾ ಕಣ್ರೋ ಅಂತ ಗಿಣಿಗೇಳಿದಂಗೆ ಹೇಳಿದ್ರೂವೆ ಮುಖಂಡರಿಗೆ ಬಿಡಿಎ ಅಡವಾದ ಜಾಗದಲ್ಲಿ ಬದಲಿ ಸೈಟುಗಳು ಕೊಟ್ಟದೆ. ಕೋರ್ಟು ಬೇಜಾರಾಗಗಂಟಾ ಬೈದು ಸುಮ್ಮಗಾಯ್ತದೆ ಅಂತ ಇವರು ಆಡಿದ್ದೇ ಆಟಾಗ್ಯದೆ. ಒಂದಿಬ್ಬರನ್ನ ಜೈಲಿಗಾಕಿದರೆ ಸರೋದದೇನೋ' ಅಂತು ಯಂಟಪ್ಪಣ್ಣ.

'ಅಣ್ಣೆ, ಮುಖಂಡರು, ಅಧಿಕಾರಿಗಳ ಬುದ್ಧಿಗೆ ಲ್ಯಾಂಡುರೋಗದ ವೈರಸ್ ಅಮರಿಕ್ಯಂಡಿರತದೆ. ಮೊದಲು ಸುಮಾರಾದ ಸೈಟು ಕೊಡದು ಆಮೇಲೆ ಕೋಟಿ-ಕೋಟಿ ಸೈಟಿಗೆ ಬದಲಾವಣೆ. ಪಾಪದ ಸಾಲುಮರದ ತಿಮ್ಮಕ್ಕನಿಗೆ ಸೈಟು ಕೊಡಕ್ಕೆ ವರ್ಷ ಹತ್ತಾಯ್ತು. ಮುಖಂಡರು ದುಡಿದು ದಣಿದಿರತರೆ ಅಂತ ಕೂಡಲೇ ಸೈಟು ಕೊಡ್ತರೆ' ಅಂತ ತುರೇಮಣೆ ತಾರಮ್ಮಯ್ಯ ಆಡಿದರು.

'ಬುಡಿ ಸಾ, ಬದಲಿ ಜಾಗ, ಅಕ್ರಮ ಮಂಜೂರಿಗಳೆಲ್ಲಾ ಪೂಜೆಯಾದ ಮ್ಯಾಲೆ ಕೊಡೋ ಚರುಪಿದ್ದಂಗೆ. ಅವಾಗ ಕರೆದು ಕರೆದು ಹಂಚಿದ್ರಂತೆ. ಚರುಪು ದೇವರ ಪ್ರಸಾದ ಸಾ!' ಅಂದುದ್ದೆ ಎಲ್ಲಾ ನನಗೆ ತಾರಮಾರ ಬೋದು ಹೊಂಟೋದ್ರು.

## ಸಂಗತ

## ನೊಯಿಡಾ ಕಟ್ಟಡ: ಸ್ಫೋಟದ ಹಿಂದೆ...

### ಈ ಕಟ್ಟಡಗಳ ಸ್ಫೋಟಕ್ಕೆ ಬಳಸಿದ ಅತ್ಯಾಧುನಿಕ ತಂತ್ರಜ್ಞಾನದ ಹಿಂದೆ ಹಾನಿಕಾರಕ ಅಮೋನಿಯಂ ನೈಟ್ರೇಟ್ ಬಳಕೆ ಇದೆ

• ಉದಯ ಗಾಂವಕಾರ

**ನೊಯಿಡಾದ** 'ಸೂಪರ್‌ಟೆಕ್' ಅವಳಿ ಕಟ್ಟಡಗಳು ನೆಲಕ್ಕುರುಳಿವೆ. ನೂರಾರು ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಈ ಅವಳಿ ಕಟ್ಟಡಗಳು ಎಂಟೂವರೆ ಸೆಕೆಂಡುಗಳಲ್ಲಿ ಎಪ್ಪತ್ತು ಸಾವಿರ ಟನ್ ತ್ಯಾಜ್ಯದ ರಾಶಿಯಾಗಿ ಬಿದ್ದವು. ಕಿಲೊಮೀಟರುಗಳವರೆಗೆ ದೂಳು ತುಂಬಿಸಿದ ಸ್ಫೋಟದ ಈ ದೃಶ್ಯವನ್ನು ನಯಾಗರಾ ಜಲಪಾತವನ್ನು ನೋಡುತ್ತಿದ್ದೇವೇನೋ ಎಂಬಂತೆ ಜನರು ವೀಕ್ಷಿಸಿದರು.

ನೊಯಿಡಾದ ಸೂಪರ್‌ಟೆಕ್ ಎಮರಾಲ್ಡ್ ಕೋರ್ಟ್ ಎಂಬ ವಸತಿ ಸಂಕೀರ್ಣದಲ್ಲಿ 14 ಅಪಾರ್ಟು ಮೆಂಟುಗಳಿವೆ. ಇಲ್ಲಿನ ನಿವಾಸಿಗಳ ಬಳಕೆಗಾಗಿ ಮೀಸಲಿಡಬೇಕಿದ್ದ ಉದ್ಯಾನದ ಜಾಗದಲ್ಲಿ ಕಂಪನಿಯು ಅವಳಿ ಕಟ್ಟಡಗಳನ್ನು ಸೂಕ್ತ ಪ್ರಾಧಿಕಾರದ ಅನುಮತಿಯೊಂದಿಗೆ ನಿರ್ಮಿಸಿತ್ತು. ಕಟ್ಟಡಗಳ ನಡುವಿನ ಕನಿಷ್ಠ ಅಂತರದ ಕುರಿತಾದ ನಿಯಮಗಳನ್ನು ಗಾಳಿಗೆ ತೂರಲಾಗಿತ್ತು.

ಈ ಕಟ್ಟಡಗಳನ್ನು ನೆಲಕ್ಕುರುಳಿಸುವ ಹೊಣೆ ಹೊತ್ತ ಎಡಿಫೈಸ್ ಎಂಜಿನಿಯರಿಂಗ್ ಕಂಪನಿ 'ಜಲಪಾತ ಒಳಸ್ಫೋಟ' ತಂತ್ರವನ್ನು ಈ ಕಾರ್ಯಕ್ಕೆ ಆಯ್ದುಕೊಂಡಿತು. ಈ ತಂತ್ರದ ಮೂಲಕ ಅಕ್ಕಪಕ್ಕದ ಕಟ್ಟಡಗಳಿಗೆ ಧಕ್ಕೆಯಾಗದ ಹಾಗೆ ಕಟ್ಟಡವನ್ನು ನೆಲಕ್ಕುರುಳಿಸಲು ಸಾಧ್ಯ. ಕಟ್ಟಡವು ಜಲಪಾತದಂತೆ ತನ್ನ ಬುಡದಲ್ಲೇ ರಾಶಿಯಾಗಿ ಬೀಳುವಂತೆ ಈ ಕಾರ್ಯಾಚರಣೆ ನಡೆಸಲಾಗುತ್ತದೆ. ಈ 'ವಾಟರ್‌ಫಾಲ್ ಇಂಪ್ಲೋಷನ್' ಕಾರ್ಯಾಚರಣೆಗಾಗಿ 3,700 ಟನ್ ಸ್ಫೋಟಕ ಬಳಸಲಾಗಿದೆ. ಮದ್ದು, ಬತ್ತಿಗಳಾಗಿ ಬಳಸಿದ ಈ ನೈಟ್ರೋ ರಾಸಾಯನಿಕಗಳ ಕತೆ ಆಸಕ್ತಿದಾಯಕವಾಗಿದೆ.

ಸ್ಫೋಟಕವಾಗಿ ಬಳಸಿದ ಅನೇಕ ನೈಟ್ರೋ ರಾಸಾಯನಿಕಗಳಲ್ಲಿ ಅಮೋನಿಯಂ ನೈಟ್ರೇಟು ಕೂಡಾ ಒಂದು. ಹರಳಿನ ರೂಪದಲ್ಲಿರುವ ಈ ರಾಸಾಯನಿಕವು ಕೃಷಿಯ ದಿಕ್ಕು-ದೆಸೆಗಳನ್ನು ಬದಲಾಯಿಸಿದ ರಸಗೊಬ್ಬರ. ಸಸ್ಯಗಳ ಬೆಳವಣಿಗೆಗೆ, ಹಣ್ಣು ಬೆಳೆಗಳ ಉತ್ತಮ ಇಳುವರಿಗೆ ನೈಟ್ರೋಜನ್ ಬೇಕು. ಸಸ್ಯಗಳು ಪೋಷಕಾಂಶಗಳನ್ನು ಪಡೆಯಬೇಕಾದರೆ ಅವು ನೀರಿನಲ್ಲಿ ಕರಗಬೇಕಾಗುತ್ತದೆ. ಅಮೋನಿಯಂ ನೈಟ್ರೇಟಿನಲ್ಲಿ ಹತ್ತಿರ ಹತ್ತಿರ ಮೂವತ್ತು ಶೇಕಡದಷ್ಟು ನೈಟ್ರೋಜನ್ ಇರುತ್ತದೆ. ಇದು ನೀರಿನಲ್ಲಿ ಕರಗುತ್ತದೆ. ಜೊತೆಗೆ, ಬಹಳ ಅಗ್ಗ ಕೂಡಾ.

ಅಮೋನಿಯಂ ನೈಟ್ರೇಟು ಒಂದು ಶಕ್ತಿಶಾಲಿಯಾದ ಆಕ್ಸಿಡೀಕರಣ ದಲ್ಲಾಳಿ. ಹಾಗೆಯೇ, ಸಾವಿನ ದಲ್ಲಾಳಿ ಕೂಡಾ. ಶಾಖಕ್ಕೆ ಸೂಕ್ಷ್ಮವಾಗಿ ಪ್ರತಿಕ್ರಿಯಿಸುವ ಅಮೋನಿಯಂ ನೈಟ್ರೇಟು, ಇಂತಹ ಬಾಹ್ಯಪ್ರೇರಣೆಗೆ ಕೂಡಲೇ ಪ್ರತಿಕ್ರಿಯಿಸುವ ಮೂಲಕ ರಸಗೊಬ್ಬರದಿಂದ ಸ್ಫೋಟಕ ಸಾಮಗ್ರಿಯಾಗಿ ಬದಲಾಗಬಲ್ಲದು!

ಅಮೋನಿಯಂ ನೈಟ್ರೇಟನ್ನು ಟ್ರೈ ನೈಟ್ರೋ ಟೋಲಿನ್ ಎಂಬ ಸ್ಫೋಟಕದೊಂದಿಗೋ ಡೀಸೆಲ್‌ನಂತಹ ಇಂಧನ ತೈಲದೊಂದಿಗೋ ಬೆರಕೆ ಮಾಡಿ ಬಾಂಬು ತಯಾರಿಸುತ್ತಾರೆ. ಬಾಂಬುಗಳು ಮೂಲತಃ ಗಣಿಗಾರಿಕೆಗಾಗಿಯೇ ಕಂಡುಹಿಡಿಯಲಾದ ಸ್ಫೋಟಕ ಕಾಂಬಿನೇಷನ್‌ಗಳು. ಆನಂತರ, ರಕ್ಷಣಾಪಡೆಗಳು ಇವುಗಳನ್ನು ಬಳಸಿಕೊಂಡವು. 1996ರಲ್ಲಿ ಅಮೆರಿಕದ ಒಕ್ಲಾಮಾ ನಗರದಲ್ಲಿ ನಡೆಸಿದ ಬಾಂಬ್ ಸ್ಫೋಟದ ಕಾಲದಿಂದಲೂ ಅಮೋನಿಯಂ ನೈಟ್ರೇಟನ್ನು ಉಗ್ರಗಾಮಿಗಳು ಬಳಸುತ್ತಿದ್ದಾರೆ!

ಸೆಲ್ಯುಲೋಸ್ ನೈಟ್ರೇಟ್ ಮತ್ತು ನೈಟ್ರೋ ಗ್ಲಿಸರಿನ್ ಮೂಲದ ಸ್ಫೋಟಕಗಳ ಬಳಕೆ ಪ್ರಾರಂಭವಾದದ್ದು ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ. ಸರ್ ಅಲ್ಫ್ರೆಡ್ ನೊಬೆಲ್ ಅವರ ತಂದೆ ನಡೆಸುತ್ತಿದ್ದ ಸ್ಫೋಟಕಗಳ ಕಾರ್ಖಾನೆಯಲ್ಲಿ ಆಕಸ್ಮಿಕವಾಗಿ ಸ್ಫೋಟ ಸಂಭವಿಸಿ ನೊಬೆಲ್ ಅವರ ಇಬ್ಬರು ತಮ್ಮಂದಿರು ಅಸುನೀಗಿದ್ದರು. ಆನಂತರ, ಅಲ್ಫ್ರೆಡ್ ನೊಬೆಲ್ ಅವರು ನಿಯಂತ್ರಿತ ರೀತಿಯಲ್ಲಿ ಬಳಸಬಹುದಾದ ಡೈನಮೈಟ್ ಎಂಬ ಸ್ಫೋಟಕ ಸಂಯೋಜನೆಯನ್ನು ತಯಾರಿಸಿದರು. ಡೈನಮೈಟ್ ತಯಾರಿಸಿದ ಕುಖ್ಯಾತಿಯಿಂದ ತಪ್ಪಿಸಿಕೊಳ್ಳಲೋಸುಗವೋ ಎಂಬಂತೆ ಅವರು ತಮ್ಮ ಆಸ್ತಿಯನ್ನೆಲ್ಲ ನೊಬೆಲ್ ಪ್ರಶಸ್ತಿ ಟ್ರಸ್ಟಿಗೆ ನೀಡಿದರು.



ಅಮೋನಿಯಂ ನೈಟ್ರೇಟು ಮತ್ತಿತರ ರಸಗೊಬ್ಬರಗಳನ್ನು ತಯಾರಿಸಿದ ಸಾಧನೆಗಾಗಿ ವಿಜ್ಞಾನಿ ಫ್ರಿಟ್ಜ್ ಹೇಬರ್ ಅವರಿಗೆ 1918ರಲ್ಲಿ ರಸಾಯನಶಾಸ್ತ್ರದ ನೊಬೆಲ್ ಪ್ರಶಸ್ತಿ ದೊರೆಯಿತು. ಇದೇ ಹೇಬರ್ ಮಹಾಶಯನನ್ನು ಮೊದಲ ಮಹಾಯುದ್ಧದ ಕಾಲದಲ್ಲಿ ಜರ್ಮನಿಯ ರಾಸಾಯನಿಕ ಸಮರಪಡೆಯ ಮುಖ್ಯಸ್ಥರನ್ನಾಗಿಯೂ ಮಾಡಲಾಗಿತ್ತು. ಇದೇ ಹೇಬರ್ ಕದನವೊಂದರಲ್ಲಿ ಕ್ಲೋರಿನ್ ಗ್ಯಾಸ್ ದಾಳಿಯನ್ನು ನಿರ್ದೇಶಿಸಿ ಮಿತ್ರಪಡೆಯ ಸಾವಿರಾರು ಯೋಧರ ಸಾವಿಗೆ ಕಾರಣರಾಗಿದ್ದರು. ಅಮೋನಿಯಂ ನೈಟ್ರೇಟ್ ಎಂಬ ರಸಗೊಬ್ಬರವು ರಕ್ತವನ್ನು ಲೇಪಿಸಿ ಕೊಂಡೇ ಹುಟ್ಟಿರುವುದಕ್ಕೆ ಇದಕ್ಕಿಂತ ಬೇರೆ ಪುರಾವೆ ಬೇಕೆ?

ಹದಿಮೂರನೇ ಶತಮಾನದ ಹೊತ್ತಿಗೆ ಕೋವಿ ಮದ್ದಲ್ಲದೆ ಬೇರೆ ಸ್ಫೋಟಕಗಳೇ ಗೊತ್ತಿರಲಿಲ್ಲ. ಸೆಲ್ಯುಲೋಸ್ ನೈಟ್ರೇಟ್ ಮತ್ತು ನೈಟ್ರೋ ಗ್ಲಿಸರಿನ್ ಮೂಲದ ಸ್ಫೋಟಕಗಳ ಬಳಕೆ ಪ್ರಾರಂಭವಾದದ್ದು ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ. ಟಿ.ಎನ್.ಟಿ ರಂಗಪ್ರವೇಶ ಮಾಡಿದ್ದು ಮೊದಲ ವಿಶ್ವಸಮರದ ಸಂದರ್ಭದಲ್ಲಿ. 1991ರಲ್ಲಿ ಆರ್.ಡಿ.ಎಕ್ಸ್ ಎಂಬ ಸ್ಫೋಟಕಕ್ಕೆ ರಾಜೀವ್ ಗಾಂಧಿ ಬಲಿಯಾದರು.

ಅಮೋನಿಯಂ ನೈಟ್ರೇಟನ್ನು ರಸಗೊಬ್ಬರವಾಗಿ ಬಳಸುವಾಗಲೂ ಅಪಾಯವಿದ್ದೇ ಇದೆ. ಸಂಗ್ರಹಣೆ ಮತ್ತು ಬಳಕೆಯ ಯಾವ ಹಂತದಲ್ಲಿ ಎಚ್ಚರ ತಪ್ಪಿದರೂ ಅನಾಹುತ ಕಟ್ಟಿಟ್ಟ ಬುತ್ತಿ. ಟೆಕ್ಸಾಸ್ ನಗರದ ರಸಗೊಬ್ಬರ ಕಾರ್ಖಾನೆಯ ದುರಂತ ಸೇರಿದಂತೆ ಎಷ್ಟೋ ಸಾವು-ನೋವುಗಳಿಗೆ ಈ ರಸಗೊಬ್ಬರ ಕಾರಣವಾಗಿದೆ.

ಹಿಂಸೆಯು ಹೀಗೆ ನೆಲ, ನೀರು, ಅನ್ನಾಹಾರಗಳನ್ನೆಲ್ಲ ಮೆತ್ತಿಕೊಂಡಿದ್ದರಿಂದಲೇ ಇರಬಹುದು, ಕಟ್ಟಡ ನೆಲಕ್ಕುರುಳುವ ದೃಶ್ಯವೂ ಮನಮೋಹಕವಾಗಿ ಪರಿಣಮಿಸಿತು.

## ವಾಚಕರ ವಾಣಿ

### ಹೊಗಳುಭಟರಿಂದ ಬಿಡಿಸಿಕೊಂಡು ವಾಸ್ತವ ಅರಿಯಿರಿ

ತುರ್ತುಪರಿಸ್ಥಿತಿಯ ಕಾರಣ ಚುನಾವಣೆಯಲ್ಲಿ ಸೋತಿದ್ದ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರ ಜೊತೆ ಇದ್ದವರು ಪುತ್ರ ಸಂಜಯ್ ಗಾಂಧಿ, ಪಕ್ಷದ ಅಧ್ಯಕ್ಷ ಡಿ.ಕೆ.ಬರುವಾ ಅವರಂಥ ಕೆಲವರು ಮಾತ್ರ. ಆಗ ಇಂದಿರಾ ಗಾಂಧಿಯವರಿಗೆ ಧೈರ್ಯ ತುಂಬಿದವರು ಸಂಜಯ್ ಗಾಂಧಿ. ಸಂಜಯ್ ಹಾಗೂ ಇನ್ನೂ ಕೆಲವರ ಆತ್ಮವಿಶ್ವಾಸದಿಂದ, ಛಲದಿಂದ, ಜನತಾ ಸರ್ಕಾರವನ್ನು ಚುನಾವಣೆಯಲ್ಲಿ ಸೋಲಿಸಿ ಮತ್ತೆ ಅಧಿಕಾರ ಪಡೆದರು. ಆದರೆ ಈಗ?

ಕಾಂಗ್ರೆಸ್ ನಾಯಕತ್ವ ಸೋನಿಯಾ ಗಾಂಧಿಯವರದಾದರೂ ಪಕ್ಷವನ್ನು ಮುಷ್ಟಿಯಲ್ಲಿ ಹಿಡಿದಿರುವುದು ಪುತ್ರ ರಾಹುಲ್ ಗಾಂಧಿ. ಅವರ ಅನುಭವದ ಕೊರತೆಯಿಂದ, ಹೊಗಳುಭಟರ ಕೋಟೆಯಲ್ಲಿ ಸಿಲುಕಿರುವುದರಿಂದ ಪಕ್ಷ ಅನಾಥವಾಗುತ್ತಿದೆ. ಆಗಿನ ಇಂದಿರಾ ಗಾಂಧಿ, ಸಂಜಯ್ ಗಾಂಧಿ ಅವರಿಗೂ ಇಂದಿನ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರಿಗೂ ಅಜಗಜಾಂತರವಿದೆ. ಪಕ್ಷದಲ್ಲಿ ಬಲಿಷ್ಠ ನಾಯಕರಿದ್ದರೂ ಹೊಗಳುಭಟರ ಭದ್ರಕೋಟೆಯಿಂದ ನಾಯಕತ್ವ ಹೊರಬರುವುದು ಅಸಾಧ್ಯವಾಗಿದೆ. ಇದನ್ನು ಹೇಳುವವರಿಗೂ ಕೇಳುವವರಿಗೂ ಆತ್ಮವಿಶ್ವಾಸ, ಛಲ ಇಲ್ಲದಿದ್ದರೆ, ಕೋಟೆ ಛಿದ್ರವಾಗುವುದನ್ನು ತಡೆಯಲು ಸಾಧ್ಯವೇ?

**ಪಿ.ಸಿ.ಕೇಶವ,** ಬೆಂಗಳೂರು

### ಸಿರಿಧಾನ್ಯ: ಬೇಕಿದೆ ಬೆಂಬಲ ಬೆಲೆ

ಕಲ್ಯಾಣ ಕರ್ನಾಟಕವನ್ನು ಸಿರಿಧಾನ್ಯಗಳ ಕೇಂದ್ರವಾಗಿ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರದ ಜೊತೆ ಕೇಂದ್ರವೂ ನೆರವು ನೀಡಲಿದೆ ಎಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ (ಪ್ರ.ವಾ., ಆ. 28). ಸಿರಿಧಾನ್ಯ ಬೆಳೆದ ರೈತರು ಸೂಕ್ತ ಬೆಲೆ ಸಿಗದೆ ನಷ್ಟ ಅನುಭವಿಸುತ್ತಿದ್ದಾರೆ. ಆದರೆ ಗ್ರಾಹಕರು ಅಂಗಡಿಗಳಲ್ಲಿ ಹೆಚ್ಚಿನ ಬೆಲೆ ನೀಡಿ ಅವುಗಳನ್ನು ಕೊಳ್ಳುತ್ತಿದ್ದಾರೆ. ಇತ್ತ ಬೆಳೆದ ರೈತರಿಗೆ ಲಾಭವಿಲ್ಲ ಅತ್ತ ಗ್ರಾಹಕರಿಗೆ ಹೊರೆಯಾಗಿದೆ.

ಸಿರಿಧಾನ್ಯ ಬೆಳೆಗಳಿಗೆ ಬೆಂಬಲ ಬೆಲೆ ನೀಡಿ, ಸರ್ಕಾರ ಖರೀದಿಸಿ ಪಡಿತರ, ಅಂಗನವಾಡಿ, ಹಾಸ್ಟೆಲ್, ಇಂದಿರಾ ಕ್ಯಾಂಟೀನ್‌ಗಳಿಗೆ ಪೂರೈಕೆ ಮಾಡಿದರೆ ರೈತರಿಗೆ, ಗ್ರಾಹಕರಿಗೆ ಅನುಕೂಲ. 2023ರ ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷವನ್ನು ಅರ್ಥಪೂರ್ಣವಾಗಿ ಆಚರಿಸಲು ಸಿರಿಧಾನ್ಯ ಬೀಜ ಉತ್ಪಾದನೆ, ಸಂಸ್ಕರಣೆಗೆ ಒತ್ತು ನೀಡಿ, ಲಾಭದಾಯಕ ಬೆಂಬಲ ಬೆಲೆ ಘೋಷಿಸಬೇಕು.

**ಡಾ. ಎಚ್.ಆರ್.ಪ್ರಕಾಶ್,** ಕೆ.ಬಿ.ದೊಡ್ಡಿ, ಮಂಡ್ಯ

### 'ಮೈಕಾಸುರ' ರಥ ಏರದಿರಲಿ

ತಳ್ಳುಗಾಡಿಗಳಲ್ಲಿ ಸೊಪ್ಪು, ತರಕಾರಿ, ಹೂವು, ಹಣ್ಣಿನಂತಹ ಉಪಯುಕ್ತ ವಸ್ತುಗಳನ್ನು ಮನೆ ಬಾಗಿಲಿಗೇ ತರುವ ವ್ಯಾಪಾರಿಗಳಿಗೆ ಆಭಾರಿಗಳಾಗಿರೋಣ. ಆದರೆ ಇತ್ತೀಚೆಗೆ ಒಂದು 'ಟ್ರೆಂಡ್' ಹೆಚ್ಚುತ್ತಿದೆ. ಸರಾಗಕ್ಕೋ ಅಥವಾ ಹೆಚ್ಚಿನವರಿಗೆ ಕೂಗು ಮುಟ್ಟಲೆಂದೋ ಈ ವ್ಯಾಪಾರಿಗಳು ಧ್ವನಿವರ್ಧಕ ಬಳಸುತ್ತಾರೆ. ಮೊದಲೇ ಶಬ್ದಮಾಲಿನ್ಯ ತಾಂಡವವಾಡುತ್ತಿದೆ. ವಿಶೇಷವಾಗಿ ಚಿಣ್ಣರಿಗೆ, ವೃದ್ಧರಿಗೆ, ವಿವಿಧ ಕಾಯಿಲೆಗಳಿಂದ ಗುಣಮುಖರಾಗುತ್ತಿರುವವರಿಗೆ ಕಿರಿಕಿರಿ ಉಂಟುಮಾಡುವ ಈ 'ಮೈಕಾಸುರ' ರಥವೇರುವುದೇಕೆ? ತಳ್ಳುಗಾಡಿ ವ್ಯಾಪಾರಿಗಳು ಧ್ವನಿವರ್ಧಕ ಬಳಸದಂತೆ ಸಂಬಂಧಿಸಿದ ಇಲಾಖೆ ಸೂಚನೆ ನೀಡಬೇಕಿದೆ.

**ಬಿಂಡಿಗನವಿಲೆ ಭಗವಾನ್,** ಬೆಂಗಳೂರು

### ಪರೀಕ್ಷಾ ವಿಧಾನ: ಸುಧಾರಣೆ ಅನಿವಾರ್ಯ

ಪರೀಕ್ಷಾ ಅಕ್ರಮಗಳನ್ನು ತಡೆಯಲು ಚುನಾವಣಾ ಆಯೋಗಕ್ಕೆ ಇರುವಂತಹ ಅಧಿಕಾರ ನೀಡುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ರಾಜ್ಯ ಸರ್ಕಾರಕ್ಕೆ ಮನವಿ ಮಾಡಿರುವುದು ನಿಜಕ್ಕೂ ಸ್ವಾಗತಾರ್ಹ. ಕಾಲಕ್ಕೆ ತಕ್ಕಂತೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಮತ್ತು ಕೆಇಎ ಪರೀಕ್ಷಾ ವಿಧಾನಗಳು ನವೀಕರಣಗೊಳ್ಳಬೇಕು. ಅಕ್ರಮ ತಡೆಗೆ ವಸ್ತ್ರಸಂಹಿತೆಯಂತಹ ಅನೇಕ ಕ್ರಮಗಳನ್ನು ಕೈಗೊಂಡರೂ ಅಕ್ರಮದ ಮಾರ್ಗಗಳು ಹೊಸದಾಗಿ ಸೇರ್ಪಡೆ ಆಗುತ್ತಿವೆ. ಅದೇ ರೀತಿ ಹಲವು ವರ್ಷಗಳಿಂದ ಈ ಪರೀಕ್ಷಾ ವಿಧಾನಗಳಲ್ಲಿ ಅಂತಹ ಮಹತ್ತರ ಬದಲಾವಣೆಗಳೇನೂ ಆಗಿಲ್ಲ. ಇತ್ತೀಚಿನ ದಿನಗಳಲ್ಲಿ ಬಹುತೇಕ ಪರೀಕ್ಷೆಗಳಲ್ಲಿ ಅಕ್ರಮಗಳು ನುಸುಳುವುದು ಹೆಚ್ಚಾಗಿದೆ. ಪ್ರಶ್ನೆ ಪತ್ರಿಕೆಯಿಂದ ಹಿಡಿದು ಫಲಿತಾಂಶದವರೆಗೆ ಅತ್ಯಂತ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಕಾಪಾಡುವ ದೃಷ್ಟಿಯಿಂದ ಕಾಲಕಾಲಕ್ಕೆ ಸುಧಾರಣೆ ಅನಿವಾರ್ಯ. ಪರೀಕ್ಷೆಗಳಿಗೆ ಸಂಬಂಧಿಸಿ ಅಕ್ರಮ ಮಾರ್ಗಗಳನ್ನು ಮುಚ್ಚಿಸಿ, ಸಾರ್ವಜನಿಕರ ವಿಶ್ವಾಸ ಹೆಚ್ಚಿಸಬೇಕಾಗಿದೆ. ಪರಿವರ್ತನೆಗೆ ಇದು ಸಕಾಲ.

**ವಿನಯಕುಮಾರ್ ಚಿಂಚೋಳಿ,** ಬಲಶೆಟ್ಟಿಹಾಳ್, ಸುರಪುರ

### ಗಣಿಗಾರಿಕೆ ರಾಜ್ಯ ವರಮಾನದ ಪ್ರಮುಖ ಮೂಲವಲ್ಲ!

ಗದಗ ಜಿಲ್ಲೆಯ ಕಪ್ಪತಗುಡ್ಡ ವನ್ಯಜೀವಿಧಾಮ ಮತ್ತು ಬಳ್ಳಾರಿ ಜಿಲ್ಲೆ ಗುಡೆಕೋಟೆಯ ಕರಡಿಧಾಮ ಪ್ರದೇಶಗಳಲ್ಲಿ ಗಣಿಗಾರಿಕೆಗೆ ಅನುಮತಿ ಕೋರಿ, ರಾಜ್ಯ ವನ್ಯಜೀವಿ ಮಂಡಳಿಗೆ ಪ್ರಸ್ತಾವಗಳು ಸಲ್ಲಿಕೆಯಾಗಿವೆ ಎಂದು ವರದಿಯಾಗಿದೆ (ಪ್ರ.ವಾ., ಆ. 29). ಕರ್ನಾಟಕದಲ್ಲಿ ಗಣಿಗಾರಿಕೆಯು ಜಿಎಸ್‌ಡಿಪಿಯ ಪ್ರಮುಖ ಮೂಲವಲ್ಲ. ಉದಾಹರಣೆಗೆ, ರಾಜ್ಯದ ಜಿಎಸ್‌ಡಿಪಿಗೆ 2020-21ರಲ್ಲಿ ಅರಣ್ಯಗಾರಿಕೆ- ದಿಮ್ಮಿ ಆರ್ಥಿಕತೆ ಹಾಗೂ ಮೀನುಗಾರಿಕೆಯ ಕೊಡುಗೆ ಕ್ರಮವಾಗಿ ₹ 9,872 ಕೋಟಿ ಮತ್ತು ₹ 5,261 ಕೋಟಿ (ಒಟ್ಟು ₹ 15,133 ಕೋಟಿ). ಆದರೆ ಗಣಿಗಾರಿಕೆ ಮತ್ತು ಕಲ್ಲುಗಣಿಗಳಿಂದ 2020–21ರಲ್ಲಿ ಬಂದ ವರಮಾನ ₹ 6,568 ಕೋಟಿ. ಅಪಾರ ವರಮಾನ ನೀಡುವ ಅರಣ್ಯಗಳನ್ನು ನಾಶ ಮಾಡಿ, ಮೀನುಗಾರಿಕೆಯನ್ನು ನಿರ್ಲಕ್ಷಿಸಿ ಗಣಿಗಾರಿಕೆಗೆ ಸರ್ಕಾರ ಏಕೆ ಇಷ್ಟೊಂದು ಮಹತ್ವ ನೀಡುತ್ತಿದೆ?

ಪರಿಸರ, ವನ್ಯಮೃಗಗಳ ಆವಾಸಸ್ಥಾನ ಹಾಗೂ ಜಲಮೂಲಗಳ ನಾಶ ಮಾಡುವ ಗಣಿಗಾರಿಕೆಗೆ ಬದಲಾಗಿ ಉದ್ಯೋಗಸಾಂದ್ರ, ಪರಿಸರಸ್ನೇಹಿ, ಜನರ ಆಹಾರದ ಮೂಲವಾಗಿರುವ ಮತ್ತು ಆರ್ಥಿಕತೆಗೆ ಅಧಿಕ ವರಮಾನ ನೀಡುವ ಮೀನುಗಾರಿಕೆ ಮತ್ತು ಅರಣ್ಯಗಾರಿಕೆಗಳನ್ನು ಪ್ರೋತ್ಸಾಹಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದು ಸೂಕ್ತ. ಎಲ್ಲಕ್ಕಿಂತ ಮುಖ್ಯವಾಗಿ ಅರಣ್ಯಗಾರಿಕೆ ಮತ್ತು ಮೀನುಗಾರಿಕೆಯು 'ನವೀಕರಿಸಬಹುದಾದ' ಸಂಪನ್ಮೂಲಗಳು. ಮೇಲಾಗಿ ಇವು ಅಂತರ-ತಲೆಮಾರು ಸಮಾನತೆಯನ್ನು ಪೋಷಿಸುವ ಸಂಪನ್ಮೂಲಗಳು. ಗಣಿಗಾರಿಕೆಯು ನವೀಕರಿಸಲು ಬಾರದ ಸಂಪನ್ಮೂಲ ಮತ್ತು ಇಲ್ಲಿ ಅಂತರ-ತಲೆಮಾರಿನ ನ್ಯಾಯಕ್ಕೆ ಅವಕಾಶವಿಲ್ಲ. ಅರಣ್ಯ ಮತ್ತು ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಗಣಿಗಾರಿಕೆಗೆ ಆರ್ಥಿಕವಾಗಿ, ಸುಸ್ಥಿರ ಅಭಿವೃದ್ಧಿ ದೃಷ್ಟಿಯಿಂದ ಮತ್ತು ಉದ್ಯೋಗ- ಆಹಾರ ನೆಲೆಯಿಂದಲೂ ಅನುಮತಿ ನೀಡುವುದು ಸರಿಯಲ್ಲ.

**ಟಿ.ಆರ್.ಚಂದ್ರಶೇಖರ,** ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

50 ವರ್ಷಗಳ ಬಳಿಕ ಚಂದಿರನ ಅಂಗಳಕ್ಕೆ ಮನುಷ್ಯನನ್ನು ಪುನಃ ಕಳುಹಿಸಿ ಮತ್ತೊಮ್ಮೆ ಇತಿಹಾಸ ಸೃಷ್ಟಿಸಲು ಅಮೆರಿಕ ಸನ್ನದ್ಧವಾಗಿದೆ. ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ನಾಸಾ) ಇದಕ್ಕಾಗಿ 'ಆರ್ಟೆಮಿಸ್ ಯೋಜನೆ'ಯನ್ನು ರೂಪಿಸಿದೆ. ಮೂರು ಹಂತಗಳ ಈ ಯೋಜನೆಯ ಮೊದಲ ಚರಣ ಆಗಸ್ಟ್ 29ರಿಂದ ಆರಂಭವಾಗಿದೆ. ಮೊದಲ ಯೋಜನೆ ಯಶಸ್ವಿಯಾದಲ್ಲಿ, ಚಂದ್ರನ ಅಂಗಳಕ್ಕೆ ಮತ್ತೆ ಮನುಷ್ಯನನ್ನು ಕಳುಹಿಸುವ ಯತ್ನ ಸಫಲವಾಗಲಿದೆ. 1972ರಲ್ಲಿ ಅಪೋಲೊ-17 ನೌಕೆಯ ಗಗನಯಾತ್ರಿಗಳು ಚಂದ್ರನ ಅಂಗಳದಲ್ಲಿ ಕೊನೆಯದಾಗಿ ಇಳಿದಿದ್ದರು. ಇದಾದ ಐವತ್ತು ವರ್ಷಗಳಲ್ಲಿ ಮತ್ತೆ ಅಂತಹ ಯೋಜನೆಯನ್ನು ನಾಸಾ ಕೈಗೆತ್ತಿಕೊಂಡಿದೆ

# 50 ವರ್ಷಗಳ ಬಳಿಕ ಮತ್ತೆ ಚಂದಿರನ ಜಪ

## ಏನಿದು ಆರ್ಟೆಮಿಸ್

ಒಟ್ಟು ಮೂರು ಹಂತಗಳಲ್ಲಿ ಯೋಜನೆ ಕಾರ್ಯರೂಪಕ್ಕೆ ಬರುತ್ತಿದೆ. ಮನುಷ್ಯನು ಚಂದ್ರನ ಮೇಲೆ ಇಳಿಯಲು 'ಆರ್ಟೆಮಿಸ್-1' ಯೋಜನೆ ವೇದಿಕೆ ಒದಗಿಸಲಿದೆ. ಅಂದರೆ, ಮೊದಲ ಚರಣದಲ್ಲಿ (ಆರ್ಟೆಮಿಸ್-1) ಗಗನಯಾತ್ರಿಗಳು ಪ್ರಯಾಣಿಸುತ್ತಿಲ್ಲ. ಆರ್ಟೆಮಿಸ್-2 ಯೋಜನೆಯು 2024ರ ಆರಂಭದಲ್ಲಿ ಕಾರ್ಯರೂಪಕ್ಕೆ ಬರಲಿದ್ದು, ಈ ನೌಕೆಯಲ್ಲಿ ಗಗನಯಾನಿಗಳು ಪ್ರಯಾಣಿಸಲಿದ್ದಾರೆ.



ಮೊದಲ ಯೋಜನೆಯಲ್ಲಿ ಮನುಷ್ಯನ ಬದಲಾಗಿ ಮನುಷ್ಯಾಕೃತಿಗಳನ್ನು ಕಳುಹಿಸಲಾಗುತ್ತಿದ್ದು, ಇವು ಕಂಪನ, ವಿಕಿರಣ ಹಾಗೂ ವೇಗವರ್ಧನೆಯನ್ನು ಎಷ್ಟರ ಮಟ್ಟಿಗೆ ತಾಳಿಕೊಳ್ಳುತ್ತವೆ ಎಂದು ಪರೀಕ್ಷಿಸಲಾಗುತ್ತದೆ. ಈವರೆಗೆ ನೋಡಿರದ ಚಂದ್ರನ ಮೇಲ್ಮೈ ಅನ್ನು ಅರಿಯುವುದು ಈ ಯೋಜನೆಯ ಉದ್ದೇಶವಾಗಿದ್ದು, ಇದಕ್ಕೆ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಲಾಗಿದೆ ಎಂದು ನಾಸಾ ತಿಳಿಸಿದೆ. 42 ದಿನಗಳ ಸುದೀರ್ಘ ಯೋಜನೆಯು ಅಂದುಕೊಂಡಂತೆ ಪೂರ್ಣಗೊಂಡಲ್ಲಿ, 2022ರ ಅಕ್ಟೋಬರ್ 10ರಂದು ನೌಕೆಯು ಚಂದ್ರನ ಅಂಗಳದಿಂದ ಕ್ಯಾಲಿಫೋರ್ನಿಯಾ ಸಮೀಪ ಕರಾವಳಿಗೆ ಬಂದಿಳಿಯಲಿದೆ.

## ಆರ್ಟೆಮಿಸ್-1 ಏಕೆ ಮಹತ್ವದ್ದು?

ಚಂದ್ರನತ್ತ ಪ್ರಯಾಣಿಸುವ ಬಾಹ್ಯಾಕಾಶ ಉಡ್ಡಯನ ವ್ಯವಸ್ಥೆ (ಎಸ್‌ಎಲ್‌ಎಸ್) ಹಾಗೂ ಒರಾಯನ್ ಕ್ಯಾಪ್ಸೂಲ್‌ಗಳ ಸಾಮರ್ಥ್ಯ, ಉಷ್ಣಾಂಶ ತಡೆದುಕೊಳ್ಳುವ ಗುಣ ಮೊದಲಾದ ಅಂಶಗಳನ್ನು ತಿಳಿದುಕೊಳ್ಳಲು ಆರ್ಟೆಮಿಸ್-1 ಯೋಜನೆ ನೆರವಾಗಲಿದೆ. ಚಂದ್ರನಿಂದ ಭೂಮಿಗೆ ವಾಪಸಾಗುವ ಪ್ರಾತ್ಯಕ್ಷಿಕೆಯನ್ನೂ ಇದು ಕೈಗೊಳ್ಳಲಿದೆ. ಇದರ ಫಲಿತಾಂಶಗಳು ಆರ್ಟೆಮಿಸ್-2 ಹಾಗೂ ಆರ್ಟೆಮಿಸ್-3 ಯೋಜನೆಗಳಲ್ಲಿ ಮಾನವನನ್ನು ಚಂದ್ರನ ಅಂಗಳಕ್ಕೆ ಕಳುಹಿಸಲು ಸ್ಪಷ್ಟ ತಳಹದಿ ಹಾಕಿಕೊಡುತ್ತವೆ.

## ಮೊದಲ ಬಾರಿ ಮಹಿಳೆ


2024ರಲ್ಲಿ ನಾಸಾ ಕೈಗೊಳ್ಳಲು ಉದ್ದೇಶಿಸಿರುವ ಆರ್ಟೆಮಿಸ್-2 ಯೋಜನೆಯಲ್ಲಿ ಚಂದ್ರನ ಅಂಗಳದಲ್ಲಿ ಇಳಿಯುವ ನೌಕೆಯಲ್ಲಿ ಮಹಿಳಾ ಗಗನಯಾತ್ರಿ ಇರಲಿದ್ದಾರೆ. ಈ ಮಹಿಳೆ ಕಪ್ಪು ವರ್ಣೀಯರಾಗಿರಲಿದ್ದಾರೆ ಎಂದು ನಾಸಾ ಹೇಳಿದ್ದು, ಅವರು ಯಾರು ಎಂದು ಬಹಿರಂಗಪಡಿಸಿಲ್ಲ. ಮಹಿಳೆ ಈವರೆಗೆ ಚಂದ್ರನ ಮೇಲೆ ಇಳಿದಿಲ್ಲ. ಯೋಜನೆಯ ಮುಂದಿನ ಹಂತದಲ್ಲಿ ಖಾಸಗಿ ಬಾಹ್ಯಾಕಾಶ ಸಂಸ್ಥೆಗಳು ನಾಸಾ ಜೊತೆ ಕೈಜೋಡಿಸಲಿವೆ.

## ಮಂಗಳ ಗ್ರಹದ ಕನಸಿಗೆ ಭೂಮಿಕೆ

ಮಂಗಳ ಗ್ರಹದ ಮೇಲೆ ಮನುಷ್ಯ ಕಾಲಿಡುವ ದೂರದೃಷ್ಟಿಯ ಯೋಜನೆಗೆ ಆರ್ಟೆಮಿಸ್-1 ಯೋಜನೆಯು ಭೂಮಿಕೆ ಹಾಕಿಕೊಡಲಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಇಲ್ಲಿ ಬಳಸಿರುವ ತಂತ್ರಜ್ಞಾನ ಹಾಗೂ ಉಪಕರಣಗಳ ಸಾಮರ್ಥ್ಯ ಮತ್ತು ಯೋಜನೆಯಲ್ಲಿ ದೊರಕುವ ಮಾಹಿತಿಗಳನ್ನು ಆಧರಿಸಿ, 2040ರಲ್ಲಿ ಮಂಗಳಗ್ರಹಕ್ಕೆ ಮಾನವನನ್ನು ಕಳುಹಿಸಲಾಗುವುದು. ಇದಕ್ಕೂ ಮುನ್ನ, ಚಂದ್ರನ ಮೇಲ್ಮೈನಲ್ಲಿ ಮನುಷ್ಯ ಉಳಿದುಕೊಂಡು ಅಲ್ಲಿ ಕೆಲಸ ಮಾಡಲು ಸಾಧ್ಯವಾದರೆ, ಮಂಗಳ ಗ್ರಹಕ್ಕೆ ಹಾರುವ ದೊಡ್ಡ ಕನಸಿಗೆ ಆನೆಬಲ ಸಿಕ್ಕಂತಾಗುತ್ತದೆ.

## ಅತ್ಯಂತ ಪ್ರಬಲ ರಾಕೆಟ್ ಎಸ್‌ಎಲ್‌ಎಸ್


ಎಸ್‌ಎಲ್‌ಎಸ್ ಈವರೆಗಿನ ಅತ್ಯಂತ ಪ್ರಬಲ ರಾಕೆಟ್ ಎನಿಸಿದೆ. ದ್ರವ ಜಲಜನಕದಿಂದ ಕಾರ್ಯನಿರ್ವಹಿಸುವ ನಾಲ್ಕು ಎಂಜಿನ್‌ಗಳು ಈ ರಾಕೆಟ್‌ನಲ್ಲಿವೆ. ಜತೆಗೆ ಎರಡು ದೊಡ್ಡ ಬೂಸ್ಟರ್ ಎಂಜಿನ್‌ಗಳನ್ನೂ ಈ ರಾಕೆಟ್ ಹೊಂದಿದೆ. ಹೀಗಾಗಿ ಗರಿಷ್ಠ ಶಕ್ತಿಯನ್ನು ಇದು ಉತ್ಪಾದಿಸಲಿದೆ




**1. ಭೂಮಿಯಿಂದ ಚಂದ್ರನತ್ತ** — **8-14** ದಿನ ಕಾರ್ಯಾಚರಣೆಯ ಅವಧಿ

**ಈ ಕಾರ್ಯಾಚರಣೆಯು ಮೂರು ಹಂತಗಳನ್ನು ಹೊಂದಿದೆ. ಭೂಮಿಯಿಂದ ಚಂದ್ರನಲ್ಲಿಗೆ ಹೋಗಿ, ಅಲ್ಲಿಂದ ವಾಪಸಾಗುವ ಪಯಣದಲ್ಲಿನ ಹಲವು ಹಂತಗಳಲ್ಲಿ ಎಸ್‌ಎಲ್‌ಎಸ್ ಮತ್ತು ಒರಾಯನ್ ಅನ್ನು ಪರೀಕ್ಷೆಗೆ ಒಳಪಡಿಸುವುದು ಈ ಕಾರ್ಯಾಚರಣೆಯ ಮುಖ್ಯ ಉದ್ದೇಶ**

**2. ಚಂದ್ರನ ಪ್ರದಕ್ಷಿಣೆ** — **6-19** ದಿನ ಕಾರ್ಯಾಚರಣೆಯ ಅವಧಿ





ಮನುಷ್ಯನನ್ನು ಸಾಗಿಸುವ ಸಾಮರ್ಥ್ಯವಿರುವ ನೌಕೆಯೊಂದು ಬಾಹ್ಯಾಕಾಶದಲ್ಲಿ ಇಷ್ಟು ದೂರ ಮತ್ತು ಇಷ್ಟು ವೇಗದಲ್ಲಿ ಸಾಗುವುದು ಇದೇ ಮೊದಲು. ಆ ವೇಗವನ್ನು ಸಾಧಿಸಲು ಸಾಧ್ಯವಾಗುತ್ತದೆಯೇ ಎಂಬುದನ್ನು ಪರಿಶೀಲಿಸುವುದು ಮತ್ತು ಸಂಭಾವ್ಯ ಅಪಾಯಗಳೇನು ಎಂಬುದನ್ನು ಪರಿಶೀಲಿಸುವುದು ಈ ಕಾರ್ಯಾಚರಣೆಯ ಪ್ರಧಾನ ಉದ್ದೇಶ

ಗಗನಯಾನಿಗಳ ಜೀವರಕ್ಷಕ ಸಾಧನಗಳ ಕಾರ್ಯನಿರ್ವಹಣೆ, ಒರಾಯನ್ ನೌಕೆಯ ನಿಯಂತ್ರಣ ವ್ಯವಸ್ಥೆಗಳು ಸರಿಯಾಗಿ ಕಾರ್ಯನಿರ್ವಹಿಸುತ್ತವೆಯೇ ಎಂಬುದನ್ನು ಈ ಹಂತದಲ್ಲಿ ಪರೀಕ್ಷಿಸಲಾಗುತ್ತದೆ

## ಉಡ್ಡಯನ ಮುಂದೂಡಿಕೆ

ಆಗಸ್ಟ್ 29ರಂದು ನಿಗದಿಯಾಗಿದ್ದ ಆರ್ಟೆಮಿಸ್-1 ನೌಕೆಯ ಉಡ್ಡಯನ ದಿನಾಂಕವನ್ನು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದೆ. ಅಮೆರಿಕದ ಕಾಲಮಾನದ ಪ್ರಕಾರ, ಸೋಮವಾರ ಬೆಳಿಗ್ಗೆ ಉಡ್ಡಯನಕ್ಕೆ ಕ್ಷಣಗಣನೆ ಆರಂಭವಾಗಿತ್ತು. ಕೊನೆಯ ಕ್ಷಣದಲ್ಲಿ ಇಂಧನ ಸೋರಿಕೆ ಹಾಗೂ ಎಂಜಿನ್‌ನಲ್ಲಿ ತೊಂದರೆ ಕಂಡುಬಂದಿದ್ದರಿಂದ ಉಡ್ಡಯನವನ್ನು ಮುಂದೂಡಲಾಯಿತು. ಒಂದೆರಡು ವಾರಗಳಲ್ಲಿ ಉಡ್ಡಯನ ದಿನಾಂಕವನ್ನು ನಾಸಾ ಪ್ರಕಟಿಸುವ ಸಾಧ್ಯತೆಯಿದೆ.

**3. ಮರು ಪ್ರಯಾಣ** — **9-19** ದಿನ ಕಾರ್ಯಾಚರಣೆಯ ಅವಧಿ




ಈ ಕ್ಯಾಪ್ಸೂಲ್ ಭೂಮಿಯ ವಾತಾವರಣವನ್ನು ಪ್ರವೇಶಿಸುವಾಗ, ಅದರ ವೇಗ ಪ್ರತಿ ಗಂಟೆಗೆ 40,000 ಕಿ.ಮೀ.ಗಿಂತಲೂ ಹೆಚ್ಚು ಇರಲಿದೆ. ಈ ಹಂತದಲ್ಲಿ ಕ್ಯಾಪ್ಸೂಲ್‌ನ ಮೇಲ್ಮೈನಲ್ಲಿ 2,800 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶವಿರಲಿದೆ. ಅಷ್ಟು ಉಷ್ಣಾಂಶವನ್ನು ತಡೆದುಕೊಳ್ಳಲು ಒರಾಯನ್ ಕ್ಯಾಪ್ಸೂಲ್‌ಗೆ ಸಾಧ್ಯವಾಗುತ್ತದೆಯೇ ಎಂಬುದನ್ನು ಪರಿಶೀಲಿಸುವುದೇ ಆರ್ಟೆಮಿಸ್-1 ಕಾರ್ಯಾಚರಣೆಯ ಪ್ರಮುಖ ಉದ್ದೇಶ

ಆಧಾರ: ನಾಸಾ, ರಾಯಿಟರ್ಸ್ ಪ್ರಜಾವಾಣಿ ಗ್ರಾಫಿಕ್ಸ್


---

**ಪ್ರಜಾವಾಣಿ ಪ್ರಜಾಧ್ವನಿ** — ಜನರ ಮನದಾಳದ ಮಾತು

ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಅಧ್ಯಕ್ಷರ ಆಯ್ಕೆ ಅವಿರೋಧವಾಗಿ ಆಗುವ ವಿಶ್ವಾಸ ಇದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ




---

**ವೇದವ್ಯಾಸರ ಶಿವಪುರಾಣಸಾರ**





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 212

## ದೇವತೆಗಳ ಹಿಂಸಿಸಿದ ತಾರಕ

ತಂದೆ-ತಾಯಿಯರ ಅನುಮತಿ ಪಡೆದ ತಾರಕ ಮಧುವನ ಎಂಬ ದಂಡಕಾರಣ್ಯದಲ್ಲಿ ಹಲವು ರೀತಿಯ ಕಠಿಣ ತಪವನ್ನು ಆಚರಿಸಿದ. ಅಗ್ನಿಯ ಮಧ್ಯದಲ್ಲಿ ನಿಂತು ನೂರು ವರ್ಷ, ಕೇವಲ ಕೈಯ್ಯೊಂದರಿಂದಲೇ ತಲೆಕೆಳಗಾಗಿ ನಿಂತು ನೂರು ವರ್ಷ, ಮರದ ರೆಂಬೆಯ ಸಹಾಯದಿಂದ ತಲೆಕೆಳಗಾಗಿ ಜೋತುಬಿದ್ದು, ಅದರ ಕೆಳಗೆ ಬೆಂಕಿ ಉರಿಸಿ ಹೊಗೆ ಸೇವಿಸುತ್ತಾ ನೂರು ವರ್ಷಗಳವರೆಗೆ ತಪಸ್ಸು ಮಾಡಿದ.

ಹೀಗೆ ಮಹಾಕಠಿಣವಾದ ತಪವನ್ನು ಆಚರಿಸುವಾಗ ತಾರಕನ ಶಿರಸ್ಸಿನಿಂದ ಪ್ರಕಾಶಮಾನವಾದ ಮಹಾ ತೇಜಸ್ಸು ಹೊರಟಿತು. ಅದು ಮಹಾಉಪದ್ರವನ್ನು ಉಂಟುಮಾಡುವಂತಿತ್ತು. ಆ ತೇಜಸ್ಸು ದೇವಲೋಕಗಳನ್ನು ತಾಕಿದಾಗ ಅವು ಕರಕಲಾದವು. ಇದನ್ನು ನೋಡಿ ದೇವತೆಗಳು ದುಃಖಪಟ್ಟರು. ಇಂದ್ರನಂತೂ ಭಯಭೀತನಾದ. ಇಂದ್ರಪದವಿಯನ್ನು ಕಸಿದುಕೊಳ್ಳುವ ದುರುದ್ದೇಶದಿಂದಲೇ ತಾರಕ ತಪವನ್ನ ಆಚರಿಸುತ್ತಿದ್ದಾನೆ ಎಂದು ಚಿಂತಿತನಾದ. ಅಕಾಲದಲ್ಲಿ ತಾರಕಾಸುರ ಇಡೀ ಬ್ರಹ್ಮಾಂಡವನ್ನೇ ನಾಶ ಮಾಡುವನೆಂದು ದೇವರ್ಷಿಗಳು ಆತಂಕಿತರಾದರು. ದೇವತೆಗಳು ಮತ್ತು ದೇವರ್ಷಿಗಳು ಬ್ರಹ್ಮನಿಗೆ ನಡೆಯುತ್ತಿರುವ ವೃತ್ತಾಂತವೆಲ್ಲವನ್ನು ನಿವೇದಿಸಿದರು. ಆಗ ಬ್ರಹ್ಮ ತಾರಕಾಸುರನು ತಪಸ್ಸು ಮಾಡುತ್ತಿರುವ ಸ್ಥಳಕ್ಕೆ ವರವನ್ನು ಕೊಡಲು ತೆರಳಿ, 'ಎಲೈ ಅಸುರನೇ, ಬೇಕಾದ ವರವನ್ನು ಕೇಳಿಕೊ' ಎಂದ. ತಾರಕ 'ಮೊದಲನೆಯದಾಗಿ ಈ ಜಗತ್ತಿನಲ್ಲಿ ನನಗಿಂತಲೂ ಬಲಿಷ್ಠನಾಗಿ ಯಾವ ಪುರುಷನೂ ಇರಬಾರದು. ಎರಡನೆಯದಾಗಿ ಶಿವನ ವೀರ್ಯದಿಂದ ಜನಿಸಿದ ಕುಮಾರ ಸೇನಾಪತಿಯಾಗಿ ಬಂದು ನನ್ನ ಮೇಲೆ ಅಸ್ತ್ರವನ್ನು ಪ್ರಯೋಗಿಸಿದರೆ ಮಾತ್ರ ನನಗೆ ಮರಣವಾಗಬೇಕು' ಎಂದು ಕೋರಿದ.

ಬ್ರಹ್ಮ 'ತಥಾಸ್ತು' ಎಂದಾಗ ಆ ದೈತ್ಯ ತಾರಕಾಸುರ ತುಂಬಾ ಸಂತೋಷದಿಂದ ಶೋಣಿತಪುರ ಎಂಬ ತನ್ನ ರಾಜಧಾನಿಗೆ ಮರಳಿದ. ಅಲ್ಲಿ ಬ್ರಹ್ಮನ ಆಜ್ಞೆಯಂತೆ ದೈತ್ಯಗುರುವಾದ ಶುಕ್ರಾಚಾರ್ಯ ತನ್ನ ಶಿಷ್ಯ ತಾರಕಾಸುರನನ್ನು ಮೂರು ಲೋಕಗಳಿಗೂ ಚಕ್ರವರ್ತಿಯಾಗಿ ಪಟ್ಟಾಭಿಷೇಕ ಮಾಡಿದ. ತಾರಕಾಸುರ ಮೂರುಲೋಕಗಳಿಗೂ ಒಡೆಯನಾಗಿ ದೇವತೆಗಳು, ಋಷಿಗಳು ಮತ್ತು ಜನರನ್ನು ಪೀಡಿಸತೊಡಗಿದ. ಇಂದ್ರ ಮೊದಲಾದ ಲೋಕಪಾಲರನ್ನು ಹೆದರಿಸಿ, ಅವರಿಂದ ಸಂಪದ್ಭರಿತ ರತ್ನಗಳನ್ನು ಕಿತ್ತುಕೊಂಡ. ತಾರಕನಿಗೆ ಹೆದರಿದ ಇಂದ್ರ ತನ್ನ ಪಟ್ಟದ ಆನೆಯಾದ ಐರಾವತವನ್ನು ಕೊಟ್ಟ. ಐಶ್ವರ್ಯಕ್ಕೆ ಅಧಿಪತಿಯಾದ ಕುಬೇರ ತನ್ನ ನವನಿಧಿಗಳನ್ನು ಕೊಟ್ಟು ತಾರಕನಿಗೆ ಶರಣು ಎಂದ.

ವರುಣ ತನ್ನ ಬಳಿ ಇದ್ದ ಉತ್ತಮವಾದ ಬಿಳಿಯ ಕುದುರೆಗಳನ್ನು ಕೊಟ್ಟು ಕೈಮುಗಿದ. ದೇವಋಷಿಗಳು ಕಾಮಧೇನುವನ್ನು ಕೊಟ್ಟರೆ, ಸೂರ್ಯನು ಉಚ್ಚೈಃಶ್ರವಸ್ಸೆಂಬ ದಿವ್ಯಾಶ್ವವನ್ನು ಕೊಟ್ಟ. ಸಮುದ್ರಗಳೂ ಭಯದಿಂದ ತಾರಕನಿಗೆ ತಮ್ಮಲ್ಲಿರುವ ರತ್ನಗಳನ್ನು ಕೊಟ್ಟು ಕೈಮುಗಿದವು. ದೇವತೆಗಳು ಮತ್ತು ಪಿತೃದೇವತೆಗಳ ಉತ್ತಮವಾದ ವಸ್ತುಗಳೆಲ್ಲವನ್ನೂ ದುರಾತ್ಮನಾದ ತಾರಕ ಕಿತ್ತುಕೊಂಡ. ಕಂಡ ಕಂಡ ಬೆಲೆಬಾಳುವ ವಸ್ತುಗಳೆಲ್ಲವನ್ನು ತಾರಕಾಸುರ ದೋಚಿದ್ದರಿಂದ ಮೂರು ಲೋಕಗಳೂ ನಿಸ್ಸಾರವಾದವು.

ಸೂರ್ಯ ತನ್ನ ಶಾಖ ತಾಕದಂತೆ ತಾರಕಾಸುರನಿಗೆ ಪ್ರಕಾಶಿಸುತ್ತಿದ್ದರೆ, ಚಂದ್ರ ತಂಪಾದ ಬೆಳದಿಂಗಳನ್ನು ಚೆಲ್ಲುತ್ತಿದ್ದ. ವಾಯು ಸಾವಕಾಶವಾಗಿ ಬೀಸುತ್ತಿದ್ದ. ಹೀಗೆ ಮೂರು ಲೋಕಗಳನ್ನೂ ತನ್ನ ವಶಮಾಡಿಕೊಂಡ ತಾರಕ ತಾನೇ ಇಂದ್ರನಾದ. ದೇವತೆಗಳೆಲ್ಲರನ್ನೂ ಸ್ವರ್ಗದಿಂದ ಓಡಿಸಿ, ಅವರ ಸ್ಥಾನದಲ್ಲಿ ದೈತ್ಯರನ್ನು ನಿಯಮಿಸಿದ.

ಹೀಗೆ ತಾರಕಾಸುರನಿಂದ ಪೀಡಿಸಲ್ಪಟ್ಟ ದೇವತೆಗಳು ಕಾಪಾಡುವವರಿಲ್ಲದೆ, ಬ್ರಹ್ಮನಿಗೆ ಮೊರೆ ಹೋದರು ಎಂಬಲ್ಲಿಗೆ ಶ್ರೀ ಶಿವಮಹಾಪುರಾಣದ ಪಾರ್ವತೀಖಂಡದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯುತ್ತದೆ. •

---

**ಗುಂಡಣ್ಣ**




---

**ಬೆರಗಿನ ಬೆಳಕು** — ಗುರುರಾಜ ಕರಜಗಿ



## ಗಾಣದಲ್ಲಿ ಅರೆದು ಬಂದ ಜ್ಞಾನ

ಸಮತೆ ಸಂಯಮಶಮಗಳಿಂ ಭವವನೋಲಗಿಸೆ |
ಸಮನಿಪುದು ಮತಿಯ ಹದವಾತ್ಮಾನುಭವಕೆ ||
ಮಮತೆಯಳಿವಿಂ ಜ್ಞಾನ; ಪಾಂಡಿತ್ಯದಿಂದಲ್ಲ |
ಶ್ರಮಿಸಿಳೆಯ ಗಾಣದಲಿ - ಮಂಕುತಿಮ್ಮ || 704 ||

ಪದ-ಅರ್ಥ: ಸಮತೆ ಸಂಯಮಶಮಗಳಿಂ = ಸಮತೆ + ಸಂಯಮ + ಶಮಗಳಿಂದ, ಭವವನೋಲಗಿಸೆ = ಭವವನು(ಬದುಕನ್ನು) + ಓಲಗಿಸೆ(ಸೇವಿಸೆ), ಸಮನಿಪುದು = ಸಮನಾಗಿಸುವುದು, ಹದವಾತ್ಮಾನುಭವಕೆ = ಹದವು + ಆತ್ಮಾನುಭವಕೆ, ಮಮತೆಯಳಿವಿಂ = ಮಮತೆಯ + ಅಳಿವಿಂ(ಅಳಿವಿನಿಂದ), ಶ್ರಮಿಸಿಳೆಯ = ಶ್ರಮಿಸು = ಇಳೆಯ

**ವಾಚ್ಯಾರ್ಥ:** ಸಮತೆ, ಸಂಯಮ ಮತ್ತು ಶಾಂತಿ ಬದುಕನ್ನು ನಡೆಸಿದರೆ ಬುದ್ಧಿ ಸಮದರ್ಶಿಯಾಗುತ್ತದೆ. ಅದು ಆತ್ಮಾನುಭವಕ್ಕೆ ಸಹಕಾರಿಯಾಗುತ್ತದೆ. ಮಮತೆಯ ನಾಶದಿಂದ ಜ್ಞಾನವೇ ಹೊರತು ಪಾಂಡಿತ್ಯದಿಂದಲ್ಲ. ಈ ಮಮತಾನಾಶಕ್ಕೆ ಪ್ರಪಂಚವೆಂಬ ಗಾಣದಲ್ಲಿ ಶ್ರಮಿಸು.

**ವಿವರಣೆ:** ಮಹಾಭಾರತದ ಅರಣ್ಯಪರ್ವದಲ್ಲಿ ಬರುವ ಒಂದು ಮುಖ್ಯ ಪ್ರಸಂಗ ಯಕ್ಷಪ್ರಶ್ನೆ. ಧರ್ಮರಾಜನನ್ನು ಅನೇಕ ಪ್ರಶ್ನೆಗಳಿಂದ ಪರೀಕ್ಷಿಸುತ್ತಾನೆ ಯಮಧರ್ಮ. ಸುಮಾರು ನೂರಿಪ್ಪತ್ತು ಪ್ರಶ್ನೆಗಳನ್ನೊಡ್ಡಿ, ಬದುಕಿನ ನೆಲೆಗಳನ್ನು, ಧರ್ಮಸೂಕ್ಷ್ಮಗಳನ್ನು ಕುರಿತಾದ ವಿಷಯಗಳ ಬಗ್ಗೆ ಅವನ ವಿಚಾರಗಳನ್ನು ಹೊರತೆಗೆಯುತ್ತಾನೆ. ಆತ್ಮದ ಅನುಭವಕ್ಕೆ ಕಾರಣವಾದ ಸ್ವಭಾವಗಳನ್ನು ಕೇಳಿದಾಗ, ಧರ್ಮರಾಜ ಹೇಳುವುದು ಕಗ್ಗ ತಿಳಿಸಿದ ಗುಣಗಳನ್ನೇ-ಸಮತೆ, ಸಂಯಮ ಮತ್ತು ಶಾಂತಿಗಳು. ಇವೆಲ್ಲ ನಮಗೆ ಸಿದ್ಧಿಸುವುದು ಸಮತ್ವವನ್ನು ಹೊಂದಿದ ಬುದ್ಧಿಯಿಂದ. ಇಲ್ಲಿ 'ಬುದ್ಧಿ' ಎಂಬ ಮಾತು ವಿಶೇಷ ಅರ್ಥದಲ್ಲಿ ಬಂದದ್ದು. ಬುದ್ಧಿ ಅಂತರಂಗದ ಉಪಕರಣಗಳಲ್ಲಿ ಒಂದಲ್ಲ. ಮನಸ್ಸು, ಚಿತ್ತ, ಅಹಂಕಾರ, ಸ್ಮೃತಿ, ಧೃತಿ, ಆಕೂತಿ ಇಂಥ ಅಂತಃಕರಣ ವೃತ್ತಿಯಲ್ಲ. ಇಲ್ಲಿ ಬುದ್ಧಿ ಎಂದರೆ ಬುದ್ಧಿಕ್ರಿಯೆ. ಅದೇ ತತ್ವವಿವೇಕ. ಇದಕ್ಕೆ ಬೇಕಾದದ್ದು ಶಮಾದಿಷಟ್ಕಸಂಪತ್ತು ಎಂದು ಭಗವದ್ಗೀತೆ ಹೇಳುತ್ತದೆ. ಆ ಆರು ಸಂಪತ್ತುಗಳು ಶಮ, ದಮ, ಉಪರತಿ, ತಿತಿಕ್ಷಾ, ಶ್ರದ್ಧಾ ಮತ್ತು ಸಮಾಧಾನ. ಶಮವೆಂದರೆ ಬೇರೆ ಚಿಂತೆಗಳನ್ನಿಟ್ಟುಕೊಳ್ಳದೆ ಅಂತರಿಂದ್ರಿಯಗಳನ್ನು ಹದ್ದಿನಲ್ಲಿಡುವುದು; ಮನಸ್ಸನ್ನು ಸ್ವಸ್ಥವಾಗಿರಿಸಿಕೊಳ್ಳುವುದು. ದಮವೆಂದರೆ ಬಾಹ್ಯ ಇಂದ್ರಿಯಗಳನ್ನು ನಿಗ್ರಹಿಸುವುದು. ಶಮ, ದಮಗಳೊಂದಿಗೆ ತಿತಿಕ್ಷೆಯೂ ಮುಖ್ಯ. ತಿತಿಕ್ಷೆಯೆಂದರೆ ಲಾಭ-ನಷ್ಟ, ಸುಖ-ದುಃಖ, ರಾಗ-ದ್ವೇಷ ಮುಂತಾದ ದ್ವಂದ್ವಗಳಿಂದ ಮನಸ್ಸನ್ನು ಗಾಸಿಗೊಳಿಸಿಗೊಳ್ಳದೆ, ಸಮಸ್ಥಿತಿಯಲ್ಲಿಟ್ಟುಕೊಳ್ಳುವುದು. ಈ ಗುಣಗಳು ಬದುಕಿನಲ್ಲಿ ಇಳಿದಾಗ ಮಮತೆಯ ಹಾವಳಿ ಕಡಿಮೆಯಾಗುತ್ತದೆ. ಮಮತಾನಾಶದಿಂದ ಜ್ಞಾನ. ಜ್ಞಾನ ದೊರಕುವುದು ಪುಸ್ತಕದ ಓದಿನಿಂದಲ್ಲ. ಅದು ಬರುವುದು ಅನುಭವದಿಂದ. ಆ ಅನುಭವ ದೊರಕುವುದು ಪ್ರಪಂಚದ ಕಷ್ಟಗಳ, ಇಕ್ಕಟ್ಟು, ಬಿಕ್ಕಟ್ಟುಗಳ ಗಾಣದಲ್ಲಿ ಸಿಕ್ಕು ಶುದ್ಧನಾಗಿ ಹೊರಬಂದಾಗ. ಲೋಕದ ಗಾಣದಲ್ಲಿ ಅರೆಯಲ್ಪಟ್ಟಾಗ, ಅನವಶ್ಯವಾದ ಹೊಟ್ಟು, ಸಿಪ್ಪೆ ಕಳೆದುಹೋಗಿ ಜೀವಪೋಷಕವಾದ ಎಣ್ಣೆ ದೊರೆವಂತೆ, ಮನುಷ್ಯನ ಬದುಕಿನಲ್ಲಿ ಬುದ್ಧಿಯ ಸಮತೆ ಬರುತ್ತದೆ. ಅದರಿಂದ ಆತ್ಮಾನುಭವಕೆ ದಾರಿ ನೇರ.

---

**ದಿನ ಭವಿಷ್ಯ** — ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಆಗಸ್ಟ್ 30, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ:** ಭಾದ್ರಪದ ಶುಕ್ಲ ತೃತೀಯ ಗಂ. 15-34 ನಕ್ಷತ್ರ: ಹಸ್ತ ಗಂ. 23-49 ಯೋಗ: ಶುಭ ಗಂ. 24-04, ಕರಣ: ಗರಜೆ ಗಂ. 15-34, ಸಿಂಹ ಮಾಸದ 13 ನೇ ದಿನ. ರಾಹುಕಾಲ : ಸಾಯಂಕಾಲ 03:00 – 04:30 ಸೂರ್ಯೋದಯ : 06-23 ಸೂರ್ಯಾಸ್ತ : 06-40 ಮುಸ್ಲಿಂ ದಿನಾಂಕ : 02 ಸಫರ್,
**ದಿನ ವಿಶೇಷ :** ಹರಿತಾಲಿಕಾ ಗೌರೀ ತೃತೀಯ, ಸಾಮವೇದ ಉಪಾಕರ್ಮ
**ಅದೃಷ್ಟ ಸಂಖ್ಯೆ :** 1, 5

**ಮೇಷ:** ಮುಖ್ಯವಾದ ಕೆಲಸವೊಂದಕ್ಕೆ ಸಲಹೆ ಪಡೆಯಲು ಪ್ರಸಿದ್ಧ ವ್ಯಕ್ತಿಯೊಬ್ಬರನ್ನು ಸಂಪರ್ಕಿಸುವ ಕಾರ್ಯದಲ್ಲಿ ತೊಡಗುವಿರಿ. ಕಾರ್ಯಗಳಿಂದ ಆಯಾಸ ಹೊಂದಿದ ನಿಮಗೆ ಇಂದಿನ ಸ್ವಲ್ಪ ಮಟ್ಟಿನ ಬಿಡುವು ಆರಾಮವೆನಿಸುವುದು.

**ವೃಷಭ:** ಸ್ವಂತಿಕೆಯನ್ನು ಬಿಟ್ಟು ಸಂದರ್ಭಕ್ಕನುಗುಣವಾಗಿ ವರ್ತಿಸುವ ತೀರ್ಮಾನ ಕೈಗೊಳ್ಳುವುದು ಅನಿವಾರ್ಯವಾಗಲಿದೆ. ಸ್ನೇಹಿತರೊಂದಿಗಿನ ಹರಟೆ ಮನಸ್ಸನ್ನು ಹಗುರಗೊಳಿಸಲು ಕಾರಣವಾಗುವುದು.

**ಮಿಥುನ:** ನಿಮ್ಮ ದಿನಚರಿಯಲ್ಲಿ ನಡೆಯುತ್ತಿರುವ ತಪ್ಪುಗಳ ಬಗ್ಗೆ ಮನವರಿಕೆ ಆಗುವುದು. ನಿಮ್ಮ ನೂತನ ಯೋಜನೆಗಳಿಗೆ ಹಣಕಾಸಿನ ಕೊರತೆ ಇರುವುದಿಲ್ಲ. ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು.

**ಕರ್ಕಾಟಕ:** ಕೌಟುಂಬಿಕವಾಗಿ ನಿಮ್ಮ ಕುರಿತಾದ ಪ್ರಮುಖ ವಿಷಯವೊಂದು ತಿಳಿದು ಬರಲಿದೆ. ಕುಟುಂಬ ಸದಸ್ಯರಲ್ಲಿ ಮೂಡಿರುವ ಮನಸ್ತಾಪವನ್ನು ಮುಕ್ತ ಮನಸ್ಸಿನ ಮಾತುಕತೆಗಳಿಂದ ಸರಿಪಡಿಸಿಕೊಳ್ಳಬಹುದು.

**ಸಿಂಹ:** ನಿಮ್ಮ ಪೂರ್ವ ನಿಯೋಜಿತ ಕೆಲಸಗಳು ಉತ್ತಮವಾಗಿ ನೆರವೇರುವುದರಿಂದ ನೆಮ್ಮದಿ ಇರುವುದು. ಇಂದಿನ ರಾಜಕೀಯ ಸನ್ನಿವೇಶಗಳು ಅನುಕೂಲವಾಗಿರುವುದು. ಅನಗತ್ಯ ಚಿಂತೆ ಮೈಮೇಲೆ ಎಳೆದುಕೊಳ್ಳಬೇಡಿ.

**ಕನ್ಯಾ:** ಬಟ್ಟೆ ವ್ಯಾಪಾರಿಗಳು ರಿಯಾಯಿತಿ ಮಾರಾಟದಂತಹ ತಂತ್ರಗಾರಿಕೆಯನ್ನು ಅಳವಡಿಸಿಕೊಳ್ಳುವುದರಿಂದ ಜನಪ್ರಿಯತೆ ಸಂಪಾದಿಸಬಹುದು. ಮನೆಯಲ್ಲಿ ನಡೆಯಬೇಕಾಗಿರುವ ಶುಭ ಕಾರ್ಯದ ಬಗ್ಗೆ ಮಾತುಕತೆ ನಡೆಸಿ.

**ತುಲಾ:** ಹಿರಿಯರ ಮಾತಿನಂತೆ ನಡೆದುಕೊಳ್ಳುವ ನಿರ್ಧಾರ ಶುಭಪ್ರದವಾಗುತ್ತದೆ. ಆಫೀಸಿನಲ್ಲಿ ಕೆಲಸ ಕಾರ್ಯಗಳು ಹೆಚ್ಚೆನಿಸುವುದು. ಪ್ರಯಾಣದಲ್ಲಿ ಎಚ್ಚರಿಕೆಯಿಂದ ಇರಿ. ಮಕ್ಕಳಿಗಾಗಿ ವಸ್ತುಗಳ ಖರೀದಿ ನಡೆಯುವುದು.

**ವೃಶ್ಚಿಕ:** ಏಕಾಗ್ರತೆಯ ಕೊರತೆಯಿಂದ ಬರಲಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವ ವಿಚಾರದಲ್ಲಿ ವಿಫಲರಾಗುವಿರಿ. ಆಹಾರ ಪದ್ಧತಿಯಲ್ಲಿ ಸರಿಯಾದ ಕ್ರಮ-ನಿಯಮ ಪಾಲಿಸಿ.

**ಧನು:** ಗೌರವಕ್ಕೆ ಚ್ಯುತಿ ಬರುವಂತಹ ಅನಿವಾರ್ಯದ ಸಂದರ್ಭಕ್ಕೆ ಸರಿಯಾಗಿ ಒದಗುವ ಧನಾರ್ಜನೆ ಆಶ್ಚರ್ಯವೆನಿಸುವುದು. ನಿಮ್ಮ ಪ್ರಾಮಾಣಿಕತನದಿಂದಾಗಿ ಹಾಗೂ ನೇರ ವ್ಯಕ್ತಿತ್ವದಿಂದಾಗಿ ಒಳ್ಳೆಯ ಸ್ಥಾನಮಾನ ಸಿಗಲಿದೆ.

**ಮಕರ:** ನಿಮ್ಮ ಆಯ್ಕೆ ಸರಿಯಾಗಿದ್ದು ಕೆಲಸಗಳನ್ನು ನಿರ್ಭಯವಾಗಿ ಮಾಡಿ ಮುಗಿಸುವಲ್ಲಿ ಯಶಸ್ವಿಯಾಗುವಿರಿ. ನೂತನ ವಸ್ತ್ರ ಖರೀದಿಯ ಯೋಗವಿದೆ. ಮಕ್ಕಳ ಬಗ್ಗೆ ಹೆಚ್ಚಿನ ಜವಾಬ್ದಾರಿ ಇರಲಿ. ಸಾಂಸಾರಿಕ ಸಂತೋಷ ಹೆಚ್ಚಾಗುತ್ತದೆ.

**ಕುಂಭ:** ಈ ದಿನ ಸಣ್ಣಪುಟ್ಟ ಅಡಚಣೆಗಳು ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಯನ್ನು ಉಂಟುಮಾಡುವುದು. ಪತ್ರ ವ್ಯವಹಾರದಲ್ಲಿ ಎಚ್ಚರಿಕೆ ವಹಿಸಿದಲ್ಲಿ ಕಾರ್ಯ ಸಫಲವಾಗುವುದು.


**ಮೀನ:** ನಿಮ್ಮ ಮೇಲಧಿಕಾರಿಗಳಿಂದ ಯಾವುದೇ ವಿಚಾರವನ್ನು ಮುಚ್ಚಿಡುವ ಪ್ರಯತ್ನ ಸರಿಯಲ್ಲ. ಸಾಧ್ಯತೆಗಳನ್ನು ಅರಿತು ವ್ಯವಹಾರದಲ್ಲಿ ಮುಂದುವರಿಯಿರಿ. ಸದ್ಯಕ್ಕೆ ವೃತ್ತಿಯ ಬದಲಾವಣೆ ಯೋಚನೆ ಸರಿಯಲ್ಲ.

---

**ಪದಬಂಧ 5065** – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಮಾಲೆ ಧರಿಸಿಯೇ ಸುತ್ತಾಡುವ ಸ್ವಭಾವದವನು (4)
3.ಹೀಗೆ ವಾಸನೆ ನೋಡು (4)
5.ಜನನಿ ನುಡಿದಿರುವ ಸತ್ಯ (2)
7.ಈತ ತಿರುಪೆ ಬೇಡುವವನು (3)
8.ಹಂತಕನೇರಿದ ಮೆಟ್ಟಿಲು (2)
9.ಗಂಜಲದಲ್ಲಿರುವ ನೀರು (2)
10.ಸುರನ ಹತ್ತಿರವೇ ರಾಕ್ಷಸನಿದ್ದಾನಲ್ಲಾ! (3)
12.ಕರ್ತಾರನ ಕೈಯಿದು (2)
14.ಮನುಷ್ಯನ ಆಕಾರ (4)
15.ಒಬ್ಬೊಬ್ಬರಿಗೆ ಸಂಬಂಧಪಟ್ಟದ್ದು (4)

**ಮೇಲಿಂದ ಕೆಳಕ್ಕೆ**
1.ಸ್ಮರಣ ಶಕ್ತಿ ಚನ್ನಾಗಿರುವವನು (4)
2.ಕನ್ನಡಿಗ ಪಡೆದುಕೊಂಡಿರುವ ರಿಬೇಟ್ (4)
3.ಪರಲೋಕಕ್ಕೆ ಸಂಬಂಧಿಸಿದ್ದು (4)
4.ಚನ್ನಾಗಿ ಕಾಪಾಡಿದುದು (4)
6.ಜಲದೊಳಗಿರುವ ಕ್ಲಿಷ್ಟತೆ (3)
8.ಆತಂಕದಿಂದಿರುವ ಕೊಲೆಗಾರ (3)
9.ದಪ್ಪ ನೂಲಿರುವ ನೆಲ ಹಾಸು (4)
10.ಬುದ್ಧಿ ಇಟ್ಟುಕೊಂಡೇ ನೀಡಿದ ಒಪ್ಪಿಗೆ (4)
11.ರಾತ್ರಿಯ ಒಡೆಯನಿವನು (4)
13.ಬೆಲೆಬಾಳುವ ಮಣಿಗಳನ್ನೊಳಗೊಂಡಿರುವ ಸಮುದ್ರ (4)




**5064ನೇ ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ:**
2.ಮಾರ್ಗದರ್ಶಕ 4.ಅಧಮ
5.ಪಿಶಾಚಿ 9.ಯತ್ನ
10.ದಬ್ಬಣ 11.ಕೋಪ
12.ನನಸು 14.ಕಾದಾಟ
15.ಮರ್ಮಭೇದಕ

**ಮೇಲಿಂದ ಕೆಳಕ್ಕೆ:**
1.ಮದ 2.ಮಾಮ
3.ಕಪಿ 4.ಅಭಯದಾನ
6.ಚಿತ್ತಪಲ್ಲಟ 7.ಛೇದನ
8.ಬಾಣಸಿ 13.ಸುಮ
14.ಕಾಕ 16.ಭೇಟಿ

**ಸುಡೊಕು 5451**

| | | | | | | | | |
|---|---|---|---|---|---|---|---|---|
| | 3 | | 6 | | 2 | | 4 | |
| 6 | | 2 | | | | 8 | | 3 |
| | 4 | | 3 | | 9 | | 1 | |
| 4 | | 8 | | | 5 | | 2 | |
| | | | | | | 4 | | 7 |
| 2 | | 5 | 4 | | | | 6 | |
| | | | 8 | | 3 | | 9 | |
| 7 | | 3 | | | | 6 | | 5 |
| | 8 | | 7 | | 6 | | 3 | 2 |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

**5450 ಸುಡೊಕು**

| | | | | | | | | |
|---|---|---|---|---|---|---|---|---|
| 6 | 8 | 4 | 5 | 7 | 1 | 2 | 9 | 3 |
| 9 | 7 | 1 | 2 | 4 | 3 | 6 | 5 | 8 |
| 5 | 2 | 3 | 8 | 6 | 9 | 1 | 4 | 7 |
| 2 | 9 | 5 | 4 | 1 | 7 | 3 | 8 | 6 |
| 1 | 6 | 8 | 3 | 9 | 5 | 4 | 7 | 2 |
| 3 | 4 | 7 | 6 | 2 | 8 | 5 | 1 | 9 |
| 4 | 1 | 6 | 9 | 8 | 2 | 7 | 3 | 5 |
| 8 | 3 | 2 | 7 | 5 | 4 | 9 | 6 | 1 |
| 7 | 5 | 9 | 1 | 3 | 6 | 8 | 2 | 4 |

# ಮಂಗಲಮಯ ಬದುಕಿಗಾಗಿ ಗೌರೀಹಬ್ಬ

• ನವೀನ ಗಂಗೋತ್ರಿ

ಇಂದು ಗೌರೀಹಬ್ಬ



ಜಗತ್ತಿನ ಬಹುದೇವತಾರಾಧಕ ಸಂಸ್ಕೃತಿಗಳಲ್ಲಿ ಸಾಮಾನ್ಯವಾಗಿ ಮಾತೃದೇವತೆಯ ಆರಾಧನೆ ಕಂಡುಬರುತ್ತದೆ. ಭಾರತದಲ್ಲಿ ಮಾತೃದೇವತೆ ಅಥವಾ ಶಕ್ತಿಯ ಆರಾಧನೆ ಅನುಸ್ಯೂತವಾಗಿ ನಡೆದುಕೊಂಡು ಬಂದಿದೆ. ಪ್ರತಿ ಮಾಸದಲ್ಲಿಯೂ ಒಂದಿಲ್ಲೊಂದು ಬಗೆಯಲ್ಲಿ ದೇವಿಯ ಒಂದಿಲ್ಲೊಂದು ಪ್ರಕಾರದ ಮೂಲಕ ಶಕ್ತಿಯನ್ನು ಆರಾಧಿಸುವವರು ನಾವು.

ಭಾದ್ರಪದ ಮಾಸದ ಶುಕ್ಲಪಕ್ಷದ ತೃತೀಯಾ ತಿಥಿಯಂದು, ಅಂದರೆ ಗಣೇಶನು ಭೂಮಿಗೆ ಬರುವ ಒಂದು ದಿನ ಮುಂಚೆ ಗೌರೀ ಹಬ್ಬವನ್ನು ಅಥವಾ ಸ್ವರ್ಣಗೌರೀ ವ್ರತವನ್ನು ಆಚರಿಸುತ್ತೇವೆ. ದಕ್ಷಿಣದಲ್ಲಿ ಬಹುಮಟ್ಟಿಗೆ ಗೌರೀತದಿಗೆ, ಸ್ವರ್ಣಗೌರೀ ವ್ರತ, ಗೌರೀ ಹಬ್ಬವೆಂದು ಆಚರಣೆಗೊಳ್ಳುವ ಈ ಹಬ್ಬ ಉತ್ತರದ ಬಿಹಾರ, ರಾಜಸ್ಥಾನ, ಉತ್ತರಪ್ರದೇಶ ಮತ್ತು ಜಾರ್ಖಂಡ್‌ಗಳಲ್ಲಿ 'ಹರ್ತಾಲಿಕಾ ತೀಜ್' ಎಂದು ಆಚರಣೆಗೊಳ್ಳುತ್ತದೆ.

ಸಂಸ್ಕೃತದಲ್ಲಿ 'ಗೌರ' ಎಂಬ ಶಬ್ದಕ್ಕೆ ಬಿಳುಪು ಬಣ್ಣ ಎಂದರ್ಥ. ಗೌರಶಬ್ದದ ಸ್ತ್ರೀಲಿಂಗ ರೂಪವೇ 'ಗೌರೀ' ಎಂದಾಗುತ್ತದೆ. ಹಿಮವಂತನ ಮಗಳಾದ ಪಾರ್ವತೀದೇವಿ ಬಿಳಿಯ ಮೈವರ್ಣದವಳಾದ್ದರಿಂದ ಅವಳಿಗೆ 'ಗೌರೀ' ಎಂಬ ಹೆಸರು. ಇದು ಬಿಳಿಬಣ್ಣದ ಕುರಿತಾದ ಭಾರತೀಯ ಮನಸ್ಸಿನ ಆಗ್ರಹ ಎಂದೇನೂ ಭಾವಿಸಬೇಕಿಲ್ಲ, ಏಕೆಂದರೆ ಇದೇ ಶಕ್ತಿಯ ಇನ್ನೊಂದು ರೂಪವಾಗಿರುವ ಕಾಳಿಕಾದೇವಿ ಕಪ್ಪುಬಣ್ಣದವಳು. ದೇವಿಯ ಪರಮಸೌಮ್ಯರೂಪಗಳಾದ ಲಕ್ಷ್ಮೀ, ಶಾರದಾ, ಗೌರೀ ಇತ್ಯಾದಿಗಳನ್ನೂ, ಪರಮೋಗ್ರವಾದ ಕಾಳಿಕಾ, ಚಂಡಿಕಾ, ಚಾಮುಂಡಾ, ಛಿನ್ನಮಸ್ತಾ ಮೊದಲಾದ ರೂಪಗಳನ್ನೂ ಭಾರತೀಯರಾದ ನಾವು ಪೂಜಿಸುತ್ತೇವೆ; ಇಲ್ಲಿ ಮೈಬಣ್ಣದ ಕುರಿತಾದ ಆಗ್ರಹಗಳೇನಿಲ್ಲ. ದುರ್ಗೆಯ ಮೂರ್ತಿರಹಸ್ಯದಲ್ಲಿ 'ಉಮಾ ಗೌರೀ ಸತೀ ಚಂಡೀ ಕಾಲಿಕಾ ಸಾ ಚ ಪಾರ್ವತೀ' ಎಂಬ ಶ್ಲೋಕದಲ್ಲಿ ಎಲ್ಲರೂಪಗಳೂ ಅವಳವೇ ಆಗಿವೆ ಎಂದು ಹೇಳಲಾಗಿದೆ.

ಮಂಗಳಕರವಾದ ಗೌರೀವ್ರತವನ್ನು ಬಹುತೇಕ ಹೆಂಗಳೆಯರೇ ಆಚರಿಸುವುದು ಪದ್ಧತಿ. ಅದರಂತೆ ಭೌತಿಕ ಬದುಕಿನ, ಅದರಲ್ಲಿಯೂ ಸಾಂಸಾರಿಕ ಜೀವನದ ಸಕಲ ಸೌಭಾಗ್ಯವನ್ನೂ ಉಂಟುಮಾಡುವ ವ್ರತಗಳಲ್ಲಿ ಗೌರೀಹಬ್ಬಕ್ಕೆ ಅಗ್ರಸ್ಥಾನ. ನಮ್ಮ ಪರಂಪರೆಯಲ್ಲಿ ಪೂಜಿತವಾಗುವ ದೇವರುಗಳ ಸಾಲಿನಲ್ಲಿ ಶಿವನದು ತುಂಬಿದ ಸಂಸಾರ. ಅವ, ಅವನ ಒಲವಿನ ಮಡದಿ ಮತ್ತು ಇಬ್ಬರು ಮುದ್ದಿನ ಮಕ್ಕಳು – ಹೀಗೆ ಭಾರತೀಯ ಜನಸಾಮಾನ್ಯನು ಕನಸುವ ಕುಟುಂಬದ ಚಿತ್ರಣ ಶಿವನದು. ಗೌರೀ ಹಬ್ಬವು ಹೇಳಿಕೇಳಿ ಶಿವನ ಮಡದಿಯನ್ನು ಮನೆಗೆ ಕರೆದು ಪೂಜಿಸುವ ಹಬ್ಬವಾದ್ದರಿಂದ ಸಾಂಸಾರಿಕ ಜೀವನದಲ್ಲಿ ಸಮೃದ್ಧಿಯನ್ನು ಲಕ್ಷ್ಯವಾಗಿಟ್ಟುಕೊಂಡೇ ವ್ರತಾಚರಣೆ ನಡೆಯುತ್ತದೆ. ಗೌರೀ ಎನ್ನುವಾಕೆ ವ್ರತವನ್ನು ಆಚರಿಸಿ (ತಪಸ್ಸು ತಪಿಸಿ) ತನ್ನ ಪ್ರಿಯ ಶಿವನನ್ನು ಪತಿಯನ್ನಾಗಿ ಪಡೆದವಳು. ಹಾಗಾಗಿ ಮಂಗಲಮಯ ವೈವಾಹಿಕ ಬದುಕಿನ ಕನಸು ಹೊತ್ತು ಅವಿವಾಹಿತ ತರುಣಿಯರೂ ಗೌರೀ ವ್ರತವನ್ನು ಆಚರಿಸುತ್ತಾರೆ. ವ್ರತದ ಭಾಗವಾಗಿ ಈ ವ್ರತಕ್ಕೆ ಸಂಬಂಧಿಸಿದ ಕಥೆಯನ್ನು ಓದುವ ಪರಿಕ್ರಮವೂ ಇದೆ. ಎಂದಿನಂತೆ ಕೈಲಾಸದಲ್ಲಿ ಸಿದ್ಧ, ಸಾಧ್ಯ, ಯಕ್ಷ, ಗಂಧರ್ವಾದಿಗಳಿಂದ ಸೇವಿತನಾದ ಶಿವನು ಉಮೆಯೊಡನೆ ಕುಳಿತಿರುವಾಗ ಶಿವನ ಮಗನಾದ ಕುಮಾರನು ಸೌಭಾಗ್ಯಕರವಾದ ಕಥೆಯನ್ನು ಹೇಳೆಂದು ಕೇಳಲಾಗಿ ಅದಕ್ಕೆ ಶಿವನು ಈ ವ್ರತಕಥೆಯನ್ನು ಹೇಳುತ್ತಾನೆ. ಈ ಕಥೆಯು ಮಾನವರಾದ ನಮಗೆ ದೊರೆತಿರುವುದು ಶೌನಕಾದಿ ಋಷಿಗಳಿಗೆ ನೈಮಿಷಾರಣ್ಯದಲ್ಲಿ ಸೂತರು ಹೇಳಿದ ಕಥೆಯ ಮೂಲಕ. ಇದೂ ಸಹ ನಮ್ಮ ಕಥಾಪರಂಪರೆಯ ಒಂದು ಕೊಂಡಿ.

ಒಟ್ಟಿನಲ್ಲಿ ಸೌಭಾಗ್ಯದೇವಿಯಾದ ಗೌರಿಯನ್ನು ಮನೆಗೆ ಕರೆದು ಸೌಭಾಗ್ಯದ್ರವ್ಯಗಳ ಮೂಲಕ ಪೂಜಿಸುವ ಪುಣ್ಯತಮ ವ್ರತ ಗೌರೀ ಹಬ್ಬ. ❖




# 'ಕಾಂಪೌಂಡರ್‌ಗಳಿಂದ ಮದ್ದು ಪಡೆಯುತ್ತಿರುವ ಕಾಂಗ್ರೆಸ್'


ಆಜಾದ್

ನವದೆಹಲಿ (ಪಿಟಿಐ): 'ಅನಾರೋಗ್ಯಪೀಡಿತ ಕಾಂಗ್ರೆಸ್ ಪಕ್ಷವು ವೈದ್ಯರಿಂದ ಔಷಧ ಪಡೆದುಕೊಳ್ಳುವ ಬದಲಿಗೆ ಕಾಂಪೌಂಡರ್‌ಗಳಿಂದ ಔಷಧ ಪಡೆದುಕೊಳ್ಳುತ್ತಿದೆ' ಎಂದು ಕಾಂಗ್ರೆಸ್ ಪಕ್ಷವನ್ನು ಇತ್ತೀಚೆಗೆ ತೊರೆದಿರುವ ಗುಲಾಂ ನಬಿ ಆಜಾದ್ ಸೋಮವಾರ ಹೇಳಿದ್ದಾರೆ.

ಕಾಂಗ್ರೆಸ್ ನೆಲೆಗಟ್ಟು ದುರ್ಬಲವಾಗಿದೆ ಮತ್ತು ಪಕ್ಷವು ಯಾವುದೇ ಸಂದರ್ಭದಲ್ಲಿ ಕುಸಿಯ ಬಹುದು. ಆದರೆ, ಕಾಂಗ್ರೆಸ್ ನಾಯಕರಿಗೆ ಈ ಬಗ್ಗೆ ಗಮನ ಹರಿಸಲು ಸಮಯವಿಲ್ಲ ಎಂದು ಟೀಕಿಸಿದ್ದಾರೆ.

ರಾಜಕಾರಣವು ರಾಹುಲ್ ಗಾಂಧಿ ಅವರ ಸಹಜ ಪ್ರವೃತ್ತಿ ಅಲ್ಲ. ಅವರಿಗೆ ರಾಜಕಾರಣದಲ್ಲಿ ಆಸಕ್ತಿಯೂ ಇಲ್ಲ ಎಂದೂ ಹೇಳಿದ್ದಾರೆ.

ಪಕ್ಷವನ್ನು ಒಗ್ಗಟ್ಟಾಗಿ ಇರಿಸುವುದರ ಬದಲು ಮುಖಂಡರು ಪಕ್ಷ ಬಿಟ್ಟು ಹೋಗುವಂತೆ ಮಾಡಲಾಗುತ್ತಿದೆ ಎಂಬ ಭಾವನೆ ಜನರಲ್ಲಿ ಇದೆ ಎಂದು ಮಾಧ್ಯಮ ಪ್ರತಿನಿಧಿಗಳ ಜತೆಗೆ ತಮ್ಮ ನಿವಾಸದಲ್ಲಿ ಮಾತನಾಡಿದ ಆಜಾದ್ ಹೇಳಿದರು.

ತಮ್ಮದು ಕಾಂಗ್ರೆಸ್ ಸಿದ್ಧಾಂತ. ಪಕ್ಷವನ್ನು ತೊರೆಯಲು ಎಂದೂ ಬಯಸಿರಲಿಲ್ಲ. ತಾವು ವಿದ್ಯಾರ್ಥಿ ದೆಸೆಯಿಂದಲೇ ಪಕ್ಷದ ಜತೆ ಬೆಳೆದವರು. ಆದರೆ, ಪಕ್ಷ ತೊರೆಯುವಂತೆ ಬಲವಂತ ಮಾಡಲಾಯಿತು ಎಂದಿದ್ದಾರೆ. ಬಿಜೆಪಿ ಸೇರುವುದಿಲ್ಲ. ಅದು ಜಮ್ಮು–ಕಾಶ್ಮೀರದ ರಾಜಕಾರಣಕ್ಕೆ ಒಳ್ಳೆಯದಲ್ಲ ಎಂದ ಅವರು ಸ್ವಂತ ಪಕ್ಷ ಕಟ್ಟುವುದಾಗಿ ತಿಳಿಸಿದ್ದಾರೆ. 'ಕಾಂಗ್ರೆಸ್ ಪಕ್ಷಕ್ಕೆ ನಾನು ಶುಭ ಹಾರೈಕೆಯನ್ನಷ್ಟೇ ಮಾಡಬಹುದು. ಆದರೆ, ನನ್ನ ಹಾರೈಕೆಗಿಂತ ಆ ಪಕ್ಷಕ್ಕೆ ಔಷಧ ಬೇಕಾಗಿದೆ' ಎಂದು ಅವರು ಹೇಳಿದ್ದಾರೆ.

## ಮೋದಿಯ ಮಾನವೀಯತೆ

'ಮಕ್ಕಳು ಅಥವಾ ಕುಟುಂಬ ಇಲ್ಲದ ಕಾರಣ ಪ್ರಧಾನಿ ನರೇಂದ್ರ ಮೋದಿ ಅವರು ಒರಟಾಗಿ ಇರುತ್ತಾರೆ ಎಂಬ ಭಾವನೆ ನನ್ನಲ್ಲಿ ಇತ್ತು. ಆದರೆ ಅವರು ಮಾನವೀಯತೆ ಮೆರೆದರು' ಎಂದು ಆಜಾದ್ ಹೇಳಿದ್ದಾರೆ.

ಜಮ್ಮು–ಕಾಶ್ಮೀರದಲ್ಲಿ ಗುಜರಾತ್‌ನ ಜನರು ಇದ್ದ ಬಸ್‌ನಲ್ಲಿ 2007ರಲ್ಲಿ ಗ್ರೆನೇಡ್ ಸ್ಫೋಟಿಸಲಾಗಿತ್ತು. ಆಗ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದರು. ಆಜಾದ್ ಅವರು ಜಮ್ಮು–ಕಾಶ್ಮೀರ ಮುಖ್ಯಮಂತ್ರಿಯಾಗಿದ್ದರು. ಆಜಾದ್ ಅವರು ರಾಜ್ಯಸಭೆಯಿಂದ ನಿವೃತ್ತಿಯಾದಾಗ ಈ ಘಟನೆಯನ್ನು ನೆನಪಿಸಿಕೊಂಡು ಮೋದಿ ಭಾವುಕರಾಗಿದ್ದರು.

ಮೋದಿ ಅವರು ಮಾಡಿದ ವಿದಾಯ ಭಾಷಣದಲ್ಲಿ ಅವರು ಭಾವುಕರಾದದ್ದು 'ಅನಕ್ಷರಸ್ಥ' ಕಾಂಗ್ರೆಸಿಗರಲ್ಲಿ ಭಿನ್ನ ಭಾವನೆಯನ್ನು ಸೃಷ್ಟಿಸಿದೆ. ಅಂದು ರಾಜ್ಯಸಭೆಯಲ್ಲಿ ವ್ಯಕ್ತವಾದ ಭಾವನೆ ಆ ದುರಂತದ ಕುರಿತೇ ಹೊರತು ಪರಸ್ಪರರಿಗೆ ಸಂಬಂಧಿಸಿ ಅಲ್ಲ ಎಂದು ಆಜಾದ್ ಹೇಳಿದ್ದಾರೆ.

## ಎನ್‌ಎಸ್‌ಇ ಮಾಜಿ ಸಿಇಒ ಚಿತ್ರಾ ಜಾಮೀನು ಅರ್ಜಿ ವಜಾ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ, ಸಿಬ್ಬಂದಿಯ ಫೋನ್ ಕದ್ದಾಲಿಕೆ ಪ್ರಕರಣಗಳನ್ನು ಎದುರಿಸುತ್ತಿರುವ ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ಮಾಜಿ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕಿ ಚಿತ್ರಾ ರಾಮಕೃಷ್ಣ ಅವರ ಜಾಮೀನು ಅರ್ಜಿಯನ್ನು ದೆಹಲಿ ನ್ಯಾಯಾಲಯ ಸೋಮವಾರ ವಜಾಗೊಳಿಸಿದೆ.

ವಿಶೇಷ ನ್ಯಾಯಾಧೀಶ ಸುನೇನಾ ಶರ್ಮಾ ಅವರು ಈ ಜಾಮೀನು ಅರ್ಜಿಯನ್ನು ವಜಾಗೊಳಿಸಿದರು.








### ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿರುದ್ಧ ಎಎಪಿ ಗಂಭೀರ ಆರೋಪ

# ನೋಟು ಬದಲಾವಣೆಗೆ ಒತ್ತಡ ಹೇರಿದ್ದ ಸಕ್ಸೇನಾ


ವಿ.ಕೆ. ಸಕ್ಸೇನಾ

ನವದೆಹಲಿ (ಪಿಟಿಐ): 2016ರಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ (ಕೆವಿಐಸಿ) ಅಧ್ಯಕ್ಷರಾಗಿದ್ದಾಗ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಅವರು ಅಮಾನ್ಯೀಕರಣಗೊಂಡಿದ್ದ ₹ 1,400 ಕೋಟಿ ಮೌಲ್ಯದ ನೋಟುಗಳನ್ನು ಬದಲಾಯಿಸಿಕೊಡುವಂತೆ ತಮ್ಮ ಸಹೋದ್ಯೋಗಿಗಳಿಗೆ ಒತ್ತಡ ಹೇರಿದ್ದರು ಎಂದು ಆಮ್ ಆದ್ಮಿ ಪಕ್ಷದ ಶಾಸಕ ದುರ್ಗೇಶ್ ಪಾಠಕ್ ಅವರು ಸೋಮವಾರ ದೆಹಲಿ ವಿಧಾನಸಭೆಯಲ್ಲಿ ಆರೋಪಿಸಿದ್ದಾರೆ.

'ಸಕ್ಸೇನಾ ಅವರು ಕೆವಿಐಸಿ ಅಧ್ಯಕ್ಷರಾಗಿದ್ದಾಗ ನೋಟು ಅಮಾನ್ಯೀಕರಣ ಪ್ರಕ್ರಿಯೆ ನಡೆದಿತ್ತು. ಅಮಾನ್ಯೀಕರಣಗೊಂಡಿದ್ದ ನೋಟುಗಳನ್ನು ಬದಲಾಯಿಸುವಂತೆ ತಮ್ಮ ಮೇಲೆ ಒತ್ತಡ ಹೇರುತ್ತಿರುವುದಾಗಿ ಆಗ ಕೆವಿಐಸಿಯಲ್ಲಿ ಕೆಲಸ ಮಾಡುತ್ತಿದ್ದ ಕ್ಯಾಷಿಯರ್ ಲಿಖಿತರೂಪದಲ್ಲಿ ತಿಳಿಸಿದ್ದರು. ಬಳಿಕ ಅವರನ್ನು ಕೆಲಸದಿಂದ ಅಮಾನತು ಗೊಳಿಸಲಾಗಿತ್ತು. ಅಷ್ಟೇ ಅಲ್ಲ, ಈ ಸಂಬಂಧ ಅಲ್ಲಿ ಕೆಲಸ ಮಾಡುತ್ತಿದ್ದ ಉದ್ಯೋಗಿಗಳ ಹೇಳಿಕೆಗಳು ಮತ್ತು ಪತ್ರಿಕಾ ವರದಿಗಳೂ ಇವೆ. ನಾವು ಈ ಬಗ್ಗೆ ತನಿಖೆಗೆ ಆಗ್ರಹಿಸುತ್ತೇವೆ' ಎಂದು ಪಾಠಕ್ ಹೇಳಿದರು.

ಪಾಠಕ್ ಅವರು ಸದನದಲ್ಲಿ ವಿಷಯ ಮಂಡಿಸುತ್ತಿದ್ದಂತೆಯೇ, ಭಿತ್ತಿಪತ್ರಗಳನ್ನು ಹಿಡಿದು ಸದನದ ಬಾವಿಗಿಳಿದ ಎಎಪಿ ಶಾಸಕರು, ದೆಹಲಿ ಲೆಫ್ಟಿನೆಂಟ್ ಗವರ್ನರ್ ಹುದ್ದೆಯಿಂದ ಸಕ್ಸೇನಾ ಅವರನ್ನು ಕೆಳಗಿಳಿಸಬೇಕೆಂದು ಘೋಷಣೆಗಳನ್ನು ಕೂಗಿದರು. ಬಳಿಕ ಉಪ ಸ್ಪೀಕರ್ ರಾಖಿ ಬಿರ್ಲಾ ಅವರು ಕಲಾಪವನ್ನು 15 ನಿಮಿಷಗಳ ಕಾಲ ಸ್ಥಗಿತಗೊಳಿಸಿದರು.

'ಸಕ್ಸೇನಾ ಅವರು ತಮ್ಮ ಕ್ಯಾಷಿಯರ್ ಮೇಲೆ ಒತ್ತಡ ಹೇರಿ ಕೆವಿಐಸಿಯ ದೆಹಲಿ ಘಟಕವೊಂದರಲ್ಲೇ ₹ 22 ಲಕ್ಷ ಮೌಲ್ಯದ ನೋಟುಗಳನ್ನು ಬದಲಾಯಿಸಿದ್ದರು. ದೇಶದಲ್ಲಿ ಕೆವಿಐಸಿಯ ಇಂಥ 7 ಸಾವಿರ ಘಟಕಗಳಿದ್ದು, ಸುಮಾರು ₹ 1,400 ಕೋಟಿ ಮೌಲ್ಯದ ಹಗರಣ ನಡೆದಿರಬಹುದು' ಎಂದು ಎಎಪಿ ಹೇಳಿದೆ.

ಪ್ರಕರಣದ ತನಿಖೆಯನ್ನು ಸಿಬಿಐ ಮತ್ತು ಇ.ಡಿಗೆ ಒಪ್ಪಿಸಬೇಕು ಎಂದ ಸದಸ್ಯರು, ಸಕ್ಸೇನಾ ಅವರ ಬಂಧನಕ್ಕೂ ಒತ್ತಾಯಿಸಿದರು.

ವಿಧಾನಸಭೆ ಸಂಕೀರ್ಣದ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ 'ಲೆ. ಗವರ್ನರ್ ವಿ.ಕೆ. ಸಕ್ಸೇನಾ ಕಳ್ಳ', 'ಸಕ್ಸೇನಾ ಅವರನ್ನು ಬಂಧಿಸಿ' ಎನ್ನುವ ಭಿತ್ತಿಫಲಕಗಳನ್ನು ಹಿಡಿದು ಎಎಪಿ ಶಾಸಕರು ಪ್ರತಿಭಟನೆ ನಡೆಸಿದರು.

ಈ ಆರೋಪವು ಸಕ್ಸೇನಾ ಮತ್ತು ಎಎಪಿ ನಡುವಿನ ಬಿರುಕನ್ನು ಮತ್ತಷ್ಟು ಹೆಚ್ಚಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

## ದೆಹಲಿಯ ಶಿಕ್ಷಣ ಮಾದರಿ 'ಸುಲಿಗೆಯ ಮಾದರಿ': ಬಿಜೆಪಿ ಆರೋಪ

ನವದೆಹಲಿ: 'ಕೇಂದ್ರ ಲೋಕೋಪಯೋಗಿ ಇಲಾಖೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ದೆಹಲಿ ಸರ್ಕಾರವು, ಶಾಲೆಗಳಲ್ಲಿನ ತರಗತಿಗಳ ನಿರ್ಮಾಣದ ಬಜೆಟ್ ವೆಚ್ಚವನ್ನು ₹ 326 ಕೋಟಿಗೆ ಹೆಚ್ಚಳ ಮಾಡಿ, ಶಿಕ್ಷಣ ಇಲಾಖೆಯಲ್ಲಿ ಅವ್ಯವಹಾರ ನಡೆಸಿದೆ' ಎಂದು ಬಿಜೆಪಿ ಸೋಮವಾರ ಆರೋಪಿಸಿದೆ.

ದೆಹಲಿ ಸರ್ಕಾರವು ತರಗತಿಗಳ ನಿರ್ಮಾಣಕ್ಕೆ ಮೂಲ ಟೆಂಡರ್ ಮೊತ್ತಕ್ಕಿಂತಲೂ ಶೇ 53ಕ್ಕಿಂತ ಹೆಚ್ಚಳ ಮಾಡಿದೆ. ಶಾಲೆಗಳ ಶೌಚಾಲಯಗಳನ್ನೂ ತರಗತಿಗಳೆಂದು ಲೆಕ್ಕ ನೀಡಿದೆ. ನಿಜ ಹೇಳಬೇಕೆಂದರೆ ಎಎಪಿಯ ಶಿಕ್ಷಣ ಮಾದರಿಯು 'ಸುಲಿಗೆಯ ಮಾದರಿ'ಯಾಗಿದೆ ಎಂದೂ ಬಿಜೆಪಿ ದೂರಿದೆ.

# 'ಸುಳ್ಳು ಹೇಳುವವರ ನಾಲಿಗೆ ಸೀಳುತ್ತಿದ್ದೆ'

ಕೋಲ್ಕತ್ತ (ಪಿಟಿಐ): ತಮ್ಮ ಹಾಗೂ ತಮ್ಮ ಕುಟುಂಬ ಸದಸ್ಯರ ಆಸ್ತಿ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂಬ ಆರೋಪಗಳನ್ನು ತಳ್ಳಿಹಾಕಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಧೈರ್ಯವಿದ್ದರೆ ತಮ್ಮನ್ನು ಬಂಧಿಸುವಂತೆ ಬಿಜೆಪಿಗೆ ಸವಾಲು ಹಾಕಿದ್ದಾರೆ.

ಟಿಎಂಸಿ ಪಕ್ಷದ ಇಬ್ಬರು ಸಚಿವರನ್ನು ವಿವಿಧ ಪ್ರಕರಣಗಳಲ್ಲಿ ಸಿಬಿಐ ಹಾಗೂ ಇ.ಡಿ. ಬಂಧಿಸಿದ ಬಳಿಕ ತಮ್ಮ ಹಾಗೂ ತಮ್ಮ ಕುಟುಂಬದ ವಿರುದ್ಧ ನಡೆಯುತ್ತಿರುವ ದುರುದ್ದೇಶಪೂರಿತ ಪ್ರಚಾರವನ್ನು ಮಮತಾ ಟೀಕಿಸಿದ್ದಾರೆ. 'ಒಂದು ವೇಳೆ ರಾಜಕೀಯದಲ್ಲಿ ಇರದಿದ್ದರೆ, ಸುಳ್ಳು ಹೇಳುವವರ ನಾಲಿಗೆ ಸೀಳುವಂತೆ ನಮ್ಮ ಜನರಿಗೆ ಸೂಚಿಸುತ್ತಿದ್ದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಮತಾ ಹಾಗೂ ಅವರ ಸಂಬಂಧಿಕರ ಆಸ್ತಿ ಪ್ರಮಾಣವು ಇತ್ತೀಚಿನ ದಿನಗಳಲ್ಲಿ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಆರೋಪಿಸಿ ಕಲ್ಕತ್ತಾ ಹೈಕೋರ್ಟ್‌ನಲ್ಲಿ ಸೋಮವಾರ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದ್ದು, ಕೇಂದ್ರೀಯ ತನಿಖಾ ಸಂಸ್ಥೆಯಿಂದ ಪ್ರಕರಣದ ತನಿಖೆ ನಡೆಸುವಂತೆ ಅರ್ಜಿಯಲ್ಲಿ ಆಗ್ರಹಿಸಲಾಗಿದೆ.

**ಮಾಜಿ ಸಂಸದರಿಗೆ ನೀಡುವ ₹1 ಲಕ್ಷ ಪಿಂಚಣಿ ಪಡೆಯುತ್ತಿದ್ದೇನೆ. ಮುಖ್ಯಮಂತ್ರಿ ಸಂಬಳವನ್ನು ವಾಪಸ್ ನೀಡುತ್ತಿದ್ದೇನೆ. ನಾನು ಕುಡಿಯುವ ಚಹಾಕ್ಕೆ ನಾನು ದುಡ್ಡು ಕೊಡುತ್ತೇನೆ. ತಂದೆಯ ಮನೆಯಲ್ಲಿ ನಾನು ವಾಸಿಸುತ್ತಿದ್ದೇನೆ**

**ಮಮತಾ ಬ್ಯಾನರ್ಜಿ,** ಪಶ್ಚಿಮ ಬಂಗಾಳ ಮುಖ್ಯಮಂತ್ರಿ

'ನನ್ನ ಸಂಬಂಧಿಕರೆಲ್ಲಾ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಹಬ್ಬಗಳಿದ್ದಾಗ ಮಾತ್ರ ಎಲ್ಲರೂ ಒಂದೆಡೆ ಸೇರುತ್ತೇವೆ. ನನ್ನ ತಾಯಿ ಮಾತ್ರ ನನ್ನ ಜವಾಬ್ದಾರಿ. ದೂರು ನೀಡಲು ಇಚ್ಛಿಸುವವರು ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಿ' ಎಂದು ಮಮತಾ ಹೇಳಿದ್ದಾರೆ.

'ಚುನಾಯಿತ ಸರ್ಕಾರಗಳನ್ನು ಕೆಡವಲು ಕೇಂದ್ರದ ತನಿಖಾ ಸಂಸ್ಥೆಗಳು ಹಾಗೂ ಅಕ್ರಮವಾಗಿ ಗಳಿಸಿರುವ ಹಣವನ್ನು ಬಿಜೆಪಿ ಬಳಸಿಕೊಳ್ಳುತ್ತಿದೆ. ಎಲ್ಲ ವಿಚಾರದಲ್ಲಿ ನನ್ನನ್ನು ಎಳೆದು ತರಲಾಗುತ್ತಿದೆ. ಒಂದು ವೇಳೆ ನನ್ನನ್ನು ಅವರು ಬಂಧಿಸಿದರೆ, ಬಿಜೆಪಿಗೆ ತಪ್ಪಿನ ಅರಿವಾಗುತ್ತದೆ' ಎಂದು ಮಮತಾ ಹೇಳಿದ್ದಾರೆ.

# ಆತ್ಮಹತ್ಯೆ: ಮಹಾರಾಷ್ಟ್ರದಲ್ಲಿ ಹೆಚ್ಚು, ಕರ್ನಾಟಕಕ್ಕೆ 5ನೇ ಸ್ಥಾನ

ನವದೆಹಲಿ(ಪಿಟಿಐ): ದೇಶದಲ್ಲಿ ಆತ್ಮಹತ್ಯೆ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಏರುಗತಿಯಲ್ಲಿದ್ದು, ಕಳೆದ ವರ್ಷ ಶೇ 7.2 ಏರಿಕೆ ಕಂಡಿದೆ.

2021ರಲ್ಲಿ ದೇಶದಾದ್ಯಂತ 1,64,033 ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. 2020ರಲ್ಲಿ 1,53,052 ಪ್ರಕರಣಗಳು ದಾಖಲಾಗಿದ್ದವು. ಹೆಚ್ಚು ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರಾಜ್ಯಗಳ ಪಟ್ಟಿಯಲ್ಲಿ ಮಹಾರಾಷ್ಟ್ರ (22,207) ಮೊದಲ ಸ್ಥಾನದಲ್ಲಿದೆ. ನಂತರದ ನಾಲ್ಕು ಸ್ಥಾನಗಳಲ್ಲಿ ತಮಿಳುನಾಡು (18,925), ಮಧ್ಯಪ್ರದೇಶ (14,965), ಪಶ್ಚಿಮ ಬಂಗಾಳ (13,500) ಮತ್ತು ಕರ್ನಾಟಕ (13,056) ರಾಜ್ಯಗಳಿವೆ. ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ಉತ್ತರಪ್ರದೇಶ (ಶೇ 3.6) ಕೊನೆ ಸ್ಥಾನದಲ್ಲಿದೆ. ಕೇಂದ್ರಾಡಳಿತ ಪ್ರದೇಶಗಳ ಪೈಕಿ ದೆಹಲಿ (2,840), ಪುದುಚೇರಿ (504) ಮೊದಲೆರಡು ಸ್ಥಾನಗಳಲ್ಲಿವೆ.

ವೃತ್ತಿ ಸಂಬಂಧಿತ, ಪ್ರತ್ಯೇಕತೆ, ಕಿರುಕುಳ, ಹಿಂಸೆ, ಕೌಟುಂಬಿಕ ಸಮಸ್ಯೆ, ಮಾನಸಿಕ ಅಸ್ವಸ್ಥತೆ, ಮದ್ಯ ವ್ಯಸನ, ಆರ್ಥಿಕ ನಷ್ಟದಂತಹ ಸಮಸ್ಯೆಗಳು ಆತ್ಮಹತ್ಯೆಗೆ ಪ್ರಮುಖ ಕಾರಣಗಳಾಗಿವೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ಹೇಳಿದೆ.

**ಮಹಿಳೆಯರಿಗೆ ದೆಹಲಿ ಅಸುರಕ್ಷಿತ:** ದೆಹಲಿಯಲ್ಲಿ ಪ್ರತಿ ದಿನ ಇಬ್ಬರು ಬಾಲಕಿಯರ ಮೇಲೆ ಅತ್ಯಾಚಾರ ನಡೆಯುತ್ತಿದ್ದು, 2021ರಲ್ಲಿ 13,892 ಪ್ರಕರಣಗಳು ದಾಖಲಾಗಿವೆ. ಈ ಮೂಲಕ ಮಹಿಳೆಯರ ಪಾಲಿಗೆ ದೆಹಲಿ ಅಸುರಕ್ಷಿತವೆನಿಸಿದೆ. ನಂತರದ ಸ್ಥಾನದಲ್ಲಿ ಮುಂಬೈ (5,543) ಮತ್ತು ಬೆಂಗಳೂರು (3,127) ಇವೆ. 19 ಮಹಾನಗರಗಳ ಪೈಕಿ ದೆಹಲಿಯಲ್ಲೇ ಶೇ 32.20ರಷ್ಟು ಪ್ರಕರಣಗಳು ವರದಿಯಾಗಿವೆ. 2021ರಲ್ಲಿ ಒಟ್ಟು 1,357 ಪೋಕ್ಸೊ ಪ್ರಕರಣ ದಾಖಲಾಗಿವೆ ಎಂದು ಎನ್‌ಸಿಆರ್‌ಬಿ ಹೇಳಿದೆ.



## ಸಂಕ್ಷಿಪ್ತ ಸುದ್ದಿ

### ರಫೇಲ್ ಒಪ್ಪಂದ ಹೊಸ ವಿಚಾರಣೆಗೆ 'ಸುಪ್ರೀಂ' ನಕಾರ

ನವದೆಹಲಿ: ಫ್ರಾನ್ಸ್‌ನ ಡಸಾಲ್ಟ್ ಏವಿಯೇಷನ್ ಸಂಸ್ಥೆ ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಹೊಸ ಮಾಹಿತಿ ಆಧರಿಸಿ, 2016ರಲ್ಲಿ ನಡೆದಿರುವ ರಫೇಲ್ ಯುದ್ಧ ವಿಮಾನಗಳ ಖರೀದಿ ಒಪ್ಪಂದದ ಬಗ್ಗೆ ವಿಚಾರಣೆಗೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಸೋಮವಾರ ತಿರಸ್ಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಮತ್ತು ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ಅವರಿದ್ದ ಪೀಠವು, ಈ ಹಿಂದಿನ ತ್ರಿಸದಸ್ಯ ಪೀಠವು ನೀಡಿರುವ ತೀರ್ಪುಗಳನ್ನು ಗಮನದಲ್ಲಿಟ್ಟುಕೊಂಡು ಈ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲಾಗದು ಎಂದು ಹೇಳಿದೆ.

### 'ಸುಪ್ರೀಂ ತೀರ್ಪಿಗೂ ತೀಸ್ತಾ ವಿರುದ್ಧದ ಎಫ್‌ಐಆರ್‌ಗೂ ಸಂಬಂಧವಿಲ್ಲ'

ನವದೆಹಲಿ: 'ಸುಪ್ರೀಂ ಕೋರ್ಟ್ ಜೂನ್ 24ರಂದು ನೀಡಿದ್ದ ತೀರ್ಪಿಗೂ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ವಿರುದ್ಧ ದಾಖಲಿಸಲಾಗಿರುವ ಎಫ್‌ಐಆರ್‌ಗೂ ಯಾವುದೇ ಸಂಬಂಧವಿಲ್ಲ. ಸೂಕ್ತ ಸಾಕ್ಷ್ಯಗಳ ಆಧಾರದಲ್ಲಿ ಅವರ ವಿರುದ್ಧ ಬಲವಾದ ಪ್ರಕರಣ ದಾಖಲಿಸಲಾಗಿದೆ' ಎಂದು ಗುಜರಾತ್ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ತಿಳಿಸಿದೆ.

2002ರ ಗುಜರಾತ್ ಗಲಭೆ ಪ್ರಕರಣಗಳಲ್ಲಿ ನಿರಪರಾಧಿಗಳನ್ನು ಸಿಲುಕಿಸಲು ಹುಸಿ ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂಬ ಪ್ರಕರಣದಲ್ಲಿ ಸೆಟಲ್‌ವಾಡ್ ಅವರನ್ನು ಬಂಧಿಸಲಾಗಿತ್ತು. 'ಅರ್ಜಿದಾರರು (ತೀಸ್ತಾ) ಹಾಗೂ ಪ್ರಕರಣದ ಇತರ ಆರೋಪಿಗಳು ರಾಜಕೀಯ, ಹಣಕಾಸಿನ ಹಾಗೂ ಇತರೆ ಲಾಭದ ಉದ್ದೇಶದಿಂದ ಹಲವು ಕ್ರಿಮಿನಲ್ ಕೆಲಸಗಳಲ್ಲಿ ಭಾಗಿಯಾಗಿದ್ದರು. ರಾಜಕೀಯ ಪಕ್ಷವೊಂದರ ಹಿರಿಯ ನಾಯಕರ ಸೂಚನೆ ಮೇರೆಗೆ ಹಲವರ ವಿರುದ್ಧ ಸಂಚು ರೂಪಿಸಿರುವುದಕ್ಕೆ ಸಾಕ್ಷ್ಯಗಳೂ ದೊರೆತಿವೆ' ಎಂದು ನ್ಯಾಯಾಲಯಕ್ಕೆ ಸಲ್ಲಿಸಿರುವ ಲಿಖಿತ ಪ್ರತಿಕ್ರಿಯೆಯಲ್ಲಿ ಗುಜರಾತ್‌ನ ಎಸ್‌ಐಟಿ ಹೇಳಿದೆ.

### ಮಥುರಾ: ವಿವಾದ ಇತ್ಯರ್ಥಕ್ಕೆ 4 ತಿಂಗಳ ಗಡುವು

ಲಖನೌ: ಶ್ರೀಕೃಷ್ಣ ಜನ್ಮಭೂಮಿ ಇರುವ ಸಂಪೂರ್ಣ ಪ್ರದೇಶದಲ್ಲಿ ವಿಡಿಯೊ ಸಮೀಕ್ಷೆ ನಡೆಸಲು ಅನುಮತಿ ಕೋರಿ ಸಲ್ಲಿಸಲಾಗಿರುವ ಅರ್ಜಿಯನ್ನು ನಾಲ್ಕು ತಿಂಗಳ ಒಳಗೆ ಇತ್ಯರ್ಥ ಮಾಡಬೇಕು ಎಂದು ಅಲಹಾಬಾದ್ ಹೈಕೋರ್ಟ್ ಮಥುರಾದ ನ್ಯಾಯಾಲಯವೊಂದಕ್ಕೆ ನಿರ್ದೇಶನ ನೀಡಿದೆ.

ನ್ಯಾಯಾಲಯ ನೇಮಿಸುವ ಸಮಿತಿಯ ನೇತೃತ್ವದಲ್ಲಿ ಮಥುರಾದ ಶ್ರೀಕೃಷ್ಣ ಜನ್ಮಭೂಮಿಗೆ ಸೇರಿದ ಸ್ಥಳದಲ್ಲಿ ವೈಜ್ಞಾನಿಕ ಸಮೀಕ್ಷೆ ನಡೆಸಬೇಕು ಎಂದು ಕೋರಿ ಮನೀಶ್ ಯಾದವ್ ಎಂಬುವವರು ಅರ್ಜಿ ಸಲ್ಲಿಸಿದ್ದರು. ಆ ಆವರಣದಲ್ಲಿ ವಿಡಿಯೊ ಸಮೀಕ್ಷೆ ನಡೆಸಲು ಅನುಮತಿ ನೀಡಬೇಕು ಎಂದೂ ಅವರು ಅರ್ಜಿಯಲ್ಲಿ ಮನವಿ ಮಾಡಿದ್ದರು.

### ನವ್ಲಾಖಾ ಅರ್ಜಿ ವಿಚಾರಣೆಗೆ ನಿರಾಕರಣೆ

ನವದೆಹಲಿ (ಪಿಟಿಐ): ಎಲ್ಗಾರ್ ಪರಿಷದ್ ಪ್ರಕರಣದ ಆರೋಪಿ ಗೌತಮ್ ನವ್ಲಾಖಾ (70) ಅವರು ತಮ್ಮನ್ನು ನ್ಯಾಯಾಂಗ ಬಂಧನದಲ್ಲಿರಿಸುವ ಬದಲು ಗೃಹ ಬಂಧನದಲ್ಲಿರಿಸಬೇಕೆಂದು ಕೋರಿ ಸಲ್ಲಿಸಿರುವ ಮೇಲ್ಮನವಿ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎಸ್.ರವೀಂದ್ರ ಭಟ್ ಅವರು ಸೋಮವಾರ ನಿರಾಕರಿಸಿದರು.

ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಅವರಿರುವ ಪೀಠದಲ್ಲಿದ್ದ ನ್ಯಾಯಮೂರ್ತಿ ಭಟ್ ಅವರು ವಿಚಾರಣೆಯ ಭಾಗವಾಗಲು ತಾವು ಅಸಮರ್ಥರು ಎಂದರು. ಆದರೆ, ಅವರು ಇದಕ್ಕೆ ಕಾರಣ ವಿವರಿಸಲಿಲ್ಲ.

### ಅರ್ಜಿ ವಿಚಾರಣೆ ಪಟ್ಟಿಗೆ ಶೀಘ್ರ ಹೊಸ ಕಾರ್ಯವಿಧಾನ: ಸಿಜೆಐ

ನವದೆಹಲಿ (ಪಿಟಿಐ): ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಯು.ಯು. ಲಲಿತ್ ಅವರು ಸೋಮವಾರ ತಮ್ಮ ಮೊದಲ ದಿನದ ಕಾರ್ಯಾರಂಭಿಸಿ, 'ಉನ್ನತ ನ್ಯಾಯಾಲಯದಲ್ಲಿ ಅರ್ಜಿಗಳ ವಿಚಾರಣೆಯ ಪಟ್ಟಿಗೆ ಹೊಸ ಕಾರ್ಯವಿಧಾನ ಶೀಘ್ರವೇ ಆರಂಭಿಸಲಾಗುವುದು' ಎಂದು ಹೇಳಿದರು.

'ಗುರುವಾರದ ಹೊತ್ತಿಗೆ ಈ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ. ಅಲ್ಲಿಯವರೆಗೆ, ನಾವು ತುರ್ತು ಅರ್ಜಿಗಳನ್ನು ಪಟ್ಟಿ ಮಾಡಲಿದ್ದು, ರಿಜಿಸ್ಟ್ರಾರ್ ಮುಂದೆ ಅರ್ಜಿಗಳನ್ನು ಪ್ರಸ್ತಾಪಿಸುವ ಮೂಲ ಪದ್ಧತಿಗೆ ಹಿಂತಿರುಗುತ್ತೇವೆ' ಎಂದು ತಿಳಿಸಿದರು.

ತುರ್ತು ಅರ್ಜಿಗಳನ್ನು ವಿಚಾರಣೆಗೆ ತೆಗೆದುಕೊಳ್ಳುವಂತೆ ಮೊದಲು ನ್ಯಾಯಾಲಯಕ್ಕೆ ಮನವಿ ಮಾಡುವುದಕ್ಕಿಂತ, ರಿಜಿಸ್ಟ್ರಾರ್ ಮುಂದೆ ತುರ್ತು ವಿಚಾರಣೆ ಪ್ರಕರಣಗಳನ್ನು ಉಲ್ಲೇಖಿಸುವಂತೆ ಅವರು ವಕೀಲರಿಗೆ ಸೂಚಿಸಿದರು.

ಸಿಜೆಐ ಲಲಿತ್ ಅವರು ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ಅವರನ್ನೊಳಗೊಂಡ ಪೀಠದ ಮುಂದೆ ಸೋಮವಾರ 62 ಅರ್ಜಿಗಳು ವಿಚಾರಣೆಗೆ ಬಂದವು. ಇದರಲ್ಲಿ ಹತ್ತು ಸಾರ್ವಜನಿಕ ಅರ್ಜಿಗಳು ಇದ್ದವು.

## ಅವಳಿ ಗೋಪುರ ನೆಲಸಮ ಮನೆಗಳಿಗೆ ಮರಳಿದ ನಿವಾಸಿಗಳು


ಅವಳಿ ಕಟ್ಟಡ ನೆಲಸಮಗೊಂಡಿರುವ ಸ್ಥಳದಲ್ಲಿ ಕಂಡುಬಂದ ಅವಶೇಷಗಳು

ನೊಯಿಡಾ (ಪಿಟಿಐ): ಸೂಪರ್‌ಟೆಕ್ ಸಂಸ್ಥೆಯ ಅವಳಿ ಗೋಪುರಗಳ ನೆಲಸಮ ಸಂದರ್ಭದಲ್ಲಿ ಮನೆ ತೆರವು ಮಾಡಿದ್ದ ಎಟಿಎಸ್ ವಿಲೇಜ್‌ನ ಶೇ 75ರಷ್ಟು ಮಂದಿ ಮತ್ತು ಎಮರಾಲ್ಡ್ ಗೋಲ್ಡ್‌ನ ಅರ್ಧದಷ್ಟು ಮಂದಿ ಸೋಮವಾರ ಸಂಜೆಯ ಹೊತ್ತಿಗೆ ತಮ್ಮ ತಮ್ಮ ಮನೆಗಳಿಗೆ ಮರಳಿದ್ದಾರೆ.

ಎಟಿಎಸ್ ವಿಲೇಜ್ ಮತ್ತು ಎಮರಾಲ್ಡ್ ಗೋಲ್ಡ್ ಅಪಾರ್ಟ್‌ಮೆಂಟ್‌ಗಳು ಅವಳಿ ಗೋಪುರಗಳಿದ್ದ ಸ್ಥಳದಿಂದ ಕೆಲವೇ ಮೀಟರ್‌ಗಳಷ್ಟು ದೂರದಲ್ಲಿವೆ.

ಒಂದು ಗೋಪುರದ ತುತ್ತತುದಿಯ ಮೂರು ಮಹಡಿಗಳ ಬೃಹತ್ ಭಾಗವೊಂದು ಎಟಿಎಸ್ ವಿಲೇಜ್‌ನ ಆವರಣ ಗೋಡೆಯ ಮೇಲೆ ಬಿದ್ದಿದೆ. ಗೋಡೆಯು ಸುಮಾರು ಒಂಬತ್ತು ಮೀಟರ್‌ಗಳಷ್ಟು ಹಾನಿಗೊಂಡಿದೆ. ಇದನ್ನು ಸರಿಪಡಿಸಲು ಒಂದು ವಾರ ಬೇಕು ಎನ್ನಲಾಗಿದೆ.

'ಕಟ್ಟಡದ ಈ ಭಾಗವು ಎಟಿಎಸ್ ವಿಲೇಜ್‌ನ ಆವರಣ ಗೋಡೆಯ ಮೇಲೆ ಬೀಳಲಿದೆ ಎಂಬುದನ್ನು ಮೊದಲೇ ಅಂದಾಜು ಮಾಡಲಾಗಿತ್ತು. ತ್ಯಾಜ್ಯವು ಚೆದುರಿ ಹೋಗಬಹುದು ಎಂದು ಗುರುತಿಸಿದ್ದ ಪ್ರದೇಶದೊಳಗೆ ಈ ಆವರಣ ಗೋಡೆ ಇದೆ' ಎಂದು ಎಡಿಫೈಸ್ ಎಂಜಿನಿಯರಿಂಗ್‌ನ ಯೋಜನಾ ವ್ಯವಸ್ಥಾಪಕ ಮಯೂರ್ ಮೆಹ್ತಾ ಹೇಳಿದ್ದಾರೆ.

ಅವಳಿ ಗೋಪುರಗಳ ನೆಲಸಮದ ನಂತರದಲ್ಲಿ ಯಾವುದೇ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿಲ್ಲ ಎಂದು ಎಟಿಎಸ್ ವಿಲೇಜ್ ಮತ್ತು ಎಮರಾಲ್ಡ್ ಗೋಲ್ಡ್ ಅಪಾರ್ಟ್‌ಮೆಂಟ್ ನಿವಾಸಿಗಳ ಸಂಘಗಳ ಅಧ್ಯಕ್ಷರು ತಿಳಿಸಿದ್ದಾರೆ.

ಭಾನುವಾರ ಮಧ್ಯಾಹ್ನ 2.30ಕ್ಕೆ ನೆಲಸಮಗೊಳಿಸಲಾದ ಅವಳಿ ಗೋಪುರಗಳ ಸಮೀಪದಲ್ಲಿಯೇ ಇರುವ ಈ ಎರಡು ವಸತಿ ಸಮುಚ್ಚಯಗಳಲ್ಲಿ ಐದು ಸಾವಿರಕ್ಕೂ ಹೆಚ್ಚು ಜನರು ನೆಲೆಸಿದ್ದಾರೆ. ವಿಶೇಷ ತಂತ್ರಜ್ಞಾನ ಬಳಸಿ 12 ಸೆಕೆಂಡ್‌ಗಳಲ್ಲಿ ಈ ಅವಳಿ ಗೋಪುರಗಳನ್ನು ನೆಲಸಮ ಮಾಡಲಾಗಿತ್ತು. ಸಾವಿರಾರು ಟನ್ ತ್ಯಾಜ್ಯ ಸೃಷ್ಟಿಯಾಗಿದೆ.

## ಜಯಲಲಿತಾ ಸಾವು: ಶಶಿಕಲಾ ವಿಚಾರಣೆಗೆ ಶಿಫಾರಸು


ಜಯಲಲಿತಾ

ಚೆನ್ನೈ: ಎಐಎಡಿಎಂಕೆ ನಾಯಕಿ ಜಯಲಲಿತಾ ಅವರ ಸಾವಿನ ತನಿಖೆಗೆ ರಚಿಸಿದ್ದ ನ್ಯಾಯಮೂರ್ತಿ ಎ. ಆರ್ಮುಗಸ್ವಾಮಿ ಆಯೋಗವು ಜಯಾ ಅವರ ಆಪ್ತೆ ವಿ.ಕೆ. ಶಶಿಕಲಾ, ಆರೋಗ್ಯ ಸಚಿವ ಸಿ. ವಿಜಯಭಾಸ್ಕರ್ ಹಾಗೂ ಮುಖ್ಯ ಕಾರ್ಯದರ್ಶಿ ಪಿ. ರಾಮ ಮೋಹನ ರಾವ್ ಅವರನ್ನು ವಿಚಾರಣೆಗೆ ಒಳಪಡಿಸಲು ಶಿಫಾರಸು ಮಾಡಿದ್ದು, ಈ ಬಗ್ಗೆ ಕಾನೂನು ಅಭಿಪ್ರಾಯ ಪಡೆಯಲು ಸೋಮವಾರ ತಮಿಳುನಾಡು ಸಚಿವ ಸಂಪುಟದಲ್ಲಿ ನಿರ್ಧರಿಸಲಾಗಿದೆ.

ಜಯಲಲಿತಾ ಅವರು ಆಸ್ಪತ್ರೆಗೆ ದಾಖಲಾದ ಮತ್ತು ನಂತರದ ಪರಿಸ್ಥಿತಿಗಳ ಕಾರಣ, ಸನ್ನಿವೇಶಗಳ ಕುರಿತು ವಿ.ಕೆ. ಶಶಿಕಲಾ, ವಿಜಯಭಾಸ್ಕರ್ ರಾವ್ ಮತ್ತು ಜಯಲಲಿತಾ ಅವರ ಖಾಸಗಿ ವೈದ್ಯ ಡಾ. ಶಿವಕುಮಾರ್ ಅವರ ವಿರುದ್ಧ ಸರ್ಕಾರದ ಕ್ರಮಕ್ಕಾಗಿ ಪ್ರಕರಣದ ತನಿಖೆ ನಡೆಸಬೇಕು ಎಂದು ಅರುಮುಘಸ್ವಾಮಿ ಆಯೋಗವು ಶಿಫಾರಸು ಮಾಡಿದೆ ಎಂದು ಸರ್ಕಾರ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

### ಮಾಹಿತಿ ಹಕ್ಕು ಅರ್ಜಿಗೆ ಉತ್ತರ ನೀಡದ ಪುರಿ ಜಗನ್ನಾಥ ದೇವಸ್ಥಾದ ಆಡಳಿತ (ಎಸ್‌ಜೆಟಿಎ)

# ಜಗನ್ನಾಥನ 'ರತ್ನ ಭಂಡಾರ' ಈಗ ಇನ್ನಷ್ಟು ನಿಗೂಢ!


ಸಾಂದರ್ಭಿಕ ಚಿತ್ರ

ಭುವನೇಶ್ವರ (ಪಿಟಿಐ): ಪುರಿ ಜಗನ್ನಾಥನ 'ರತ್ನ ಭಂಡಾರ'ದಲ್ಲಿ ಏನಿದೆ ಎಂಬ ಕುತೂಹಲದಿಂದ ಸಲ್ಲಿಸಲಾದ ಮಾಹಿತಿ ಹಕ್ಕು ಅರ್ಜಿಗೆ ಜಗನ್ನಾಥ ದೇವಸ್ಥಾದ ಆಡಳಿತ (ಎಸ್‌ಜೆಟಿಎ) ಉತ್ತರ ಕೊಟ್ಟಿಲ್ಲ. ಹೀಗಾಗಿ ಭಂಡಾರದ ರಹಸ್ಯ ಈಗ ಇನ್ನಷ್ಟು ನಿಗೂಢವಾಗಿದೆ.

ದೇಗುಲದ ಖಜಾನೆಯ ಒಳ ಕೋಣೆ ಮತ್ತೆ ತೆರೆಯಲು ಒಡಿಶಾ ಸರ್ಕಾರ ಯಾವುದೇ ಯೋಜನೆ ಹೊಂದಿಲ್ಲ ಎಂಬ ಕಾರಣ ನೀಡಿ 'ರತ್ನ ಭಂಡಾರ'ದ ರಹಸ್ಯವನ್ನು ಉಳಿಸಿಕೊಳ್ಳಲು ಯತ್ನಿಸಲಾಗಿದೆ.

ಸಾರ್ವಜನಿಕ ಹಿತಾಸಕ್ತಿಗಾಗಿ ಮಾಹಿತಿ ಹಂಚಿಕೊಳ್ಳದ ಕಾರಣ ಎಸ್‌ಜೆಟಿಎ ಅಧಿಕಾರಿ ಎಸ್.ಕೆ. ಚಟರ್ಜಿ ಅವರಿಗೆ ರಾಜ್ಯ ಮಾಹಿತಿ ಆಯೋಗವು ಇತ್ತೀಚೆಗೆ ದಂಡ ವಿಧಿಸಿತ್ತು. ಆದರೆ ಮತ್ತೆ ನಿಗೂಢತೆಯನ್ನು ಮುಚ್ಚಿಯೇ ಇಡುವ ಪ್ರಯತ್ನ ಮುಂದುವರಿದಿದೆ.

'ರತ್ನ ಭಂಡಾರ'ದ ಒಳ ಕೋಣೆ ತೆರೆಯಲು ಎಸ್‌ಜೆಟಿಎ ನಿರ್ಧರಿಸಲು ಸಾಧ್ಯವಿಲ್ಲ. ಮುಂದಿನ ಸಭೆಯಲ್ಲಿ ಈ ಸಮಸ್ಯೆಯನ್ನು ಜಗನ್ನಾಥ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಮುಂದೆ ಇಡಲಾಗುವುದು. ಆಡಳಿತ ಸಮಿತಿಯ ನಿರ್ಧಾರವನ್ನು ಎಸ್‌ಜೆಟಿಎ ಸರ್ಕಾರಕ್ಕೆ ತಿಳಿಸಿದ ಬಳಿಕ ಮಾತ್ರ ಖಜಾನೆ ತೆರೆಯಬಹುದು' ಎಂದು ದೇವಸ್ಥಾನದ ಆಡಳಿತಾಧಿಕಾರಿ (ಅಭಿವೃದ್ಧಿ) ಅಜಯ್ ಕುಮಾರ್ ಜೆನಾ ತಿಳಿಸಿದರು.

ಮಳಿಗೆಯ ಗೋಡೆ ಬಿರುಕು ಬಿಟ್ಟಿದ್ದು, ಕೂಡಲೇ ಖಜಾನೆ ತೆರೆದು ದುರಸ್ತಿಗೊಳಿಸಬೇಕು ಎಂದು ದೇವಸ್ಥಾನದ 'ರತ್ನ ಭಂಡಾರ' ಪ್ರಭಾರಿ ನಿರಂಜನ ಮೇಕಪ್ ಹೇಳಿದ್ದಾರೆ.

'ಖಜಾನೆಯಲ್ಲಿ ಚಿನ್ನ, ವಜ್ರಾಭರಣ, ಅಮೂಲ್ಯ ಕಲ್ಲುಗಳು ಮತ್ತು ಇತರೆ ಆಭರಣಗಳನ್ನು ಹೊಂದಿದ್ದರೂ ಒಳಗಿನ ಕೋಣೆ ತೆರೆಯುವ ಯಾವುದೇ ಪ್ರಯತ್ನವನ್ನು ರಾಜ್ಯ ಸರ್ಕಾರ ಮಾಡಿಲ್ಲ' ಎಂದು ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಜಯನಾರಾಯಣ ಮಿಶ್ರಾ ಆರೋಪಿಸಿದರು.

ರತ್ನ ಭಂಡಾರವನ್ನು 1803, 1926 ಮತ್ತು 1978ರಲ್ಲಿ ಮಾತ್ರ ತೆರೆದು ಪರಿಶೀಲನೆ ನಡೆಸಲಾಗಿದೆ.

ಈ ಭಂಡಾರದಲ್ಲಿ 12,831 'ಭಾರಿ' ಚಿನ್ನ, 22,153 'ಭಾರಿ' ಬೆಳ್ಳಿ ಇದೆ ಎಂದು 1978ರಲ್ಲಿ ತಿಳಿಸಲಾಗಿತ್ತು (ಒಂದು 'ಭಾರಿ' ಎಂದರೆ 11.66 ಗ್ರಾಂನಷ್ಟಾಗುತ್ತದೆ. ಅಂದರೆ ಸುಮಾರು 1,496.09 ಕೆ.ಜಿ ಚಿನ್ನ). ಇದರ ಜತೆಗೆ ಇಲ್ಲಿ ಅಮೂಲ್ಯ ಹರಳುಗಳನ್ನು ಒಳಗೊಂಡ 12,831 ಗ್ರಾಂ ಚಿನ್ನಾಭರಣ, 22,153 ಗ್ರಾಂನಷ್ಟು ಬೆಳ್ಳಿ ಆಭರಣ ಇದೆ.

## ಏಕಲವ್ಯ, ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ಪ್ರದಾನ ಮಾಡಿದ ಮುಖ್ಯಮಂತ್ರಿ ಬೊಮ್ಮಾಯಿ

# ತರಬೇತಿ ಪಡೆದ ಕೋಚ್ ನಿಯೋಜನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಕ್ರೀಡಾ ಕೋಚ್‌ಗಳ ಕೊರತೆ ಇದ್ದು, ಸೂಕ್ತ ತರಬೇತಿ ಪಡೆದು ಬರುವ ಕೋಚ್‌ಗಳನ್ನು ಕ್ರೀಡಾಪಟುಗಳ ತರಬೇತಿಗೆ ನಿಯೋಜಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಸೋಮವಾರ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ 2020ನೇ ಸಾಲಿನ ಏಕಲವ್ಯ, ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಕರ್ನಾಟಕವನ್ನು 'ಕ್ರೀಡಾ ಕರ್ನಾಟಕ'ವನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕಿದೆ. ಇದಕ್ಕೆ ಪೂರಕವಾಗಿ ತಳಮಟ್ಟದಿಂದಲೂ ಕ್ರೀಡೆಗೆ ಪ್ರೋತ್ಸಾಹ ನೀಡಲಾಗುವುದು. ಅದರಲ್ಲೂ ವಿಶೇಷವಾಗಿ ಗ್ರಾಮೀಣ ಕ್ರೀಡಾ ಕೂಟಗಳನ್ನು ವ್ಯವಸ್ಥಿತವಾಗಿ ನಡೆಸಲಾಗುವುದು. ಕಬಡ್ಡಿ, ಕಂಬಳ, ಎತ್ತಿನಗಾಡಿ ಸ್ಪರ್ಧೆ, ಕಲ್ಲು ಗುಂಡು ಎತ್ತುವುದು ಹೀಗೆ ಹಲವು ಕ್ರೀಡೆಗಳಿಗೆ ಪ್ರೋತ್ಸಾಹ ನೀಡಲಾಗುವುದು ಎಂದರು.

'ಪ್ಯಾರಿಸ್‌ನಲ್ಲಿ ನಡೆಯುವ ಒಲಿಂಪಿಕ್‌ಗಾಗಿ ರಾಜ್ಯದ 75 ಕ್ರೀಡಾ ಪಟುಗಳಿಗೆ ವಿಶ್ವ ಮಟ್ಟದ ತರಬೇತಿ ನೀಡಲಾಗುತ್ತಿದೆ. ನಾಲ್ಕು ವರ್ಷ ಅವಧಿಗೆ ಇವರನ್ನು ದತ್ತು ಪಡೆದು ತರಬೇತಿ ನೀಡುತ್ತಿದ್ದೇವೆ. ಅವಶ್ಯಕತೆ ಇದ್ದರೆ ಹೆಚ್ಚಿನ ತರಬೇತಿಗೆ ವಿದೇಶಗಳಿಗೂ ಕಳುಹಿಸಲಾಗುವುದು.

| ಪ್ರಶಸ್ತಿ ಪುರಸ್ಕೃತರು | |
|---|---|
| **ಏಕಲವ್ಯ** | |
| ಅಥ್ಲೀಟ್ | ಕ್ರೀಡೆ |
| ಜೇಸನ್ ಕೆ.ಎಸ್. | ಅಥ್ಲೆಟಿಕ್ಸ್ |
| ನಿತಿನ್ | ನೆಟ್‌ಬಾಲ್ |
| ಅಶ್ವಿನಿ ಭಟ್ | ಬ್ಯಾಡ್ಮಿಂಟನ್ |
| ಜಿ.ತರುಣ್ ಕೃಷ್ಣಪ್ರಸಾದ್ | ರೋಯಿಂಗ್ |
| ಲೋಪಮುದ್ರಾ ತಿಮ್ಮಯ್ಯ | ಬ್ಯಾಸ್ಕೆಟ್‌ಬಾಲ್ |
| ಎಸ್.ವಿ.ಲಿಖಿತ್ | ಈಜು |
| ಕರುಣ್ ನಾಯರ್ | ಕ್ರಿಕೆಟ್ |
| ಅನರ್ಘ್ಯ ಮಂಜುನಾಥ್ | ಟೇಬಲ್ ಟೆನಿಸ್ |
| ದಾನಮ್ಮ ಚಿಚಖಂಡಿ | ಸೈಕ್ಲಿಂಗ್ |
| ಅಶ್ವಲ್ ರೈ | ವಾಲಿಬಾಲ್ |
| ವಸುಂಧರಾ ಎಂ.ಎನ್. | ಜುಡೊ |
| ಪ್ರಧಾನ್ ಸೋಮಣ್ಣ | ಹಾಕಿ |
| ಪ್ರಶಾಂತ್ ಕುಮಾರ್ ರೈ | ಕಬಡ್ಡಿ |
| ರಾಧಾ ವಿ. | ಪ್ಯಾರಾ ಅಥ್ಲೆಟಿಕ್ಸ್ |
| ಮುನಿಲ್‌ಬಾಬಾ | ಕೊಕ್ಕೊ |
| **ಕರ್ನಾಟಕ ಕ್ರೀಡಾರತ್ನ** | |
| ಪೂಜಾ ಗಾಲಿ | ಅಟ್ಯಾ–ಪಾಟ್ಯಾ |
| ಬಿ.ಎನ್.ಕಿರಣ್ ಕುಮಾರ್ | ಬಾಲ್ ಬ್ಯಾಡ್ಮಿಂಟನ್ |
| ಗೋಪಾಲ ನಾಯ್ಕ್ | ಕಂಬಳ |
| ದೀಕ್ಷಾ ಕೆ. | ಕೊಕ್ಕೊ |
| ಶಿವಯೋಗಿ ಬಸಪ್ಪ ಬಾಗೇವಾಡಿ | ಗುಂಡುಕಲ್ಲು ಎತ್ತುವುದು |
| ಲಕ್ಷ್ಮೀ ಬಿ. ರೆಡ್ಡರ್ | ಕುಸ್ತಿ |
| ಪಿ.ಗೋಪಾಲಕೃಷ್ಣ | ಯೋಗ |
| ರಾಘವೇಂದ್ರ ಎಸ್. ಹೊಂಡದಕೇರಿ | ಪವರ್‌ಲಿಫ್ಟಿಂಗ್ |
| ಸಿದ್ದಪ್ಪ ವಾಂದಪ್ಪ ಹೊಸಮನಿ | ಸಂಗ್ರಾಣಕಲ್ಲು ಎತ್ತುವುದು |
| ಸೂರಜ್ ಎಸ್. ಅಣ್ಣಿಕೇರಿ | ಕುಸ್ತಿ |
| ಶಶಾಂಕ್ ಬಿ.ಎಂ | ಪ್ಯಾರಾ ಈಜು |
| ಡಿ.ನಾಗರಾಜು | ಯೋಗ |
| ಶ್ರೀವರ್ಷಿಣಿ | ಜಿಮ್ನಾಸ್ಟಿಕ್ಸ್ |
| ಅವಿನಾಶ್ ವಿ. ನಾಯ್ಕ | ಜುಡೊ |



ಬೆಂಗಳೂರಿನಲ್ಲಿ ಸೋಮವಾರ 'ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ' ಆಯೋಜಿಸಿದ್ದ ಸಮಾರಂಭದಲ್ಲಿ (ಕುಳಿತವರು ಎಡದಿಂದ) ಅನರ್ಘ್ಯ ಮಂಜುನಾಥ್ (ಟೇಬಲ್ ಟೆನಿಸ್), ಅಶ್ವಲ್ ರೈ (ವಾಲಿಬಾಲ್), ಪ್ರಧಾನ್ ಸೋಮಣ್ಣ (ಹಾಕಿ), ಕರುಣ್ ನಾಯರ್ (ಕ್ರಿಕೆಟ್), ಮತ್ತು ರಾಧಾ ವಿ (ಪ್ಯಾರಾ ಅಥ್ಲೆಟ್) ರವರಿಗೆ 'ಏಕಲವ್ಯ ಪ್ರಶಸ್ತಿ' ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಡಾ.ಕೆ ಗೋವಿಂದರಾಜು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ ನಾರಾಯಣಗೌಡ, ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಡಾ.ಎಚ್.ಎನ್ ಗೋಪಾಲಕೃಷ್ಣ ಇದ್ದರು – ಪ್ರಜಾವಾಣಿ ಚಿತ್ರ

ಕೆಲವಾದರೂ ಒಲಿಂಪಿಕ್ ಕೂಟದಲ್ಲಿ ಭಾಗವಹಿಸಬೇಕು' ಎಂದು ಬೊಮ್ಮಾಯಿ ಹೇಳಿದರು.

'ಗ್ರಾಮೀಣ ಕ್ರೀಡೆಗಳ ಮೂಲಕ ಪ್ರತಿಭೆಗಳನ್ನು ಹುಡುಕುವ ಪ್ರಯತ್ನ ನಡೆಸಿದ್ದೇವೆ. ಇದರ ಜತೆ ಯುವ ಜನರ ಸಬಲೀಕರಣವೂ ಆಗಬೇಕು. ಶಿಕ್ಷಣ, ಉದ್ಯೋಗದ ಮೂಲಕ ಸಬಲೀಕರಿಸುವುದು ಅಗತ್ಯ ಆಗಿದೆ. ಇದಕ್ಕಾಗಿ ಸ್ವಾಮಿ ವಿವೇಕಾನಂದ ಯುವ ಶಕ್ತಿ ಯೋಜನೆಯನ್ನು ಆರಂಭಿಸಿದ್ದೇವೆ. ಪ್ರತಿ ಗ್ರಾಮದಲ್ಲಿ 30 ಜನರನ್ನು ಗುರುತಿಸಿ ಸಂಘವನ್ನು ರೂಪಿಸಲಾಗುವುದು. ಇವರಿಗೆ ವಿವಿಧ ಉತ್ಪನ್ನಗಳ ತಯಾರಿಕೆಯ ತರಬೇತಿ ನೀಡಿ ಮಾರುಕಟ್ಟೆಯನ್ನೂ ಒದಗಿಸಲಾಗುವುದು' ಎಂದು ಹೇಳಿದರು.

**ಮುಖ್ಯಾಂಶಗಳು**

- 2020ನೇ ಸಾಲಿನ ಪ್ರಶಸ್ತಿ ಪ್ರದಾನ
- ಗ್ರಾಮೀಣ ಕ್ರೀಡೆಗಳ ಮೂಲಕ ಪ್ರತಿಭೆಗಳ ಹುಡುಕುವ ಪ್ರಯತ್ನ

ಸ್ವಾಮಿ ವಿವೇಕಾನಂದ ಯುವ ಶಕ್ತಿ ಯೋಜನೆಯಿಂದ ಒಂದು ವರ್ಷಕ್ಕೆ ಸುಮಾರು 5 ಲಕ್ಷ ಯುವಕರಿಗೆ ಉದ್ಯೋಗ ಸೃಷ್ಟಿಸಿದಂತಾಗುತ್ತದೆ. ಇದು ವಿನೂತನ ಯೋಜನೆಯಾಗಿದ್ದು, ಆರ್ಥಿಕವಾಗಿ, ಸಾಮಾಜಿಕವಾಗಿ ಯುವಕರ ಸಾಮರ್ಥ್ಯ ಹೆಚ್ಚಿಸುವ ಕೆಲಸವನ್ನು ಸರ್ಕಾರ ನಿರಂತರವಾಗಿ ಮಾಡಲಿದೆ ಎಂದು ಬೊಮ್ಮಾಯಿ ತಿಳಿಸಿದರು. ಕಾರ್ಯಕ್ರಮದಲ್ಲಿ ಕ್ರೀಡಾ ಸಚಿವ ನಾರಾಯಣಗೌಡ ಭಾಗವಹಿಸಿದ್ದರು.

**ಪ್ರಶಸ್ತಿ ಪ್ರದಾನ:** ಕಾರ್ಯಕ್ರಮದಲ್ಲಿ ವಿವಿಧ ಕ್ರೀಡಾ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜೆ.ವಿ. ಗಾಂವಕರ್ (ಅಥ್ಲೆಟಿಕ್ಸ್), ಕ್ಯಾಪ್ಟನ್ ದಿಲೀಪ್ ಕುಮಾರ್ (ಕಯಾಕಿಂಗ್), ವೀರನಗೌಡ ಪಾಟೀಲ (ಅಟ್ಯಾ ಪಟ್ಯಾ), ಎಂ. ನಿರಂಜನಮೂರ್ತಿ (ಯೋಗ) ಮತ್ತು ಎ.ನಾಗರಾಜು (ಕಬಡ್ಡಿ) ಅವರಿಗೆ ಜೀವಮಾನದ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

# ಆ್ಯಂಡಿ, ಮೆಡ್ವೆಡೆವ್ ಶುಭಾರಂಭ

## ಅಮೆರಿಕ ಓಪನ್ ಟೆನಿಸ್ ಟೂರ್ನಿ: ಗಾರ್ಸಿಯಾಗೆ ಜಯ

**ನ್ಯೂಯಾರ್ಕ್ (ಎಎಫ್‌ಪಿ):** ಬ್ರಿಟನ್‌ನ ಆ್ಯಂಡಿ ಮರೆ ಅವರು ಅಮೆರಿಕ ಓಪನ್ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಸೋಮವಾರ ರಾತ್ರಿ ಇಲ್ಲಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಅವರು 7-5, 6-3, 6-3ರಿಂದ ಅರ್ಜೆಂಟೀನಾದ ಫ್ರಾನ್ಸಿಸ್ಕೊ ಸೆರುಂಡೊಲೊ ಅವರನ್ನು ಪರಾಭವಗೊಳಿಸಿದರು. 2012ರಲ್ಲಿ ಇದೇ ದಿನ ಆ್ಯಂಡಿ ತಮ್ಮ ಮೊದಲ ಗ್ರ್ಯಾನ್‌ಸ್ಲಾಮ್ (ಅಮೆರಿಕ ಓಪನ್) ಪ್ರಶಸ್ತಿ ಜಯಿಸಿದ್ದರು.

35 ವರ್ಷದ ಆಟಗಾರ ಆ್ಯಂಡಿ, 2017ರ ಬಳಿಕ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಮೊದಲ ಬಾರಿ ನೇರ ಸೆಟ್‌ಗಳ ಜಯ ಸಾಧಿಸಿದರು.

ವಿಶ್ವದ ಅಗ್ರಕ್ರಮಾಂಕದ ಆಟಗಾರ, ರಷ್ಯಾದ ಡೇನಿಯಲ್ ಮೆಡ್ವೆಡೆವ್ 6-2, 6-4, 6-0ರಿಂದ ಅಮೆರಿಕದ ಸ್ಟೆಫಾನ್ ಕೊಜ್ಲೊವ್ ಎದುರು ಗೆದ್ದು ಎರಡನೇ ಸುತ್ತು ಪ್ರವೇಶಿಸಿದರು.

ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯಗಳಲ್ಲಿ ಫ್ರಾನ್ಸ್‌ನ ಕರೋಲಿನ್ ಗಾರ್ಸಿಯಾ 6-2, 6-4ರಿಂದ ಕ್ಯಾಮಿಲಾ ರಹಿಮೊವಾ ಎದುರು, ಅಮೆರಿಕದ ಅಲಿಸನ್ ರಿಸ್ಕೆ 6-2, 6-4ರಿಂದ ತಮ್ಮದೇ ದೇಶದ ಎಲೆನಾ ಯು ಎದುರು ಗೆದ್ದರು.



ಆ್ಯಂಡಿ ಮರೆ ಆಟದ ರೀತಿ– ಎಎಫ್‌ಪಿ ಚಿತ್ರ

# ಈಕ್ವೆಸ್ಟ್ರಿಯನ್: ಬಾಲಾಜಿಗೆ ಅಗ್ರಸ್ಥಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಡಿಇಸಿ ಕ್ಲಬ್‌ನ ಬಾಲಾಜಿ ವಿ. ಶಂಕರ್ ಅವರು ಈಕ್ವೆಸ್ಟ್ರಿಯನ್ ಪ್ರೀಮಿಯರ್ ಲೀಗ್‌ನ 130 ಸೆಂ.ಮೀ. ಶೋ ಜಂಪಿಂಗ್‌ನಲ್ಲಿ ಅಗ್ರಸ್ಥಾನ ಗಳಿಸಿದರು.


ಭಾನುವಾರ ಎಂಬೆಸಿ ಇಂಟರ್‌ನ್ಯಾಷನಲ್ ರೈಡಿಂಗ್ ಸ್ಕೂಲ್ ಆಯೋಜಿಸಿದ್ದ ಲೀಗ್‌ನಲ್ಲಿ ಲೂಟ್ರೆಲ್ಲೊ ಎಲ್‌ವಿ ಅಶ್ವವನ್ನು ಸವಾರಿ ಮಾಡಿದ ಬಾಲಾಜಿ ಅವರು, ಕೇಥ್ರಿ ರಿಯೊ (ಲಿಯೊನಾರ್ಡೊ ಅಶ್ವ, ಯುಆರ್‌ಬಿ ಕ್ಲಬ್) ಅವರನ್ನು ಹಿಂದಿಕ್ಕಿದರು. ಚೇತನ್‌ರೆಡ್ಡಿ (ಸ್ಯಾಂಡ್ರಾ ಬ್ಲ್ಯೂ, ಇಂಡಿಯನ್) ಮೂರನೇ ಸ್ಥಾನ ಗಳಿಸಿದರು.



ಲೂಟ್ರೆಲ್ಲೊ ಕುದುರೆಯೊಂದಿಗೆ ಗುರಿಯತ್ತ ಮುನ್ನುಗ್ಗಿದ ಬಾಲಾಜಿ ಶಂಕರ್

**ಇನ್ನುಳಿದ ಫಲಿತಾಂಶಗಳು:** 120–125 ಸೆ.ಮೀ. ಶೋ ಜಂಪಿಂಗ್: ತಿಯಾಶಾ ವತುಲ್ (ಡೆಮಾಕ್ರಾಟಿಕ್, ಯುಆರ್‌ಬಿ)–1, ತನ್ಮಯ್ ವಾಂಡ್ರೆ (ವೊಲ್‌ಬೀಟ್, ಯುಆರ್‌ಬಿ)–2, ಸಂಯೋಗಿತಾ ಲಿಮಯೆ (ಅಬ್ರಕಡಬ್ರ, ಇಐಆರ್‌ಎಸ್). 115 ಸೆ.ಮೀ. ಶೋ ಜಂಪಿಂಗ್: ಭರತ್ ಮನೋಹರನ್ (ಬ್ಯಾಂಗಿ, ಇಸಿಇ)–1, ಅನಿಕಾ ಧುಲರ್ (ಚಾಪ್‌ಸ್ಟಿಕ್, ಎಫ್‌ಎಸ್‌ಎಸ್)–2, ಶ್ಲೋಕ್ ಜುಂಜುನ್‌ವಾಲಾ (ಹಲ್‌ಚಲ್, ಎಆರ್‌ಸಿ)–3. 110 ಸೆ.ಮೀ. ಶೋ ಜಂಪಿಂಗ್: ಹರ್ಷ ದಗ್ಗುಬಾಟಿ (ಡೆಲಾನೊ ಡಬ್ಲ್ಯು, ಡಿಇಸಿ)–1, ಬಾಲಾಜಿ. ವಿ. (ಲೂಸಿಫರ್ ವ್ಯಾನ್, ಡಿಇಸಿ)–2, ಆದ್ಯಾ ರಾವ್ (ಜೂಲನ್, ಎಆರ್‌ಸಿ)–3.

**ಷೇರುಪೇಟೆ ವಹಿವಾಟು** 861





**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 17,558 |
| ಇಂದಿನ ಅಂತ್ಯ | 17,312 |
| ▼ | 246 |
| ದಿನದ ಕನಿಷ್ಠ | 17,166 |

**ವಿನಿಮಯ ದರ**

| | |
|---|---|
| $ ಡಾಲರ್ | 79.91 |
| £ ಪೌಂಡ್ | 93.46 |
| € ಯುರೊ | 79.67 |
| ¥ ಯೆನ್ (100ಕ್ಕೆ) | 58 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| **ಬೆಂಗಳೂರು** | |
| 100 ಮೊಟ್ಟೆಗೆ | ₹420 |
| 12 ಮೊಟ್ಟೆಗೆ | ₹60 |
| **ಮೈಸೂರು** | |
| 100 ಮೊಟ್ಟೆಗೆ | ₹422 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1680 (1710) |
| ಸೋಯಾ (ರಿಫೈನ್ಡ್) | ₹1265 (1265) |
| ಸೂರ್ಯಕಾಂತಿ (ರಿಫೈನ್ಡ್) | ₹1510 (1510 |
| ಪಾಮೋಲಿನ್ | ₹1070 (1070) |

**ರಾಮನಗರ ರೇಷ್ಮೆಗೂಡು ಧಾರಣೆ**

| | |
|---|---|
| ಮಿಶ್ರತಳಿ (ಸಿ.ಬಿ) | ₹355-680 |
| ದ್ವಿತಳಿ (ಬಿ.ವಿ) | ₹277-808 |

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹155 |
| ಆರ್‌ಎಸ್‌ಎಸ್-5 | ₹146 |
| ಗುಡ್ ಲಾಟ್ | ₹138 |

**ತೆಂಗು ಧಾರಣೆ (ಸಾವಿರಕ್ಕೆ)**

| | |
|---|---|
| **ಮಂಗಳೂರು** | |
| 1ನೇ ದರ್ಜೆ | ₹16000-20000 |
| 2ನೇ ದರ್ಜೆ | ₹12000-15000 |

## 'ಚೀನಾ ಕಂಪನಿಗಳ ಸ್ಮಾರ್ಟ್‌ಫೋನ್ ನಿಷೇಧ ಇಲ್ಲ'

**ನವದೆಹಲಿ (ಪಿಟಿಐ):** 'ಚೀನಾ ಕಂಪನಿಗಳ ₹ 12 ಸಾವಿರಕ್ಕಿಂತ ಕಡಿಮೆ ಬೆಲೆಯ ಸ್ಮಾರ್ಟ್‌ಫೋನ್‌ಗಳನ್ನು ದೇಶದಲ್ಲಿ ನಿಷೇಧಿಸುವ ಯಾವುದೇ ಆಲೋಚನೆಯೂ ಇಲ್ಲ' ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಸೋಮವಾರ ಸ್ಪಷ್ಟಪಡಿಸಿದ್ದಾರೆ.

ಭಾರತದಿಂದ ರಫ್ತು ಹೆಚ್ಚಿಸುವಂತೆ ಸರ್ಕಾರವು ಚೀನಾದ ಮೊಬೈಲ್ ತಯಾರಕ ಕಂಪನಿಗಳನ್ನು ಕೇಳಿದೆ ಎಂದು ಅವರು ಹೇಳಿದ್ದಾರೆ.

'ದೇಶದ ಎಲೆಕ್ಟ್ರಾನಿಕ್ ವ್ಯವಸ್ಥೆಯಲ್ಲಿ ದೇಶಿ ಕಂಪನಿಗಳ ಪಾತ್ರವೂ ಇದೆ. ಆದರೆ, ವಿದೇಶಿ ಬ್ರ್ಯಾಂಡ್‌ಗಳನ್ನು ಹೊರಗಿಡುವುದು ಎನ್ನುವುದು ಅದರ ಅರ್ಥ ಅಲ್ಲ ಎಂದು ತಿಳಿಸಿದ್ದಾರೆ.

## ದಿನದ ವಹಿವಾಟಿನಲ್ಲಿ ಹೂಡಿಕೆದಾರರಿಗೆ ₹2.39 ಲಕ್ಷ ಕೋಟಿ ನಷ್ಟ

# ಮಾರಾಟದ ಒತ್ತಡಕ್ಕೆ ಕುಸಿದ ಸೆನ್ಸೆಕ್ಸ್

**ಮುಂಬೈ (ಪಿಟಿಐ):** ದೇಶದ ಷೇರುಪೇಟೆಗಳು ಮಾರಾಟದ ಒತ್ತಡಕ್ಕೆ ಒಳಗಾಗಿ ಸೋಮವಾರ ಕುಸಿತ ಕಂಡವು.

ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಹೆಚ್ಚಿಸುವುದನ್ನು ಮುಂದುವರಿಸುವುದಾಗಿ ಹೇಳಿದೆ. ಇದು ಜಾಗತಿಕ ಮಾರುಕಟ್ಟೆಯಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಯಿತು. ಹೀಗಾಗಿ ದೇಶದಲ್ಲಿ ಐ.ಟಿ, ತಂತ್ರಜ್ಞಾನ ಮತ್ತು ಬ್ಯಾಂಕಿಂಗ್ ವಲಯದ ಷೇರುಗಳು ಹೆಚ್ಚಿನ ಮಾರಾಟದ ಒತ್ತಡಕ್ಕೆ ಒಳಗಾದವು.


ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಮತ್ತು ಕಚ್ಚಾ ತೈಲ ದರ ಏರಿಕೆಯು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿದವು ಎಂದು ವಿಶ್ಲೇಷಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್, ವಹಿವಾಟಿನ ಆರಂಭದಲ್ಲಿ 1,460 ಅಂಶಗಳಷ್ಟು ಕುಸಿತ ಕಂಡಿತ್ತು. ಆ ಬಳಿಕ ತುಸು ಚೇತರಿಕೆ ಹಾದಿಗೆ ಮರಳಿತು. ಅಂತಿಮವಾಗಿ 861 ಅಂಶಗಳ ಇಳಿಕೆಯೊಂದಿಗೆ 57,972 ಅಂಶಗಳಿಗೆ ತಲುಪಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 246 ಅಂಶ ಇಳಿಕೆಯಾಗಿ 17,312 ಅಂಶಗಳಿಗೆ ತಲುಪಿತು.

ನಕಾರಾತ್ಮಕ ವಹಿವಾಟಿನಿಂದ ದಿನದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹2.39 ಲಕ್ಷ ಕೋಟಿ ಕರಗಿದೆ. ಇದರಿಂದಾಗಿ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 274.56 ಲಕ್ಷ ಕೋಟಿಗೆ ಇಳಿಕೆ ಆಗಿದೆ.

**ಗರಿಷ್ಠ ನಷ್ಟ (%)**





### 'ರೂಪಾಯಿ ಮೇಲೆ ಒತ್ತಡ ಹೆಚ್ಚಲಿದೆ'

'ಜಾಗತಿಕ ಆರ್ಥಿಕತೆಯ ಮಂದಗತಿಯ ಬೆಳವಣಿಗೆ ಮತ್ತು ಹಣದುಬ್ಬರದ ಆತಂಕವು ರೂಪಾಯಿ ಮೇಲೆ ಇನ್ನಷ್ಟು ಒತ್ತಡ ತರಬಹುದು' ಎಂದು ಶೇರ್‌ಖಾನ್ ಬ್ರೋಕರೇಜ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.

ಇತರೆ ಕರೆನ್ಸಿಗಳ ಎದುರು ಡಾಲರ್ ಮೌಲ್ಯ ವೃದ್ಧಿ ಆಗಿರುವುದು ಹಾಗೂ ಕಚ್ಚಾ ತೈಲ ದರ ಏರಿಕೆಯಿಂದಾಗಿ ರೂಪಾಯಿ ಮೌಲ್ಯ ಕುಸಿತ ಕಾಣುವಂತಾಯಿತು. ಆರ್‌ಬಿಐ ಮಧ್ಯಪ್ರವೇಶದಿಂದಾಗಿ ಸೋಮವಾರ ರೂಪಾಯಿ ಹೆಚ್ಚಿನ ಕುಸಿತ ಕಾಣುವುದು ತಪ್ಪಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಜುಲೈ 20ರಂದು ಮೊದಲ ಬಾರಿಗೆ ರೂಪಾಯಿ ಮೌಲ್ಯವು ₹80ರ ಗಡಿ ದಾಟಿ, ₹80.05ಕ್ಕೆ ತಲುಪಿತ್ತು.

ಬ್ರೆಂಟ್ ಕಚ್ಚಾ ತೈಲ ದರ ಶೇ 0.79ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 101.8 ಡಾಲರ್‌ಗೆ ತಲುಪಿತು.

**ಮುಂಬೈ ಧಾರಣೆ**

**ಶೇಂಗಾ**

29-8-2022

| | |
|---|---|
| ಜಾವಾ 70/80(ಹೊಸ) | 11650-11700 |
| ಜಾವಾ 80/90(ಹೊಸ) | 10950-11000 |
| ದಪ್ಪ ಮಧ್ಯಪ್ರದೇಶ(ಹೊಸ) | 10300-10400 |
| ದಪ್ಪ ಗುಜರಾತ್(ಹೊಸ) | 10700-10800 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1690 (1720) |
| ಒಂದು ವಾರದ ಡೆಲಿವರಿ | 1685 (1715) |
| ಸೋಯಾ ಕಚ್ಚಾ | 1212 (1220) |
| ಪಾಮ್ ವಾರದ ಡೆಲಿವರಿ | 1058 (1068) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1460 (1460) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
51,150 (51,325)
ಬೆಳ್ಳಿ ಕೆ.ಜಿ 54,350 (55,100)

ಆವರಣದಲ್ಲಿ ಶನಿವಾರದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

## ಫೆಡರಲ್ ರಿಸರ್ವ್‌ನಿಂದ ಬಡ್ಡಿದರ ಏರಿಕೆ ನಿರ್ಧಾರ: ತಜ್ಞರ ಹೇಳಿಕೆ

# ಅಲ್ಪಾವಧಿಗೆ ತಗ್ಗಲಿದೆ ವಿದೇಶಿ ಹೂಡಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಣದುಬ್ಬರವನ್ನು ನಿಯಂತ್ರಿಸಲು ಬಡ್ಡಿದರ ಹೆಚ್ಚಳ ಮಾಡುವುದನ್ನು ಮುಂದುವರಿಸಲಾಗುವುದು ಎಂದು ಅಮೆರಿಕದ ಫೆಡರಲ್ ರಿಸರ್ವ್ ಜೆರೊಮ್ ಪೋವೆಲ್ ಹೇಳಿದ್ದಾರೆ. ಇದರಿಂದಾಗಿ ಭಾರತದ ಷೇರುಪೇಟೆಗಳಲ್ಲಿ ಅಲ್ಪಾವಧಿಯಲ್ಲಿ ವಿದೇಶಿ ಬಂಡವಾಳ (ಎಫ್‌ಪಿಐ) ಒಳಹರಿವು ಕಡಿಮೆ ಆಗುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ.

ಅಮೆರಿಕದ ಹಣದುಬ್ಬರವು ಜುಲೈನಲ್ಲಿ ಇಳಿಕೆ ಕಂಡಿದೆ. ಹೀಗಾಗಿ, ಫೆಡರಲ್ ರಿಸರ್ವ್‌ನ ಹಣಕಾಸು ನೀತಿಯು ಬಿಗಿಯಾಗಿ ಇರುವುದಿಲ್ಲ ಎನ್ನುವ ನಿರೀಕ್ಷೆಯನ್ನು ಹೂಡಿಕೆದಾರರು ಹೊಂದಿದ್ದರು. ಆದರೆ, ಬಡ್ಡಿದರ ಹೆಚ್ಚಳವು ಮುಂದುವರಿಯಲಿದೆ ಎಂದು ಪೋವೆಲ್ ಅವರು ಕೇಂದ್ರೀಯ ಬ್ಯಾಂಕ್‌ಗಳ ಜಾಗತಿಕ ಸಮ್ಮೇಳನದಲ್ಲಿ ಹೇಳಿದ್ದಾರೆ.

'ಪೋವೆಲ್ ಹೇಳಿಕೆಯು ಭಾರತದಲ್ಲಿ ಅಲ್ಪಾವಧಿಯಲ್ಲಿ ವಿದೇಶಿ ಬಂಡವಾಳ ಒಳಹರಿವಿನ ಮೇಲೆ ಮತ್ತು ಷೇರುಪೇಟೆಗಳ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡಲಿದೆ' ಎಂದು ಜಿಯೋಜಿತ್ ಹಣಕಾಸು ಸೇವೆಗಳ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅಭಿಪ್ರಾಯಪಟ್ಟರು.

'ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಆಗಸ್ಟ್ 29ರವರೆಗೆ ₹ 49 ಸಾವಿರ ಕೋಟಿಗೂ ಅಧಿಕ ಮೌಲ್ಯದ ಷೇರುಗಳನ್ನು ವಿದೇಶಿ ಹೂಡಿಕೆದಾರರು ಖರೀದಿಸಿದ್ದಾರೆ. ಅಮೆರಿಕದ ಬಾಂಡ್‌ಗಳಿಕೆ ಮತ್ತು ಡಾಲರ್ ಮೌಲ್ಯ ಹೆಚ್ಚಾಗುತ್ತಿದ್ದರು ಸಹ ಇಷ್ಟು ಮೊತ್ತದ ಖರೀದಿ ಮಾಡಿರುವುದು ಅವರು ಭಾರತದ ಆರ್ಥಿಕತೆಯ ಮೇಲೆ ಹೊಂದಿರುವ ವಿಶ್ವಾಸವನ್ನು ಸೂಚಿಸುತ್ತದೆ' ಎಂದು ಅವರು ಹೇಳಿದರು.

ಹಣಕಾಸು, ಬಂಡವಾಳ ಸರಕು, ಎಫ್‌ಎಂಸಿಜಿ ಮತ್ತು ದೂರಸಂಪರ್ಕ ವಲಯದ ಷೇರುಗಳನ್ನು ವಿದೇಶಿ ಹೂಡಿಕೆದಾರರು ಹೆಚ್ಚಾಗಿ ಖರೀದಿಸುತ್ತಿದ್ದಾರೆ ಎಂದರು.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 400-420 |
| ನಡುಗೋಲು | 450-480 |
| ರಾಶಿ | 500-600 |
| ರಾಶಿ ಉತ್ತಮ | 550-600 |
| ಜರಡಿ | 600-650 |
| ಹೆರಕಿದ್ದು | 1000-1100 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-1000 |
| ಹಸಿರು ಅತಿ ಉತ್ತಮ | 1150-1250 |
| ಕಾಳು ಮೆಣಸು | 490 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-56000 |
| **ಕಾರ್ಕಳ** | |
| ಹೊಸತು | 40000-47500 |
| ಹಳತು | 46000-56000 |
| **ಕುಮಟ** | |
| ಚಿಪ್ಪು | 24569-32809 |
| ಕೋಕ | 21509-32529 |
| ಹಳೆಚಾಲಿ | 43000-48019 |
| ಹೊಸಚಾಲಿ | 38099-42599 |
| **ಪುತ್ತೂರು** | |
| ಕೋಕ | 11000-26000 |
| ಹೊಸತು | 34500-47500 |
| **ಸಿದ್ದಾಪುರ** | |
| ಬಿಳಿಗೋಟು | 29729-35411 |
| ಚಾಲಿ | 38699-43299 |
| ಕೋಕ | 26199-34969 |
| ಕೆಂಪುಗೋಟು | 30119-35399 |
| ರಾಶಿ | 50899-52009 |
| ತಟ್ಟಿಬೆಟ್ಟೆ | 45609-50799 |
| **ಶಿರಸಿ** | |
| ಬೆಟ್ಟೆ | 41199-50009 |
| ಬಿಳಿಗೋಟು | 26299-35509 |
| ಚಾಲಿ | 37599-43899 |
| ರಾಶಿ | 47399-52999 |
| **ಯಲ್ಲಾಪುರ** | |
| ಬಿಳಿಗೋಟು | 27312-35899 |
| ಚಾಲಿ | 37819-43570 |
| ಕೋಕ | 18009-32612 |
| ಕೆಂಪುಗೋಟು | 27319-37009 |
| ರಾಶಿ | 50089-57000 |
| ತಟ್ಟಿಬೆಟ್ಟೆ | 39599-49879 |
| **ಶಿವಮೊಗ್ಗ** | |
| ಬೆಟ್ಟೆ | 53199-56296 |
| ಗೊರಬಲು | 1750-39699 |
| ರಾಶಿ | 48039-54299 |
| ಸರಕು | 58109-80896 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 16800 | 16000 | 16550 | 242 ಸೆಂಟ್ಸ್ |
| ಎಸಿ | 9100 | 8500 | 9200 | |
| ಆರ್‌ಪಿ | 10200 | 9800 | 9825 | ಲಂಡನ್ |
| ಆರ್‌ಸಿ | 4800 | 4600 | 4750 | 2281 ಡಾಲರ್ಸ್ |

## 5ಜಿ ನೆಟ್‌ವರ್ಕ್‌ಗೆ ₹ 2 ಲಕ್ಷ ಕೋಟಿ ಹೂಡಿಕೆ: ಅಂಬಾನಿ

# 'ದೀಪಾವಳಿಯಿಂದ ಜಿಯೊ 5ಜಿ ಸೇವೆ'

**ನವದೆಹಲಿ (ಪಿಟಿಐ):** 'ದೆಹಲಿ, ಮುಂಬೈ, ಚೆನ್ನೈ ಮತ್ತು ಕೋಲ್ಕತ್ತ ಸೇರಿದಂತೆ ಪ್ರಮುಖ ನಗರಗಳಲ್ಲಿ ದೀಪಾವಳಿ ವೇಳೆಗೆ 5ಜಿ ಸೇವೆಗಳು ಆರಂಭ ಆಗಲಿವೆ' ಎಂದು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಆರ್‌ಐಎಲ್) ಅಧ್ಯಕ್ಷ ಮುಕೇಶ್ ಅಂಬಾನಿ ಸೋಮವಾರ ಕಂಪನಿಯ ವಾರ್ಷಿಕ ಸಭೆಯಲ್ಲಿ ಮಾಹಿತಿ ನೀಡಿದ್ದಾರೆ.

ರಿಲಯನ್ಸ್ ಜಿಯೊ ಕಂಪನಿಯು 5ಜಿ ನೆಟ್‌ವರ್ಕ್‌ಗಾಗಿ ₹ 2 ಲಕ್ಷ ಕೋಟಿ ಹೂಡಿಕೆ ಮಾಡಲಿದೆ. 2023ರ ಡಿಸೆಂಬರ್ ವೇಳೆಗೆ ದೇಶದಾದ್ಯಂತ 5ಜಿ ಸೇವೆಗಳು ಆರಂಭವಾಗಲಿವೆ ಎಂದು ತಿಳಿಸಿದ್ದಾರೆ.

5ಜಿ ಪರಿಹಾರಗಳಿಗಾಗಿ ಕ್ವಾಲ್ಕಂ ಜೊತೆ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ. ಫೈಬರ್–ಟು–ದಿ–ಹೋಮ್ ಸೌಲಭ್ಯ ಪಡೆಯುತ್ತಿರುವ ಮೂವರಲ್ಲಿ ಇಬ್ಬರು ಜಿಯೊ ಫೈಬರ್ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಪೆಟ್ರೋಕೆಮಿಕಲ್ ತಯಾರಿಕಾ ಸಾಮರ್ಥ್ಯ ವೃದ್ಧಿಗೆ ₹ 75 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ಕಂಪನಿ ತಿಳಿಸಿದೆ.

ರಿಲಯನ್ಸ್ ರಿಟೇಲ್ ಕಂಪನಿಯು ಈ ವರ್ಷವೇ ಎಫ್‌ಎಂಸಿಜಿ ವಹಿವಾಟನ್ನು ಆರಂಭಿಸಲಿದೆ ಎಂದು ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿ., ನಿರ್ದೇಶಕಿ ಇಶಾ ಅಂಬಾನಿ ತಿಳಿಸಿದ್ದಾರೆ.

### ವಾಟ್ಸ್‌ಆ್ಯಪ್–ಜಿಯೊಮಾರ್ಟ್ ಒಪ್ಪಂದ

ವಾಟ್ಸ್‌ಆ್ಯಪ್ ಮೂಲಕವೇ ಜಿಯೊಮಾರ್ಟ್‌ನಲ್ಲಿ ದಿನಸಿ ವಸ್ತುಗಳನ್ನು ಖರೀದಿಸುವ ವ್ಯವಸ್ಥೆಗೆ ಚಾಲನೆ ನೀಡಲಾಗಿದೆ. ಈ ಮೊದಲು ವಾಟ್ಸ್‌ಆ್ಯಪ್ ಮೂಲಕ ದಿನಸಿ ವಸ್ತುಗಳಿಗೆ ಆರ್ಡರ್ ನೀಡಲು ಮಾತ್ರ ಅವಕಾಶ ಇತ್ತು. ಆ ಬಳಿಕ ಪಾವತಿ ಪ್ರಕ್ರಿಯೆ ಪೂರ್ಣಗೊಳಿಸಲು ವಾಟ್ಸ್‌ಆ್ಯಪ್‌ನಿಂದ ಹೊರಬರಬೇಕಿತ್ತು. ಆದರೆ ಇನ್ನುಮುಂದೆ ಎಲ್ಲವನ್ನೂ ವಾಟ್ಸ್‌ಆ್ಯಪ್‌ನಲ್ಲಿಯೇ ನಿರ್ವಹಿಸಬಹುದು ಎಂದು ಮೆಟಾ ಕಂಪನಿಯ ಸಿಇಒ ಮಾರ್ಕ್ ಝುಕರ್‌ಬರ್ಗ್ ತಿಳಿಸಿದ್ದಾರೆ.

# ರಾಷ್ಟ್ರಗೀತೆ: ಬರಗೂರು ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ತಮ್ಮ ಕಾದಂಬರಿ 'ಭರತ ನಗರಿ'ಯಲ್ಲಿ ರಾಷ್ಟ್ರಗೀತೆಯನ್ನು ಅವಹೇಳನ ಮಾಡಿದ್ದು, ಭಾರತವನ್ನು 'ಜಡ ಭರತ' ಎಂದು, ಗಂಗಾನದಿಯನ್ನು 'ಹಾದರ' ಎಂದು ಕರೆದಿದ್ದು, ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕ್ರಮ ತೆಗೆದುಕೊಳ್ಳಬೇಕು' ಎಂದು ಆರೋಪಿಸಿರುವ ಬಿಜೆಪಿಯ ಕಾನೂನು ಪ್ರಕೋಷ್ಠ ಬೆಂಗಳೂರು ಪೊಲೀಸ್ ಆಯುಕ್ತರಿಗೆ ದೂರು ನೀಡಿದೆ.

ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್, 'ದೇಶ, ರಾಷ್ಟ್ರಗೀತೆ ಮತ್ತು ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ ಹೊಂದಿರುವವರು ಇದನ್ನು ಸಹಿಸಿಕೊಂಡು ಕುಳಿತುಕೊಳ್ಳಲು ಸಾಧ್ಯವಿಲ್ಲ. ಬರಗೂರು ನಾಡಿಗೆ ಮತ್ತು ದೇಶಕ್ಕೆ ಅವಹೇಳನ ಮಾಡಿದ್ದಾರೆ. ಈ ಬಗ್ಗೆ ಸಿದ್ದರಾಮಯ್ಯ ಏನು ಹೇಳುತ್ತಾರೆ' ಎಂದು ಪ್ರಶ್ನಿಸಿದರು.

'ಕಲೆ, ಸಂಸ್ಕೃತಿ, ದೇಶ, ಅಂಬೇಡ್ಕರ್ ಮತ್ತು ಸಾಹಿತ್ಯದ ಬಗ್ಗೆ ಭಾಷಣ ಮಾಡುವ ಬರಗೂರು ಈ ರೀತಿ ಬರೆದುದಾದರೂ ಹೇಗೆ? 1983ರಲ್ಲಿ ಈ ಕಾದಂಬರಿ ಬರೆದುದಾಗಿ ಹೇಳಿಕೊಂಡಿದ್ದಾರೆ. ಈ ಕಾದಂಬರಿಯನ್ನು ನಿಷೇಧಿಸಬೇಕು' ಎಂದರು. 'ರಾಷ್ಟ್ರಧ್ವಜಕ್ಕೆ ಆದ ಅವಮಾನದ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದ್ದೇವೆ. ಕಾನೂನು ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜತೆ ಚರ್ಚಿಸಿ ಕ್ರಮ ತೆಗೆದುಕೊಳ್ಳುವುದಾಗಿ ಪೊಲೀಸ್ ಆಯುಕ್ತರು ಭರವಸೆ ನೀಡಿದರು' ಎಂದರು.

ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ, 'ರಾಷ್ಟ್ರಗೀತೆ, ರಾಷ್ಟ್ರಧ್ವಜದ ಬಗ್ಗೆ ವಿಕೃತಿ ಮೆರೆದಿರುವುದು ಗೊತ್ತಾಗಿದೆ. ಭರತ ನಗರಿಯಲ್ಲಿ ವಾಜಪೇಯಿ, ಚಂದ್ರಶೇಖರ್, ಮೊರಾರ್ಜಿ ದೇಸಾಯಿ, ಚರಣಸಿಂಗ್ ಅವರ ಹೆಸರುಗಳನ್ನು ವಿಕೃತಿಯಿಂದ ಬಳಸಿದ್ದಾರೆ' ಎಂದಿದ್ದಾರೆ.

# ಮಾನನಷ್ಟ ಮೊಕದ್ದಮೆ: ಬಿ.ಸಿ.ನಾಗೇಶ್

**ಬೆಂಗಳೂರು:** 'ಶಿಕ್ಷಣ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ಆಧಾರರಹಿತ ಆರೋಪ ಮಾಡಿರುವವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇಲಾಖೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸುವವರು ಈವರೆಗೂ ನನ್ನ ಕಚೇರಿ ಅಥವಾ ಇಲಾಖೆಯ ಆಯುಕ್ತರ ಕಚೇರಿಗೆ ದೂರು ನೀಡಿಲ್ಲ. ವೈಯಕ್ತಿಕವಾಗಿ ತೇಜೋವಧೆ ದುರುದ್ದೇಶದಿಂದ ಇಂತಹ ಆರೋಪ ಮಾಡಲಾಗಿದೆ. ನಮ್ಮ ಕಚೇರಿಗೆ ದೂರು ನೀಡಲು ಆಗದಿದ್ದರೆ ತನಿಖಾ ಸಂಸ್ಥೆಗಳು ಅಥವಾ ನ್ಯಾಯಾಲಯಗಳಿಗೆ ದೂರು ನೀಡಬಹುದು' ಎಂದರು.

ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣ ಪ್ರಕ್ರಿಯೆಯನ್ನು ತ್ವರಿತ, ಪಾರದರ್ಶಕವಾಗಿ ನಡೆಸುವ ಉದ್ದೇಶದಿಂದ ಆನ್‌ಲೈನ್ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಹೊಸ ಶಾಲೆಗಳ ನೋಂದಣಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಎಂಟು ಬಾರಿ ವಿಸ್ತರಿಸಲಾಗಿತ್ತು. ಅನುಮತಿ ಪಡೆಯದ, ಮಾನ್ಯತೆ ನವೀಕರಿಸದ ಶಾಲೆಗಳ ಪರಿಶೀಲನೆ ನಡೆಯುತ್ತಿದೆ. ಅಂತಹ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಲಾಗಿದೆ. ಸರ್ಕಾರದ ಕ್ರಮಗಳನ್ನು ಸಹಿಸದ ಕೆಲವರು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದರು.

**ತನಿಖೆಗೆ ನಿರ್ದೇಶನ:** ವೈಯಕ್ತಿಕವಾಗಿ ಹಾಗೂ ಶಿಕ್ಷಣ ಇಲಾಖೆಯ ವಿರುದ್ಧ ಆರೋಪ ಮಾಡಿರುವ ವ್ಯಕ್ತಿಯಿಂದ ಆರೋಪಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದು, ವಿಚಾರಣೆ ನಡೆಸಿ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ನಿರ್ದೇಶನ ನೀಡಲಾಗಿದೆ ಎಂದರು.

**ಸಂಕ್ಷಿಪ್ತ ಸುದ್ದಿ**

### ಝಪೋರಿಝಿಯಾ ಅಣುಶಕ್ತಿಸ್ಥಾವರ ಪರಿಶೀಲನೆ ಶೀಘ್ರ

**ಬರ್ಲಿನ್ (ಎ.ಪಿ):** ಉಕ್ರೇನ್‌ನ ಝಪೋರಿಝಿಯಾದಲ್ಲಿ ಇರುವ ಯುರೋಪ್‌ನ ಅತಿದೊಡ್ಡದು ಎನ್ನಲಾದ ಅಣುಶಕ್ತಿ ಸ್ಥಾವರದ ವಸ್ತುಸ್ಥಿತಿ ಪರಿಶೀಲನೆ ಕಾರ್ಯವು ಶೀಘ್ರವೇ ನಡೆಯಲಿದೆ.

ಈ ಸಂಬಂಧ ವಿಶ್ವಸಂಸ್ಥೆಯ ಕಣ್ಗಾವಲು ಸಂಸ್ಥೆ ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆಯ (ಐಎಇಎ) ಕಾರ್ಯಾಚರಣೆ ಪ್ರತಿಕ್ರಿಯೆಯು ಪ್ರಗತಿಯಲ್ಲಿದೆ ಎಂದು ಸಂಸ್ಥೆಯ ಮುಖ್ಯಸ್ಥರು ತಿಳಿಸಿದ್ದಾರೆ.

### ಚೀನಾ: ಪ್ರವಾಹ- ಲಕ್ಷ ಜನರ ಸ್ಥಳಾಂತರ

**ಬೀಜಿಂಗ್ (ಎಪಿ):** ಚೀನಾದ ನೈರುತ್ಯ ಭಾಗದಲ್ಲಿ ಧಾರಾಕಾರ ಮಳೆಯಾಗಿದ್ದು, ಒಂದು ಲಕ್ಷ ಜನರನ್ನು ಸ್ಥಳೀಯ ಆಡಳಿತ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದೆ.

ಬೇಸಿಗೆಯಲ್ಲಿ ತೀವ್ರ ಬಿಸಿಗಾಳಿ ಮತ್ತು ಬರದ ಛಾಯೆಯು ಕಾಣಿಸಿಕೊಂಡಿದ್ದ ಬಹುತೇಕ ಪ್ರದೇಶಗಳಲ್ಲಿ ಈಗ ಪ್ರವಾಹ ಪರಿಸ್ಥಿತಿ ಎದುರಾಗಿದೆ.

ಸಿಚುಆನ್ ಮತ್ತು ಚೊಂಗ್‌ಕಿಂಗ್ ಪ್ರಾಂತ್ಯದಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ.



ಅಮಿತಾಭ್ ಬಚ್ಚನ್ ಅವರ ಪ್ರತಿಮೆ ಜೊತೆಗೆ ರಿಂಕು ಗೋಪಿ ದಂಪತಿ –ಪಿಟಿಐ ಚಿತ್ರ

# ಬಚ್ಚನ್ ಪ್ರತಿಮೆ ಸ್ಥಾಪಿಸಿ ಅಭಿಮಾನ ಪ್ರದರ್ಶನ

**ನ್ಯೂಜೆರ್ಸಿ (ಪಿಟಿಐ):** ಭಾರತೀಯ ಮೂಲದ ಕುಟುಂಬವೊಂದು ಇಲ್ಲಿನ ತಮ್ಮ ನಿವಾಸದ ಆವರಣದಲ್ಲಿ ಬಾಲಿವುಡ್ ನಟ ಅಮಿತಾಬ್ ಬಚ್ಚನ್ ಅವರ ಪ್ರತಿಮೆಯನ್ನು ಸ್ಥಾಪಿಸಿ ಅಭಿಮಾನ ಮೆರೆದಿದೆ.

ರಿಂಕು ಮತ್ತು ಗೋಪಿ ಸೇಠ್ ದಂಪತಿ ಈ ಪ್ರತಿಮೆಯನ್ನು ಸ್ಥಾಪಿಸಿದ್ದು, ಸ್ಥಳೀಯ ಸಮುದಾಯದ ಮುಖಂಡ ಆಲ್ಬರ್ಟ್ ಜಸಾನಿ ಅವರು 600 ಜನರ ಉಪಸ್ಥಿತಿಯಲ್ಲಿ ಔಪಚಾರಿಕವಾಗಿ ಅನಾವರಣಗೊಳಿಸಿದರು.

ಪ್ರತಿಮೆ ರಚನೆ, ಸ್ಥಾಪನೆಗೆ ₹ 60 ಲಕ್ಷ ವೆಚ್ಚವಾಗಿದೆ. ಅಮಿತಾಬ್ ಬಚ್ಚನ್ ಅವರು 'ಕೌನ್ ಬನೇಗಾ ಕರೋಡ್ ಪತಿ' ಸ್ಪರ್ಧೆಯ ಶೈಲಿಯಲ್ಲಿ ಆಸೀನರಾಗಿರುವಂತೆ ಪ್ರತಿಮೆ ಇದೆ. ರಾಜಸ್ಥಾನದಲ್ಲಿ ರೂಪಿಸಿದ ಪ್ರತಿಮೆಯನ್ನು ಹಡಗಿನಲ್ಲಿ ಇಲ್ಲಿಗೆ ತರಲಾಗಿದೆ. ಬಚ್ಚನ್ ಅವರಿಗೂ ಈ ಬಗ್ಗೆ ತಿಳಿದಿದೆ ಎನ್ನುತ್ತಾರೆ ಅವರು.

ಪ್ರತಿಮೆ ಅನಾವರಣ ಸಂದರ್ಭದಲ್ಲಿ ಅಮಿತಾಬ್ ಬಚ್ಚನ್ ಅವರ ಅಭಿಮಾನಿ ಬಳಗದ ಸದಸ್ಯರ ನೃತ್ಯ ಮತ್ತು ಪಟಾಕಿ ಸಿಡಿಸುವ ಮೂಲಕ ಸಂಭ್ರಮಿಸಿದರು.

ಸೇಠ್ ಅವರು 1990ರಲ್ಲಿ ಗುಜರಾತ್‌ನಿಂದ ಅಮೆರಿಕಕ್ಕೆ ಬಂದರು. 'ಬಚ್ಚನ್ ಅವರು ನಮಗೆ ದೇವರಿಗಿಂತ ಮಿಗಿಲು. ನಟನೆ ಜೊತೆಗೆ ಅವರ ವ್ಯಕ್ತಿತ್ವದಿಂದ ಪ್ರೇರಣೆಗೊಂಡಿದ್ದೇನೆ' ಎನ್ನುತ್ತಾರೆ ಗೋಪಿ ಸೇಠ್



ಕರ್ನಾಟಕ ಕ್ರಿಕೆಟ್ ತಂಡದ ಆಟಗಾರ ಕೆ.ವಿ.ಸಿದ್ಧಾರ್ಥ್ ಅವರು ಬೆಂಗಳೂರಿನಲ್ಲಿ ಸೋಮವಾರ ಮೇಘನಾ ಅವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟರು

## ಎಐಎಫ್‌ಎಫ್‌ಗೆ ₹ 14 ಲಕ್ಷ ದಂಡ

**ನವದೆಹಲಿ (ಪಿಟಿಐ):** ಏಷ್ಯಾ ಕಪ್ ಅರ್ಹತಾ ಪಂದ್ಯದ ವೇಳೆ ಪ್ರೇಕ್ಷಕರು ನಿಯಮ ಉಲ್ಲಂಘಿಸಿದ ಪ್ರಕರಣದಲ್ಲಿ ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್ (ಎಎಫ್‌ಸಿ), ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ಗೆ ಒಟ್ಟು ₹ 14 ಲಕ್ಷ ದಂಡ ವಿಧಿಸಿದೆ.

ಇದರಲ್ಲಿ ₹ 10.79 ಲಕ್ಷ ಮೊತ್ತವನ್ನು ಇದೇ ತಪ್ಪು ಮುಂದಿನ ಎರಡು ವರ್ಷಗಳಲ್ಲಿ ಪುನರಾವರ್ತನೆಯಾದರೆ ಮಾತ್ರ ತೆರಬೇಕು ಎದು ಎಎಫ್‌ಸಿ ಶಿಸ್ತು ಸಮಿತಿಯ ಪ್ರಕಟಣೆ ತಿಳಿಸಿದೆ.

ಜೂನ್‌ನಲ್ಲಿ ಕೋಲ್ಕತ್ತದಲ್ಲಿ ನಡೆದ ಅಫ್ಗಾನಿಸ್ತಾನ ಮತ್ತು ಹಾಂಗ್‌ಕಾಂಗ್ ಎದುರಿನ ಪಂದ್ಯದ ವೇಳೆ ಭಾರತದ ಪ್ರೇಕ್ಷಕರು ಅಂಗಳದಲ್ಲಿ ನಿರ್ಬಂಧಿತ ಪ್ರದೇಶಕ್ಕೆ ಪ್ರವೇಶಿಸಿದ್ದರು.

# ಲೆಬನಾನ್‌ಗೆ ಮಣಿದ ಭಾರತ

## ಬ್ಯಾಸ್ಕೆಟ್‌ಬಾಲ್: ವಿಶ್ವಕಪ್ ಏಷ್ಯಾ ವಲಯದ ಅರ್ಹತಾ ಪಂದ್ಯದಲ್ಲಿ ನಿರಾಸೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಲೆಬನಾನ್ ತಂಡದ ಆಟಗಾರರ ವೇಗ ಮತ್ತು ಚಾಕಚಕ್ಯತೆಗೆ ಸರಿಸಾಟಿಯಾಗಿ ನಿಲ್ಲುವಲ್ಲಿ ವಿಫಲವಾದ ಭಾರತ ತಂಡ, ಫಿಬಾ ವಿಶ್ವಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಏಷ್ಯಾ ವಲಯದ ಅರ್ಹತಾ ಪಂದ್ಯದಲ್ಲಿ ನಿರಾಸೆ ಅನುಭವಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ಭಾರತ ತಂಡವನ್ನು 95–63ರಲ್ಲಿ ಮಣಿಸಿದ ಲೆಬನಾನ್ ವಿಶ್ವಕಪ್‌ಗೆ ಅರ್ಹತೆ ಪಡೆಯಿತು.

ಜೊನಾಥನ್ ಅರ್ಲೆಜ್ (21) ಮತ್ತು ವಯೆಲ್ ಅರಾಕ್ಜಿ (15) ಅವರು ಲೆಬನಾನ್ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಭಾರತದ ಪರ ಪ್ರಿನ್ಸ್ ಪ್ರಣವ್ 19 ಪಾಯಿಂಟ್ಸ್ ಕಲೆಹಾಕಿದರೆ, ಪ್ರಶಾಂತ್ ಸಿಂಗ್ ರಾವತ್ ಮತ್ತು ಮುನಿ ಬೆಕ್ ಹಫೀಜ್ ಅವರು ತಲಾ 10 ಪಾಯಿಂಟ್ಸ್ ಗಳಿಸಿದರು.

ಪಂದ್ಯದಲ್ಲಿ ಭಾರತ ಸಕಾರಾತ್ಮಕ ಆರಂಭ ಪಡೆದಿತ್ತು. ಮೊದಲ ಐದು ನಿಮಿಷಗಳಲ್ಲಿ 11–9 ರಲ್ಲಿ ಮುನ್ನಡೆ ಪಡೆದಿತ್ತು. ಮರುಹೋರಾಟ ನಡೆಸಿದ ಲೆಬನಾನ್ ಕೆಲವೇ ನಿಮಿಷಗಳಲ್ಲಿ 16–11 ರಲ್ಲಿ ಮೇಲುಗೈ ಸಾಧಿಸಿತು. ಆ ಬಳಿಕ ಪಂದ್ಯದ ಕೊನೆಯವರೆಗೂ ಭಾರತಕ್ಕೆ ಮುನ್ನಡೆ ಗಳಿಸಲು ಎದುರಾಳಿಗಳು ಅವಕಾಶ ನೀಡಲಿಲ್ಲ.

ಮೊದಲ ಕ್ವಾರ್ಟರ್ ಕೊನೆಗೊಂಡಾಗ ಲೆಬನಾನ್ ಹತ್ತು ಪಾಯಿಂಟ್‌ಗಳ (27–17) ಮೇಲುಗೈ ಸಾಧಿಸಿತ್ತು. ಎರಡನೇ ಕ್ವಾರ್ಟರ್‌ನಲ್ಲೂ ಪ್ರವಾಸಿ ತಂಡದ ಪ್ರಭುತ್ವ ಮುಂದುವರಿಯಿತು. ವಿರಾಮದ ವೇಳೆಗೆ 49–29 ರಲ್ಲಿ ಮುನ್ನಡೆಯಲ್ಲಿತ್ತು. ಈ ವೇಳೆಗೆ ಜೊನಾಥನ್ ಅರ್ಲೆಜ್ ಅವರು 16 ಪಾಯಿಂಟ್ಸ್ ಕಲೆಹಾಕಿದ್ದರು.

ಎರಡನೇ ಅವಧಿಯಲ್ಲಿ ಮರು ಹೋರಾಟ ನಡೆಸುವ ಭಾರತದ ಪ್ರಯತ್ನ ಫಲಿಸಲಿಲ್ಲ. ಮೂರನೇ ಕ್ವಾರ್ಟರ್ ಕೊನೆಗೊಂಡಾಗ ಲೆಬನಾನ್ ತನ್ನ ಮುನ್ನಡೆಯನ್ನು 29 ಪಾಯಿಂಟ್‌ಗಳಿಗೆ (71–42) ಹೆಚ್ಚಿಸಿ ಕೊಂಡು ಗೆಲುವು ಬಹುತೇಕ ಖಚಿತಪಡಿಸಿಕೊಂಡಿತ್ತು.

ಲೆಬನಾನ್ ತಂಡ ಆಟಗಾರರು ಮೂರು ಪಾಯಿಂಟ್‌ಗಳನ್ನು ಲೀಲಾಜಾಲವಾಗಿ ಕಲೆಹಾಕುತ್ತಿದ್ದರೆ, ಈ ವಿಭಾಗದಲ್ಲಿ ಭಾರತಕ್ಕೆ ಅಷ್ಟೊಂದು ಯಶಸ್ಸು ದೊರೆಯಲಿಲ್ಲ. ಫ್ರೀ ಥ್ರೋಗಳಲ್ಲಿ ಪಾಯಿಂಟ್ ಗಳಿಸುವಲ್ಲಿ ಭಾರತ ಹೆಚ್ಚು ನಿಖರತೆ ತೋರಿತು.

ಭಾರತ ತಂಡ ತನ್ನ ಮುಂದಿನ ಪಂದ್ಯದಲ್ಲಿ ನ.10 ರಂದು ಸೌದಿ ಅರೇಬಿಯಾವನ್ನು ಎದುರಿಸಲಿದೆ. ಈ ಪಂದ್ಯ ಸೌದಿ ಅರೇಬಿಯಾದಲ್ಲಿ ನಡೆಯಲಿದೆ.

ವಿಶ್ವಕಪ್ ಟೂರ್ನಿಯ ಏಳು ಸ್ಥಾನಗಳಿಗೆ ಏಷ್ಯಾ ವಲಯದಿಂದ 16 ತಂಡಗಳು ಪೈಪೋಟಿಯಲ್ಲಿವೆ. ವಿಶ್ವಕಪ್ ಟೂರ್ನಿ 2023ರ ಆ.25ರಿಂದ ಸೆ.10ರ ವರೆಗೆ ಫಿಲಿಪ್ಪೀನ್ಸ್, ಜಪಾನ್ ಮತ್ತು ಇಂಡೊನೇಷ್ಯಾದ ಜಂಟಿ ಆತಿಥ್ಯದಲ್ಲಿ ನಡೆಯಲಿದೆ.



ಗೆಲುವು ಪಡೆದ ಲೆಬನಾನ್ ತಂಡದ ಆಟಗಾರರು ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

**ಮುಖ್ಯಾಂಶಗಳು**

- **95–63 ರಲ್ಲಿ ಗೆಲುವು ಪಡೆದ ಲೆಬನಾನ್**
- **ವಿರಾಮದ ವೇಳೆಗೆ 49–29 ಮುನ್ನಡೆ**

### ಪಾಕ್ ವಿರುದ್ಧದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ

# ಒತ್ತಡಕ್ಕೆ ಒಳಗಾಗಲಿಲ್ಲ: ಹಾರ್ದಿಕ್

**ದುಬೈ (ಪಿಟಿಐ):** ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಕಿಸ್ತಾನ ಎದುರಿನ ಪಂದ್ಯದ ಕೊನೆಯ ಓವರ್‌ನಲ್ಲಿ ಬ್ಯಾಟ್ ಮಾಡುವಾಗ ಯಾವುದೇ ಒತ್ತಡಕ್ಕೆ ಒಳಗಾಗಿರಲಿಲ್ಲ ಎಂದು ಭಾರತ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಹೇಳಿದ್ದಾರೆ.

ಭಾನುವಾರ ನಡೆದ ಪಂದ್ಯದಲ್ಲಿ ಭಾರತ, ಐದು ವಿಕೆಟ್‌ಗಳಿಂದ ಪಾಕಿಸ್ತಾನ ತಂಡವನ್ನು ಮಣಿಸಿತ್ತು. 25 ರನ್‌ಗಳಿಗೆ ಮೂರು ವಿಕೆಟ್ ಪಡೆದದ್ದಲ್ಲದೆ, 17 ಎಸೆತಗಳಲ್ಲಿ ಅಜೇಯ 33 ರನ್ ಗಳಿಸಿದ್ದ ಪಾಂಡ್ಯ ಭಾರತ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು.

‘ಕೊನೆಯ ಓವರ್‌ನಲ್ಲಿ ಏಳು ರನ್ ಗಳಿಸುವ ಗುರಿ ನನಗೆ ದೊಡ್ಡ ಸವಾಲಾಗಿರಲಿಲ್ಲ. 15 ರನ್‌ಗಳು ಬೇಕಿದ್ದರೂ ಗಳಿಸುವ ವಿಶ್ವಾಸವಿತ್ತು. 20ನೇ ಓವರ್ ಬೌಲ್ ಮಾಡಲು ಬರುವ ಎದುರಾಳಿ ತಂಡದ ಬೌಲರ್ ನನಗಿಂತಲೂ ಹೆಚ್ಚಿನ ಒತ್ತಡದಲ್ಲಿರುತ್ತಾನೆ ಎಂಬುದು ತಿಳಿದಿತ್ತು’ ಎಂದಿದ್ದಾರೆ.

‘ಒತ್ತಡ ನಿಭಾಯಿಸಿದರೆ ಮಾತ್ರ ನಿಮ್ಮ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕಿಳಿಸಬಹುದು. ಕೊನೆಯ ಓವರ್ ಬೌಲ್ ಮಾಡಿದ ಮೊಹಮ್ಮದ್ ನವಾಜ್ ಅತಿಯಾದ ಒತ್ತಡದಲ್ಲಿದ್ದರು. ಆದ್ದರಿಂದ ಅವರಿಂದ ತಪ್ಪನ್ನು ನಿರೀಕ್ಷಿಸುತ್ತಿದ್ದೆ’ ಎಂದು ನುಡಿದಿದ್ದಾರೆ.

ದುಬೈನಲ್ಲಿ ನಡೆದ ಪಂದ್ಯದ ಕೊನೆಯ ಓವರ್‌ನ ನಾಲ್ಕನೇ ಎಸೆತವನ್ನು ಸಿಕ್ಸರ್‌ಗೆ ಅಟ್ಟುವ ಮೂಲಕ ಪಾಂಡ್ಯ ಅವರು ಭಾರತಕ್ಕೆ ಗೆಲುವು ತಂದಿತ್ತಿದ್ದರು.

ಭಾರತ ತಂಡ ತನ್ನ ಮುಂದಿನ ಪಂದ್ಯದಲ್ಲಿ ಬುಧವಾರ ಹಾಂಕ್‌ಕಾಂಗ್ ತಂಡದ ಸವಾಲನ್ನು ಎದುರಿಸಲಿದೆ.



ಹಾರ್ದಿಕ್ ಪಾಂಡ್ಯ –ಎಎಫ್‌ಪಿ ಚಿತ್ರ

## ರವೂಫ್‌ಗೆ ಕೊಹ್ಲಿ ಉಡುಗೊರೆ

**ದುಬೈ:** ವಿರಾಟ್ ಕೊಹ್ಲಿ ಅವರು ಪಾಕಿಸ್ತಾನ ತಂಡದ ವೇಗದ ಬೌಲರ್ ಹ್ಯಾರಿಸ್ ರವೂಫ್ ಅವರಿಗೆ ತಾವು ಸಹಿ ಹಾಕಿರುವ ಜೆರ್ಸಿಯನ್ನು ಉಡುಗೊರೆಯಾಗಿ ನೀಡಿದ್ದಾರೆ. ಇದಕ್ಕೆ ಸಂಬಂಧಿಸಿದ ವಿಡಿಯೊವನ್ನು ಬಿಸಿಸಿಐ ತನ್ನ ಟ್ವಿಟರ್ ಖಾತೆಯಲ್ಲಿ ಅಪ್‌ಲೋಡ್ ಮಾಡಿದೆ. ಕೊಹ್ಲಿ ಅವರಿಂದ ಜೆರ್ಸಿ ಪಡೆದ ಬಳಿಕ ಇಬ್ಬರು ಆಟಗಾರರು ಪರಸ್ಪರ ಹಸ್ತಲಾಘವ ಮಾಡುವ ದೃಶ್ಯ ವಿಡಿಯೊದಲ್ಲಿದೆ.

### ಏಷ್ಯಾ ಕಪ್: ಆತ್ಮವಿಶ್ವಾಸದಲ್ಲಿ ಮೊಹಮ್ಮದ್ ನಬಿ ಬಳಗ

# ಬಾಂಗ್ಲಾಗೆ ಅಫ್ಗನ್ ಸವಾಲು

**ಶಾರ್ಜಾ (ಪಿಟಿಐ):** ಮೊದಲ ಪಂದ್ಯದಲ್ಲಿ ದೊರೆತ ಗೆಲುವಿನ ಆತ್ಮವಿಶ್ವಾಸದಲ್ಲಿರುವ ಅಫ್ಗಾನಿಸ್ತಾನ ತಂಡ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಎರಡನೇ ಪಂದ್ಯದಲ್ಲಿ ಮಂಗಳವಾರ ಬಾಂಗ್ಲಾದೇಶವನ್ನು ಎದುರಿಸಲಿದೆ.

ಶ್ರೀಲಂಕಾ ತಂಡವನ್ನು ಎಂಟು ವಿಕೆಟ್‌ಗಳಿಂದ ಮಣಿಸಿದ್ದ ಅಫ್ಗಾನಿಸ್ತಾನ, ಗೆಲುವಿನ ಓಟ ಮುಂದುವರಿಸುವ ತವಕದಲ್ಲಿದೆ. ಮತ್ತೊಂದೆಡೆ ಶಕೀಬ್ ಅಲ್ ಹಸನ್ ನೇತೃತ್ವದ ಬಾಂಗ್ಲಾ ತಂಡ, ಶುಭಾರಂಭದ ನಿರೀಕ್ಷೆಯಲ್ಲಿದೆ.

ಟಿ20 ಮಾದರಿಯಲ್ಲಿ ಬಾಂಗ್ಲಾ ತಂಡ ಈಚೆಗೆ ಉತ್ತಮ ಪ್ರದರ್ಶನ ನೀಡಿಲ್ಲ. ಕಳೆದ ವಿಶ್ವಕಪ್ ಬಳಿಕ ಆಡಿದ್ದ 13 ಪಂದ್ಯಗಳಲ್ಲಿ ಕೇವಲ ಎರಡರಲ್ಲಿ ಮಾತ್ರ ಗೆಲುವು ಪಡೆದಿದೆ. ಆದ್ದರಿಂದ ಅಫ್ಗನ್ ಎದುರಿನ ಪಂದ್ಯವನ್ನು ಗಂಭೀರವಾಗಿ ತೆಗೆದುಕೊಂಡಿದೆ.

ಲಂಕಾ ವಿರುದ್ಧ ಮಿಂಚಿದ್ದ ಅಫ್ಗಾನಿಸ್ತಾನದ ವೇಗದ ಬೌಲರ್‌ಗಳನ್ನು ಎದುರಿಸುವ ಸವಾಲು ಬಾಂಗ್ಲಾ ಬ್ಯಾಟರ್‌ಗಳ ಮುಂದಿದೆ. ಫಜಲ್‌ಹಕ್ ಫರೂಕಿ ಮತ್ತು ನವೀನ್ ಹಕ್ ಅವರು ಲಂಕಾ ತಂಡದ ಬೆನ್ನೆಲುಬು ಮುರಿದಿದ್ದರು.

‘ಟೂರ್ನಿಯ ಮೊದಲ ಪಂದ್ಯ ಮಹತ್ವದ್ದು. ಏಕೆಂದರೆ ಉತ್ತಮ ಆರಂಭ ಪಡೆದರೆ ಆಟಗಾರರ ಆತ್ಮವಿಶ್ವಾಸ ಹೆಚ್ಚುತ್ತದೆ’ ಎಂದು ಬಾಂಗ್ಲಾ ತಂಡದ ಆಲ್‌ರೌಂಡರ್ ಮೆಹದಿ ಹಸನ್ ಹೇಳಿದ್ದಾರೆ.

ಶನಿವಾರ ನಡೆದಿದ್ದ ಪಂದ್ಯದಲ್ಲಿ ಅಫ್ಗಾನಿಸ್ತಾನ, ಶ್ರೀಲಂಕಾ ತಂಡವನ್ನು 105 ರನ್‌ಗಳಿಗೆ ಆಲೌಟ್ ಮಾಡಿತ್ತು. ಆ ಬಳಿಕ ಕೇವಲ 10.1 ಓವರ್‌ಗಳಲ್ಲಿ ಎರಡು ವಿಕೆಟ್ ಕಳೆದುಕೊಂಡು ಈ ಗುರಿಯನ್ನು ತಲುಪಿತ್ತು.

**ಪಂದ್ಯ ಆರಂಭ:** ರಾತ್ರಿ 7.30



ಅಫ್ಗಾನಿಸ್ತಾನ ತಂಡದ ಫಜಲ್‌ಹಕ್ ಫರೂಕಿ

ಏಷ್ಯಾ ಕಪ್ ಯುಎಇ 2022



ಚೆನ್ನೈ ಕ್ವಿಕ್ ಗನ್ಸ್ ಮತ್ತು ಮುಂಬೈ ಖಿಲಾಡೀಸ್ ತಂಡಗಳ ನಡುವಣ ಸೆಣಸಾಟ– ಪಿಟಿಐ ಚಿತ್ರ

## ಕೊಕ್ಕೊ: ಪ್ಲೇ ಆಫ್‌ಗೆ ಚೆನ್ನೈ ಕ್ವಿಕ್ ಗನ್ಸ್

**ಪುಣೆ (ಪಿಟಿಐ):** ಚೆನ್ನೈ ಕ್ವಿಕ್ ಗನ್ಸ್ ತಂಡವು ಅಲ್ಟಿಮೇಟ್ ಕೊಕ್ಕೊ ಲೀಗ್‌ನ ಪ್ಲೇ ಆಫ್ ತಲುಪಿತು.

ಸೋಮವಾರ ಚೆನ್ನೈ 58–42ರಿಂದ ಮುಂಬೈ ಖಿಲಾಡೀಸ್ ತಂಡವನ್ನು ಸೋಲಿಸಿತು. ವಿಜೇತ ತಂಡದ ಕಶ್ಯಪ್ 6 ನಿಮಿಷ 37 ಸೆಕೆಂಡುಗಳ ಕಾಲ ಔಟಾಗಲಿಲ್ಲ. ಅಲ್ಲದೆ 11 ಪಾಯಿಂಟ್ಸ್ ಕೂಡ ಗಳಿಸಿದರು. ನರಸಯ್ಯ 14 ಪಾಯಿಂಟ್ಸ್ ಕಲೆಹಾಕಿದರು.

ಇನ್ನೊಂದು ಪಂದ್ಯದಲ್ಲಿ ತೆಲುಗು ಯೋಧಾಸ್ 88–21ರಿಂದ ಗುಜರಾತ್ ಜೈಂಟ್ಸ್ ಎದುರು ಗೆದ್ದಿತು.

# ಕ್ವಾರ್ಟರ್ ಮೇಲೆ ಬಿಎಫ್‌ಸಿ ಕಣ್ಣು

## ಡುರಾಂಡ್ ಕಪ್ ಫುಟ್‌ಬಾಲ್: ಗೋವಾ ಎದುರಾಳಿ

**ಕೋಲ್ಕತ್ತ:** ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ ಎಫ್‌ಸಿ ಗೋವಾ ತಂಡಕ್ಕೆ ಮುಖಾಮುಖಿಯಾಗಲಿದ್ದು, ಎಂಟರಘಟ್ಟ ತಲುಪುವ ಹಂಬಲದಲ್ಲಿದೆ. ಇಲ್ಲಿಯ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ಈ ಹಣಾಹಣಿ ನಡೆಯಲಿದೆ.

ಎ ಗುಂಪಿನಲ್ಲಿ ಆಡಿದ ಎರಡು ಪಂದ್ಯಗಳಲ್ಲಿ ಎರಡನ್ನೂ ಗೆದ್ದಿರುವ ಬೆಂಗಳೂರು ಬಳಿ ಸದ್ಯ 6 ಪಾಯಿಂಟ್‌ಗಳಿವೆ. ಈ ಪಂದ್ಯದಲ್ಲಿ ಚೆಟ್ರಿ ಹಾಗೂ ರಾಯ್‌ಕೃಷ್ಣ ಜೋಡಿಯು ಮೋಡಿ ಮಾಡುವ ನಿರೀಕ್ಷೆಯಿದೆ. ಇನ್ನು ಕೇವಲ ಒಂದು ಪಾಯಿಂಟ್ಸ್ ಕಲೆಹಾಕಿದರೆ ಚೆಟ್ರಿ ಬಳಗದ ಕ್ವಾರ್ಟರ್‌ಫೈನಲ್ ಹಾದಿ ಸುಗಮವಾಗಲಿದೆ.

ಈ ಗುಂಪಿನಲ್ಲಿ ಮೊಹಮ್ಮಡನ್ ಸ್ಪೋರ್ಟಿಂಗ್ ಮೂರು ಪಂದ್ಯಗಳನ್ನು ಜಯಿಸಿ ಒಂಬತ್ತು ಪಾಯಿಂಟ್ಸ್ ಕಲೆಹಾಕಿದ್ದು ಅಗ್ರಸ್ಥಾನದಲ್ಲಿದೆ.

ಸಿ ಗುಂಪಿನ ಪಂದ್ಯದಲ್ಲಿ ಹೈದರಾಬಾದ್ – ನೆರೊಕಾ ಸೆಣಸಲಿವೆ.

**ಪಂದ್ಯ ಆರಂಭ:** ಸಂಜೆ 6



ಸುನಿಲ್ ಚೆಟ್ರಿ ಮತ್ತು ರಾಯ್ ಕೃಷ್ಣ

## ಎಂಟರಘಟ್ಟಕ್ಕೆ ಮುಂಬೈ ಸಿಟಿ

ಸಂಘಟಿತ ಆಟವಾಡಿದ ಮುಂಬೈ ಸಿಟಿ ಎಫ್‌ಸಿ (ಎಂಸಿಎಫ್‌ಸಿ) ತಂಡವು ಭರ್ಜರಿ ಜಯ ಗಳಿಸಿತು. ಸೋಮವಾರ ಕೋಲ್ಕತ್ತದ ಭಾರತಿ ಕ್ರೀಡಾಂಗಣದಲ್ಲಿ ನಡೆದ ‘ಬಿ’ ಗುಂಪಿನ ಪಂದ್ಯದಲ್ಲಿ ಮುಂಬೈ 5–1ರಿಂದ ರಾಜಸ್ಥಾನ ಯುನೈಟೆಡ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿ ಕ್ವಾರ್ಟರ್‌ಫೈನಲ್ ತಲುಪಿತು.

# ಫುಟ್‌ಬಾಲ್: ಕಿಕ್‌ಸ್ಟಾರ್ಟ್, ಕೆಂಪ್‌ಗೆ ಭರ್ಜರಿ ಜಯ

**ಬೆಂಗಳೂರು:** ಕಾವ್ಯಾ ಫಕ್ಕೀರಸ್ವಾಮಿ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಕರ್ನಾಟಕ ವಿಮೆನ್ಸ್ ಲೀಗ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಸೋಮವಾರ ನಡೆದ ಹಣಾಹಣಿಯಲ್ಲಿ ಕಿಕ್‌ಸ್ಟಾರ್ಟ್ 8–1ರಿಂದ ಪರಿಕ್ರಮ ಎಫ್‌ಸಿ ತಂಡಕ್ಕೆ ಸೋಲುಣಿಸಿತು. ಕಾವ್ಯಾ 35, 45 + 2 ಮತ್ತು 48ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಸುಶ್ಮಿತಾ ಲೆಪ್‌ಚಾ (41, 54ನೇ ನಿಮಿಷ), ಸಬರಾ ಖಾತೂನ್ (11ನೇ ನಿಮಿಷ) ಮತ್ತು ಅರುಣಾ ಬಾಗ್ ಮಿಂಚಿದರು. ಎದುರಾಳಿ ತಂಡದ ಗುಡಿಯಾ ಕುಮಾರ್ (23ನೇ ನಿಮಿಷ) ‘ಉಡುಗೊರೆ ಗೋಲು’ ನೀಡಿದರು. ಪರಿಕ್ರಮ ಪರ ಸನಿಲಾ ಬಾಸುಮತಾರಿ 89ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲು ದಾಖಲಿಸಿದರು.

ಲಾಲ್‌ರಿನ್‌ಮುವಾನಿ ಗಳಿಸಿದ ಆರು ಗೋಲುಗಳು ಕೆಂಪ್ ಎಫ್‌ಸಿ ತಂಡದ ಅಮೋಘ ಗೆಲುವಿಗೆ ಕಾರಣವಾದವು. ಕೆಂಪ್ 10–2ರಿಂದ ಪಿಂಕ್ ಪ್ಯಾಂಥರ್ಸ್ ತಂಡವನ್ನು ಸೋಲಿಸಿತು. ಲಾಲ್‌ರಿನ್‌ಮುವಾನಿ 12, 24, 27, 81, 84, 90ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಲಾಲ್‌ಬಿಯಾಕ್ ದಿಕಿ (6ನೇ ನಿ.), ಲಾಲ್‌ನುನ್ಸಿಯಾಮಿ (37ನೇ ನಿ.), ಜೈರೆಮ್ಮಾ ವಿ ಚಾಂಗ್ತು (78ನೇ ನಿ.), ಎಲಿಜಬೆತ್ ವನ್ಲಾಲ್‌ಮಾವಿ (88ನೇ ನಿ.) ವಿಜೇತ ತಂಡದ ಪರ ಗೋಲು ಗಳಿಸಿದರು. ಪಿಂಕ್ ಪ್ಯಾಂಥರ್ಸ್ ಪರ ಲವನಾ ಗೆಬೆಲ್ (71ನೇ ನಿ.) ಮತ್ತು ಅಲೀನಾ ಟೋನಿ (89ನೇ ನಿ.) ಗೋಲು ಗಳಿಸಿದರು.

## ನೆಟ್‌ಬಾಲ್: ಮೇಘನಾ ಉಪನಾಯಕಿ

**ಗೋಣಿಕೊಪ್ಪಲು (ಕೊಡಗು ಜಿಲ್ಲೆ):** ಸಿಂಗಪುರದಲ್ಲಿ ಸೆ. 3ರಿಂದ ನಡೆಯಲಿರುವ ಏಷ್ಯನ್ ನೆಟ್‌ಬಾಲ್ ಟೂರ್ನಿಗೆ ಭಾರತೀಯ ತಂಡದ ಉಪನಾಯಕಿಯಾಗಿ ಬಿ.ಸಿ. ಮೇಘನಾ ಆಯ್ಕೆಯಾಗಿದ್ದಾರೆ.

ಗೋಣಿಕೊಪ್ಪಲಿನ ನಿವಾಸಿ ಬಿ.ಎ. ಚನ್ನಪ್ಪ ಪೂಜಾರಿ, ಬಿ.ಸಿ. ನಳಿನಾಕ್ಷಿ ದಂಪತಿ ಪುತ್ರಿಯಾಗಿರುವ ಮೇಘನಾ, ಉಜಿರೆಯ ಎಸ್‌ಡಿಎಂ ವಿದ್ಯಾ ಸಂಸ್ಥೆಯಲ್ಲಿ ಎಂ.ಕಾಂ ಮೊದಲ ವರ್ಷದಲ್ಲಿ ಓದುತ್ತಿದ್ದಾರೆ.ತೆಲಂಗಾಣ, ತಮಿಳುನಾಡು, ಹರಿಯಾಣ, ಹಿಮಾಚಲ ಪ್ರದೇಶ, ಛತ್ತೀಸಗಡದಲ್ಲಿ ನಡೆದ ನೆಟ್‌ಬಾಲ್ ಟೂರ್ನಿಗಳಲ್ಲಿ ಪಾಲ್ಗೊಂಡಿದ್ದ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದ ಅವರು ಪ್ರತಿನಿಧಿಸಿದ್ದರು.

ಗಿರೀಶ,ರಮೇಶ್ ರಚ್, ಸುದೀನ ಪೂಜಾರಿ, ನಿತಿನ್ ಪೂಜಾರಿ, ಶಾರದಾ ಬಕೋರ್ಕರ್, ಮೇಘನಾ ಅವರ ತರಬೇತುದಾರರಾಗಿದ್ದಾರೆ. ಗಿರೀಶ್ ರಾಷ್ಟ್ರೀಯ ತಂಡದ ತರಬೇತುದಾರರೂ ಹೌದು.



ಮೇಘನಾ

## ಪ್ರೊ ಬಾಕ್ಸಿಂಗ್: ಮೊಹಮ್ಮದ್ ಅಜರ್‌ಗೆ ಜಯ

**ಗುರುಗ್ರಾಮ (ಪಿಟಿಐ):** ದೆಹಲಿಯ ಬಾಕ್ಸರ್ ಮೊಹಮ್ಮದ್ ಅಜರ್ ಅವರು ಸೂಪರ್ ಫೆದರ್‌ವೇಟ್ ವಿಭಾಗದಲ್ಲಿ ಡಬ್ಲ್ಯುಬಿಸಿ ಇಂಡಿಯಾ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಭಾನುವಾರ ರಾತ್ರಿ ನಡೆದ ಬೌಟ್‌ನಲ್ಲಿ ಅಜರ್ ಅವರು ಧರ್ಮವೀರ್ ಸಿಂಗ್ ಅವರನ್ನು ಸೋಲಿಸಿದರು. ಮೂವರು ರೆಫರಿಗಳು 79-72, 76-75, 79-72ರಿಂದ ಅಜರ್ ಪರ ತೀರ್ಪು ನೀಡಿದರು.

## ದುಲೀಪ್ ಟ್ರೋಫಿ ಟೂರ್ನಿ: ಮಯಂಕ್ ಉಪನಾಯಕ

**ಬೆಂಗಳೂರು:** ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ದಕ್ಷಿಣ ವಲಯ ತಂಡವನ್ನು ಪ್ರಕಟಿಸಲಾಗಿದ್ದು, ಕರ್ನಾಟಕದ ಮಯಂಕ್ ಅಗರವಾಲ್ ಉಪನಾಯಕರಾಗಿ ಆಯ್ಕೆಯಾಗಿದ್ದಾರೆ.

ಹನುಮ ವಿಹಾರಿ ನಾಯಕತ್ವದ ತಂಡದಲ್ಲಿ ಕರ್ನಾಟಕದ ನಾಲ್ವರು ಆಟಗಾರರು ಇದ್ದಾರೆ. ಮನೀಷ್ ಪಾಂಡೆ, ಕೆ. ಗೌತಮ್ ಮತ್ತು ದೇವದತ್ತ ಪಡಿಕ್ಕಲ್ ರಾಜ್ಯದ ಇನ್ನುಳಿದ ಆಟಗಾರರು. ತಮಿಳುನಾಡಿನಲ್ಲಿ ಸೆಪ್ಟೆಂಬರ್ 8ರಿಂದ ಟೂರ್ನಿ ಆರಂಭವಾಗಲಿದೆ.

**ತಂಡ ಇಂತಿದೆ:** ಹನುಮ ವಿಹಾರಿ (ನಾಯಕ), ಮಯಂಕ್ ಅಗರವಾಲ್ (ಉಪನಾಯಕ), ರೋಹನ್ ಕುನ್ನುಮಲ್, ದೇವದತ್ತ ಪಡಿಕ್ಕಲ್, ಮನೀಷ್ ಪಾಂಡೆ, ಬಿ. ಇಂದ್ರಜೀತ್, ಏಕನಾಥ್ ಕೇರ್ಕರ್, ರಿಕಿ ಭುಯಿ, ಸಾಯಿ ಕಿಶೋರ್, ಕೆ.ಗೌತಮ್, ಬಾಸಿಲ್ ಥಂಪಿ, ರವಿ ತೇಜ, ವಿ.ಸಿ. ಸ್ಟೀಫನ್, ತನಯ್ ತ್ಯಾಗರಾಜನ್, ಲಕ್ಷ್ಯ ಗರ್ಗ್.



ಮಯಂಕ್ ಅಗರವಾಲ್– ಪಿಟಿಐ ಚಿತ್ರ

## ಕ್ರಿಕೆಟ್: ರುದ್ರಸಿಂಗ್ ಮಿಂಚು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರುದ್ರ ಸಿಂಗ್ (103 ರನ್, 28ಕ್ಕೆ 3 ವಿಕೆಟ್) ಅವರ ಆಲ್‌ರೌಂಡ್ ಆಟದ ಬಲದಿಂದ ಸೆಂಚುರಿ ಕ್ರಿಕೆಟರ್ಸ್ ತಂಡದವರು ಕೆಎಸ್‌ಸಿಎ ಗುಂಪು 1ರಿಂದ ಮೂರನೇ ಡಿವಿಷನ್ 16 ವರ್ಷದೊಳಗಿನವರ ಅಂತರಕ್ಲಬ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿದರು.

ಇಲ್ಲಿ ನಡೆದ ಪಂದ್ಯದಲ್ಲಿ ಜೈದೂರ್ ಕ್ರಿಕೆಟರ್ಸ್ ಎದುರು 182 ರನ್‌ಗಳಿಂದ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ಸೆಂಚುರಿ ಕ್ರಿಕೆಟರ್ಸ್ 49.3 ಓವರ್‌ಗಳಲ್ಲಿ 312 ರನ್ ಗಳಿಸಿತು. ಗುರಿ ಬೆನ್ನತ್ತಿದ ಜೈದೂರ್ 29.4 ಓವರ್‌ಗಳಲ್ಲಿ 130 ರನ್ ಗಳಿಸಿ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರ್: ಸೆಂಚುರಿ ಕ್ರಿಕೆಟರ್ಸ್: 49.3 ಓವರ್‌ಗಳಲ್ಲಿ 312 (ಇಶಾನ್ ಯತಿರಾಜ್ 31, ರುದ್ರ ಸಿಂಗ್ 103, ಪ್ರಜ್ವಲ್ ಜಿ. 78, ಆದಿತ್ಯ ಎಂ.33, ಮೊಹಮ್ಮದ್ ಅಕೀಬ್ 43ಕ್ಕೆ 2; ಅಕರ್ಷ್ ಮಯ್ಯ 57ಕ್ಕೆ 3). ಜೈದೂರ್ ಕ್ರಿಕೆಟರ್ಸ್: 29.4 ಓವರ್‌ಗಳಲ್ಲಿ 130 (ಆಕರ್ಷ್ ಮಯ್ಯ 46, ರುದ್ರ ಸಿಂಗ್ 28ಕ್ಕೆ 3, ಕುಶ್ ಜೈನ್ 71ಕ್ಕೆ 5, ನೇಸರ ಪಿ. ಅಥಣಿ 18ಕ್ಕೆ 2). ಫಲಿತಾಂಶ: ಸೆಂಚುರಿ ಕ್ರಿಕೆಟರ್ಸ್‌ಗೆ 182 ರನ್‌ಗಳ ಜಯ

ಜುಪಿಟರ್ ಕ್ರಿಕೆಟರ್ಸ್: 49.2 ಓವರ್‌ಗಳಲ್ಲಿ 159 (ಮೋಹಿತ್ ಪ್ರಕಾಶ್ 31, ಮೋನಿಶ್ ಜಿ. 23; ನಿತಿನ್ ರೆಡ್ಡಿ 24ಕ್ಕೆ 3, ಸಾಕೇತ್ ಕೆ.ಎ. 33ಕ್ಕೆ 2). ಫ್ರೆಂಡ್ಸ್ ಯೂನಿಯನ್ ಸಿಸಿ (2): 38.1 ಓವರ್‌ಗಳಲ್ಲಿ 3ಕ್ಕೆ 160 (ಶೌರ್ಯ ಮನೀಷ್ ಔಟಾಗದೆ 51, ಅಂಶ್ ಸಿಂಗ್ 37; ಮೋನಿಶ್ ಜಿ. 14ಕ್ಕೆ 2). ಫಲಿತಾಂಶ: ಫ್ರೆಂಡ್ಸ್ ಯೂನಿಯನ್‌ಗೆ ಏಳು ವಿಕೆಟ್‌ಗಳ ಜಯ.

ಬೆಂಗಳೂರು ಆಕೇಷನಲ್ಸ್: 50 ಓವರ್‌ಗಳಲ್ಲಿ 3 ವಿಕೆಟ್‌ಗೆ 371 (ಮಾನಸ್ ಎ. ಬಾಲಾಜಿ 81, ವಜ್ರ ಎಸ್. 38, ಆಶಿತ್ ಶಿವಣ್ಣ ಔಟಾಗದೆ 123, ಸಿದ್ಧಾರ್ಥ್ ಎ. ಔಟಾಗದೆ 103). ಹನುಮಂತನಗರ ಸಿಸಿ: 38.2 ಓವರ್‌ಗಳಲ್ಲಿ 135 (ಕಿಶನ್ ಜೆ. 24, ರಜಾ ಮಹಮೂದ್ 40; ದಿವಿತ್ ವಿಶ್ವನಾಥ್ 28ಕ್ಕೆ 2, ಆಯಾನ್ ಶರ್ಮೊದ್ ಕುಮಾರ್ 21ಕ್ಕೆ 3, ಆದರ್ಶ್ ದಾಸ್ 32ಕ್ಕೆ 2). ಫಲಿತಾಂಶ: ಬೆಂಗಳೂರು ಆಕೇಷನಲ್ಸ್ ತಂಡಕ್ಕೆ 236 ರನ್‌ಗಳ ಜಯ.